ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

ಕರ್ನಾಟಕ ಸರ್ಕಾರ

2025ನೇ ವರ್ಷದ ವರದಿ ಸಂಖ್ಯೆ– 10

(ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ – ವಾಣಿಜ್ಯ)

ವಿಷಯಸೂಚಿ

ಕಂಡಿಕೆ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
	ಮುನ್ನುಡಿ	iii
	ಕಾರ್ಯನಿರ್ವಹಣಾ ಸಾರಾಂಶ	v
	ಅಧ್ಯಾಯ I– ಪರಿಚಯ	
1.1	ಪರಿಚಯ	1
1.2	ಸಾಂಸ್ಥಿಕ ರಚನೆ	3
1.3	ಲೆಕ್ಕಪರಿಶೋಧನಾ ಉದ್ದೇಶಗಳು	4
1.4	ಲೆಕ್ಕಪರಿಶೋಧನಾ ಮಾನದಂಡ	4
1.5	ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ	5
1.6	ಕೃತಜ್ಞತೆ	5
1.7	ಅಧ್ಯಾಯಗಳು	5
	ಅಧ್ಯಾಯ II– ಯೋಜನೆ ಮತ್ತು ಹಣಕಾಸು ನಿರ್ವಹಣೆ	
2.1	**ಯೋಜನೆಗಳ ಯೋಜನೆ ಮತ್ತು ವಿನ್ಯಾಸ**	7
2.1.1	ಡಿಪಿಆರ್‌ಗಳಲ್ಲಿ ಪೂರ್ಣಗೊಳಿಸುವ ಅವಧಿಯನ್ನು ನಿರ್ದಿಷ್ಟಪಡಿಸದಿರುವುದು	11
2.1.2	ಸಂಗ್ರಹಣಾ ಜಲಾಶಯದ ಸ್ಥಳವನ್ನು ಅಂತಿಮಗೊಳಿಸುವಲ್ಲಿ ಅತಿಯಾದ ವಿಳಂಬ.	12
2.1.3	ಲಭ್ಯವಿರುವ ಇಳುವರಿಯ ತಪ್ಪಾದ ಲೆಕ್ಕಾಚಾರ	14
2.2	**ಹಣಕಾಸು ನಿರ್ವಹಣೆ**	18
2.2.1	ಸರ್ಕಾರದಿಂದ ತಾತ್ಪೂರ್ತಿಕ ಆಧಾರದ ಮೇಲೆ ಬಜೆಟ್ ಅನುದಾನಗಳ ಹಂಚಿಕೆ	19
2.2.2	ಯೋಜನೆಯನ್ನು ಪೂರ್ಣಗೊಳಿಸಲು ಹಣಕಾಸು ಸಂಗ್ರಹಿಸುವಲ್ಲಿ ಅನಿಶ್ಚಿತತೆ	19
	ಅಧ್ಯಾಯ III–ಯೋಜನೆಯ ಅನುಷ್ಠಾನ	
3.1	**ಯೋಜನೆಯ ಅಡಿಯಲ್ಲಿ ಕಾಮಗಾರಿಗಳ ಅಸಮಕಾಲಿಕತೆ.**	21
3.1.1	ಭೂಸ್ವಾಧೀನದಲ್ಲಿ ವಿಳಂಬ	23
3.1.2	ಹಂತ–IIರ ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾದ ಕಾರಣ, ₹2965.77 ಕೋಟಿ ಮೌಲ್ಯದ ಆಸ್ತಿಗಳು ಕಾರ್ಯೋನ್ಮುಖವಾಗಿಲ್ಲ.	26
3.2	**ಗುತ್ತಿಗೆ ನಿರ್ವಹಣೆ**	28
3.2.1	ಟೆಂಡರ್ ಪ್ರಕ್ರಿಯೆ	29
3.2.2	ಗುತ್ತಿಗೆದಾರರಿಗಾದ ಅಧಿಕ ಪಾವತಿಗಳು ಮತ್ತು ಅನರ್ಹ ಅನುಕೂಲ	30
3.3	ಬಳಕೆ ಹಕ್ಕು ಒಪ್ಪಂದದ ಮೂಲಕ ಖಾಸಗಿ ಆಸ್ತಿಯಲ್ಲಿ ಯೋಜನಾ ಕಾರ್ಯಗಳ ಅನುಷ್ಠಾನದಲ್ಲಿನ ನ್ಯೂನತೆಗಳು.	37

	ಅಧ್ಯಾಯ IV–ಮೇಲ್ವಿಚಾರಣೆ	
4.1	ಸರ್ಕಾರದ ಮಟ್ಟದಲ್ಲಿ ಮೇಲ್ವಿಚಾರಣಾ ಕಾರ್ಯವಿಧಾನದ ಅನುಪಸ್ಥಿತಿ.	39
4.2	ನಿಯಮಿತ ಮಾಸಿಕ ಬಹು ಹಂತದ ಪರಿಶೀಲನಾ ಸಭೆಗಳನ್ನು ನಡೆಸದಿರುವುದು.	40
4.3	ಕಾಮಗಾರಿಗಳ ದಾಖಲೆಗಳ ತಪಾಸಣೆ ಮತ್ತು ನಿರ್ವಹಣೆಯಲ್ಲಿ ನ್ಯೂನತೆಗಳು	40
	ಅನುಬಂಧಗಳು	45
	ಶಬ್ದಕೋಶ	49

ಅನುಬಂಧಗಳ ಪಟ್ಟಿ

ಅನುಬಂಧ ಸಂಖ್ಯೆ	ವಿಷಯಗಳು	ಕಂಡಿಕೆ	ಪುಟ ಸಂಖ್ಯೆ
1	ಒಬ್ಬರೇ ಗುತ್ತಿಗೆದಾರನಿಗೆ ಒಂದಕ್ಕಿಂತ ಹೆಚ್ಚು ಕಾಮಗಾರಿಗಳನ್ನು ನೀಡಿರುವ ವಿವರಗಳು	3.2.1	45
2	ರೈಸಿಂಗ್ ಮೇನ್‌ಗಾಗಿ ಮೈಲ್ಡ್ ಸ್ಟೀಲ್ ಪೈಪ್‌ಗಳ ಉದ್ದದ ಹೆಚ್ಚುವರಿ ನಿಬಂಧನೆಯನ್ನು ತೋರಿಸುವ ತ:ಖ್ತೆ	3.2.2.2	46
3	ಲೈನಿಂಗ್ ದಪ್ಪದ ಹೆಚ್ಚುವರಿ ನಿಬಂಧನೆಯಿಂದಾಗಿ ಹೆಚ್ಚುವರಿ ವೆಚ್ಚ	3.2.2.5	47
4	ಪೈಪ್‌ಗಳ ಪೂರೈಕೆಗಾಗಿ ಮಾಡಿದ ಮುಂಗಡ ಪಾವತಿಗಳಿಂದ ವಸೂಲಿ ಮಾಡಬೇಕಾದ ಬಡ್ಡಿಯ ವಿವರಗಳು	3.2.2.6	48

ಮುನ್ನುಡಿ

ಭಾರತದ ಸಂವಿಧಾನದ ಅನುಚ್ಛೇದ 151(2) ರ ಅಡಿಯಲ್ಲಿ, ರಾಜ್ಯ ಶಾಸನಸಭೆಯ ಮುಂದೆ ಮಂಡಿಸಲು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರವರ ವರದಿಯನ್ನು ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸಲು ಸಿದ್ಧಪಡಿಸಲಾಗಿದೆ.

ಈ ವರದಿಯು 2012–13ರಿಂದ 2022–23ರ ಅವಧಿಯನ್ನು ಒಳಗೊಂಡ "ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನ"ದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹೊರಡಿಸಿದ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಈ ಭಾಷಾಂತರಿಸಿದ ವರದಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ಕಾರ್ಯನಿರ್ವಹಣಾ

ಸಾರಾಂಶ

ಕಾರ್ಯನಿರ್ವಹಣಾ ಸಾರಾಂಶ

ನಾವು ಈ ವಿಷಯವನ್ನು ಏಕೆ ಆರಿಸಿಕೊಂಡೆವು?

ಕರ್ನಾಟಕ ರಾಜ್ಯವು ಸದಾ ಹರಿಯುವ ಪ್ರಮುಖ ನದಿಗಳಿಂದ ಆಶೀರ್ವದಿಸಲ್ಪಟ್ಟಿದ್ದು, ಅವುಗಳ ಒಟ್ಟು ವಾರ್ಷಿಕ ನೀರಿನ ಇಳುವರಿ 3440 ಸಾವಿರ ದಶಲಕ್ಷ ಘನ ಅಡಿಗಳಷ್ಟಿದೆ (ಟಿ.ಎಂ.ಸಿ). ಆದಾಗ್ಯೂ, ಮಳೆಯ ತೀವ್ರತೆಯು ಕರ್ನಾಟಕದ ಪೂರ್ವ ಮತ್ತು ಮಧ್ಯ ಪ್ರದೇಶಗಳಲ್ಲಿನ 400 ಮಿ.ಮೀ.ನಿಂದ ಪಶ್ಚಿಮ ಘಟ್ಟಗಳಲ್ಲಿನ 6500 ಮಿ.ಮೀ.ವರೆಗಿನ ವ್ಯಾಪ್ತಿಯಲ್ಲಿರುತ್ತದೆ. ಮಳೆ ನೆರಳು/ಕೊರತೆ ಪ್ರದೇಶದ ವ್ಯಾಪ್ತಿಗೆ ಬರುವ ಹಲವಾರು ಜಿಲ್ಲೆಗಳು ಮತ್ತು ತಾಲ್ಲೂಕುಗಳು ಸಹ ಇದ್ದು, ಅಲ್ಲಿ ಕುಡಿಯುವ ನೀರಿನ ತೀವ್ರ ಕೊರತೆಯಿದೆ. ಅತ್ಯಂತ ಹೆಚ್ಚು ಬಾಧಿತವಾಗಿರುವ ಜಿಲ್ಲೆಗಳೆಂದರೆ ಚಿಕ್ಕಬಳ್ಳಾಪುರ ಮತ್ತು ಕೋಲಾರ, ಅಲ್ಲಿ ಕುಡಿಯುವ ನೀರನ್ನು ಪೂರೈಸಲು ಯಾವುದೇ ಪ್ರತ್ಯೇಕ ಯೋಜನೆ ಲಭ್ಯವಿರುವುದಿಲ್ಲ. ಕರ್ನಾಟಕದ ಸಂಪೂರ್ಣ ನದಿ ವ್ಯವಸ್ಥೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ಇಳುವರಿಯ ಪ್ರಮುಖ ಭಾಗವನ್ನು ಹೊಂದಿದ್ದರೂ, ಕಿರಿದಾದ ಕರಾವಳಿ ಪಟ್ಟಿಯ ಕಾರಣದಿಂದಾಗಿ, ನೀರಿನ ಬಹುಪಾಲು ಬಳಕೆಯಾಗದೆ ಸಮುದ್ರಕ್ಕೆ ಹರಿದುಹೋಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಹಾಸನ ಜಿಲ್ಲೆಯ ಸಕಲೇಶಪುರದಿಂದ (ಪಶ್ಚಿಮದಲ್ಲಿ) ಚಿಕ್ಕಬಳ್ಳಾಪುರ/ಕೋಲಾರ ಜಿಲ್ಲೆಗಳಿಗೆ (ಪೂರ್ವದಲ್ಲಿ) ಮಳೆಗಾಲದಲ್ಲಿ (ಜೂನ್‌ನಿಂದ ನವೆಂಬರ್‌ವರೆಗು) ನೀರನ್ನು ಹರಿಸಲು ಪ್ರಸ್ತಾವಿಸಿತು (ಜುಲೈ 2012) ಮತ್ತು ₹8323.50 ಕೋಟಿ ಅಂದಾಜು ವೆಚ್ಚದಲ್ಲಿ "ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ"ಗೆ ಅನುಮೋದನೆ ನೀಡಿತು. ಹಾಸನ ಜಿಲ್ಲೆಯ ಸಕಲೇಶಪುರದ ಬಳಿ ಹುಟ್ಟುವ ಎತ್ತಿನಹೊಳೆ ಮತ್ತು ಅದರ ಉಪನದಿಗಳಿಂದ 24.01 ಟಿ.ಎಂ.ಸಿ ನೀರನ್ನು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಹರಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ಆರಂಭದಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಮೂಲಕ ಜಾರಿಗೆ ತರಲಾದ ಈ ಯೋಜನೆಯನ್ನು ವಿಶ್ವೇಶ್ವರಯ್ಯ ಜಲನಿಗಮ ನಿಯಮಿತವು (ವಿಜೆಎನ್‌ಎಲ್) ರಚನೆಯಾದ ನಂತರ ಅದಕ್ಕೆ ವರ್ಗಾಯಿಸಲಾಯಿತು (ನವೆಂಬರ್ 2016).

ಈ ಕೆಳಗಿನವುಗಳನ್ನು ನಿರ್ಧರಿಸಲು "ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನ" ಕುರಿತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಜೂನ್ 2023ರಿಂದ ಅಕ್ಟೋಬರ್ 2023ರ ಅವಧಿಯಲ್ಲಿ ಕೈಗೊಳ್ಳಲಾಯಿತು (i) ನೀರಿನ ಲಭ್ಯತೆಯನ್ನು ಸರಿಯಾಗಿ ಮೌಲ್ಯಮಾಪನ ಮಾಡಲಾಯಿತೇ, ಆಯವ್ಯಯ ಮತ್ತು ಕಾಲಮಿತಿಗಳು ವಾಸ್ತವಿಕವಾಗಿದ್ದವೇ ಮತ್ತು ಕಾಮಗಾರಿಗಳ ಎಲ್ಲಾ ಘಟಕಗಳಿಗೆ ಪರಿಣಾಮಕಾರಿ ಯೋಜನೆಗಳನ್ನು ಸಿದ್ಧಪಡಿಸಲಾಗಿತ್ತೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು; (ii) ಯೋಜನೆಯ ವಿವಿಧ ಘಟಕಗಳನ್ನು ಮಿತವ್ಯಯವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಾಯಿತೇ ಮತ್ತು ಸಂಗ್ರಹಣೆ ಮತ್ತು ಕಾಲುವೆ ಜಾಲಕ್ಕಾಗಿ ಮೂಲಸೌಕರ್ಯಗಳ ಸೃಷ್ಟಿಯನ್ನು ಸಮನ್ವಯಗೊಳಿಸಲಾಯಿತೆ ಹಾಗೂ ಸಮಕಾಲಿಕವಾಗಿದೆಯೇ; (iii) ಸಾಕಷ್ಟು ಮೇಲ್ವಿಚಾರಣೆ ಮತ್ತು ನಿಯಂತ್ರಣ ವ್ಯವಸ್ಥೆ ಜಾರಿಯಲ್ಲಿತ್ತೇ ಮತ್ತು (iv) ಆಲೋಚಿಸಿದಂತೆ, ಉದ್ದೇಶಿತ ಫಲಾನುಭವಿಗಳಿಗೆ ಕುಡಿಯುವ ನೀರಿನ ಪೂರೈಕೆಯನ್ನು ಸಾಧಿಸಲಾಯಿತೆ.

ನಾವು ಏನನ್ನು ಗಮನಿಸಿದೆವು?

ಯೋಜನೆ ಮತ್ತು ಹಣಕಾಸು ನಿರ್ವಹಣೆ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ (ಯೋಜನೆ) ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಎರಡು ಬಾರಿ ಪರಿಷ್ಕರಿಸಲಾಯಿತು, ಅಂದರೆ ಮೂಲತಃ ಅನುಮೋದಿಸಲಾದ (ಜುಲೈ 2012) ₹8,323.50 ಕೋಟಿಗಳಿಂದ 2014ರ ಫೆಬ್ರವರಿಯಲ್ಲಿ ₹12,912.36 ಕೋಟಿಗಳಿಗೆ ಮತ್ತು 2023ರ ಜನವರಿಯಲ್ಲಿ ಮತ್ತೆ ₹23,251.66 ಕೋಟಿಗಳಿಗೆ ಪರಿಷ್ಕರಿಸಲಾಯಿತು. ಎರಡು ಹಂತಗಳಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿ ಮಾರ್ಚ್ 2014ರಿಂದ ವಿವಿಧ ಪ್ಯಾಕೇಜ್‌ಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಯಿತು. ಆದಾಗ್ಯೂ, ಯೋಜನಾ ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿದ್ದವು ಮತ್ತು ಪೂರ್ಣಗೊಳ್ಳಲು ಮತ್ತು ಉದ್ದೇಶಿತ ಪ್ರಯೋಜನದ ವಿತರಣೆಗೆ ಇನ್ನೂ ಕಾಲಾವಕಾಶ ಬೇಕಾಗಿರುತ್ತದೆ. ಆಶ್ಚರ್ಯಕರವಾಗಿ, ಯಾವುದೇ

ಡಿ.ಪಿ.ಆರ್.ಗಳು ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿತ ದಿನಾಂಕವನ್ನು ನಿಗದಿಪಡಿಸಿರಲಿಲ್ಲ. ಲೆಕ್ಕಪರಿಶೋಧನಾ ಅವಲೋಕನದ ಆಧಾರದ ಮೇಲೆ, ವಿಜೆಎನ್ಎಲ್ ನಿರ್ದೇಶಕರ ಮಂಡಳಿಯು ಯೋಜನೆಯನ್ನು ಪೂರ್ಣಗೊಳಿಸಲು 01 ನವೆಂಬರ್ 2026 ಎಂದು ನಿಗದಿಪಡಿಸಲು ನಿರ್ಧರಿಸಿತು (ಅಕ್ಟೋಬರ್ 2023).

ಬೇಸಿಗೆಯ ತಿಂಗಳುಗಳಲ್ಲಿ ನಿರಂತರ ನೀರು ಸರಬರಾಜು ಮಾಡಲು ಯೋಜನೆಯ ಅತ್ಯಗತ್ಯ ಅಂಶವಾಗಿದ್ದ ಸಮತೋಲನ ಜಲಾಶಯದ ಸ್ಥಳವನ್ನು ಎರಡು ಬಾರಿ ಬದಲಾಯಿಸಿರುವುದನ್ನು ಮತ್ತು ಅದರ ಸಾಮರ್ಥ್ಯವನ್ನು ಆರಂಭದಲ್ಲಿ ಪ್ರಸ್ತಾಪಿಸಲಾದ ಹತ್ತು ಟಿಎಮ್‌ಸಿಯಿಂದ ಎರಡು ಟಿಎಮ್‌ಸಿಗೆ ಗಣನೀಯವಾಗಿ ಕಡಿಮೆ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಕ್ಕೆ ಮಳೆಗಾಲದ ತಿಂಗಳುಗಳಲ್ಲಿ ಹೆಚ್ಚಿನ ನೀರನ್ನು ಪಂಪ್ ಮಾಡುವ ಅಗತ್ಯವಿರುತ್ತದೆ ಮತ್ತು ತತ್ಪರಿಣಾಮವಾಗಿ ವಿನ್ಯಾಸ ಬದಲಾವಣೆಗಳು ₹621.45 ಕೋಟಿಗಳ ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.

ಯೋಜನೆಗೆ ಲಭ್ಯವಿರುವ ನೀರಿನ ಇಳುವರಿಯನ್ನು ಅಂದಾಜು ಮಾಡಲು ಅಳವಡಿಸಿಕೊಳ್ಳಲಾದ ಖಾಸಗಿ ಮಾಪನ ಕೇಂದ್ರಗಳಿಂದ ಪಡೆದ ಮಳೆಯ ದತ್ತಾಂಶವು ಜಲಾನಯನ ಪ್ರದೇಶದಲ್ಲಿ ಮತ್ತು ಸುತ್ತಮುತ್ತಲಿನ ಸರ್ಕಾರಿ ಮಾಪನ ಕೇಂದ್ರಗಳ ಲಭ್ಯವಿರುವ ಮಳೆ ದತ್ತಾಂಶಕ್ಕೆ ಹೋಲಿಸಿದರೆ ಹೆಚ್ಚಿನ ಮಟ್ಟದಲ್ಲಿತ್ತು ಎಂಬುದನ್ನು ಗಮನಿಸಲಾಯಿತು. 2018ರಿಂದ 2023ರವರೆಗೆ ಐದು ವರ್ಷಗಳ ಕಾಲ ಎತ್ತಿನಹೊಳೆ ಮತ್ತು ಅದರ ಉಪನದಿಗಳಿಗೆ ಅಡ್ಡಲಾಗಿ ನಿರ್ಮಿಸಲಾದ ಎಂಟು ವೀಯರ್‌ಗಳ ವಾಸ್ತವಿಕ ದಾಖಲಾದ ಹರಿವಿನ ದತ್ತಾಂಶವನ್ನು ಹೋಲಿಕೆ ಮಾಡಿದಾಗ, ವೀಯರ್‌ಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣವು ಡಿಪಿಆರ್‌ಗಳಲ್ಲಿ ಪರಿಗಣಿಸಲಾದ ಅಂದಾಜು 32.15 ಟಿಎಮ್‌ಸಿಗೆ ಪ್ರತಿಯಾಗಿ 7.20 ಟಿಎಮ್‌ಸಿಯಿಂದ 24.70 ಟಿಎಮ್‌ಸಿ ವ್ಯಾಪ್ತಿಯಲ್ಲಿದ್ದಿತು ಎಂಬುದನ್ನು ತಿಳಿಯಪಡಿಸಿತು.

2018–19ರಿಂದ 2022–23ರ ಅವಧಿಯಲ್ಲಿ ಯೋಜನೆಗೆ ಆಯವ್ಯಯ ಅವಕಾಶದಲ್ಲಿ ಕೇವಲ ಶೇಕಡಾ 25ರಿಂದ 54ರಷ್ಟನ್ನು ಮಾತ್ರ ಸರ್ಕಾರವು ಒದಗಿಸಿದ್ದರಿಂದ ಈ ಯೋಜನೆಯು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿತು. ಯೋಜನೆಯ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಾದ ಹೊಸ ಸಾಲಗಳನ್ನು ಪಡೆಯಲು ವಿಜೆಎನ್ಎಲ್ ಮಾಡಿದ ಕೋರಿಕೆಯು (ಜೂನ್ 2023) ಸರ್ಕಾರದ ಅನುಮೋದನೆಗೆ ಕಾಯ್ದಿರಿಸಲಾಗಿದೆ (ಮಾರ್ಚ್ 2024). ತತ್ಪರಿಣಾಮವಾಗಿ, ಮಾರ್ಚ್ 2024ರಲ್ಲಿದ್ದಂತೆ ಯೋಜನೆಯನ್ನು ಪೂರ್ಣಗೊಳಿಸಲು ಅಗತ್ಯವಿರುವ ₹7,954.63 ಕೋಟಿಗಳ ಬಗ್ಗೆ ಆರ್ಥಿಕ ಅನಿಶ್ಚಿತತೆಯನ್ನು ವಿಜೆಎನ್ಎಲ್ ಎದುರಿಸುತ್ತಿದೆ.

ಯೋಜನೆಯ ಅನುಷ್ಠಾನ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಲಿಫ್ಟ್ ಮಾಡಿದ ನೀರನ್ನು ಸಾಗಿಸಲು ಹಂತ–1ರಲ್ಲಿ ಲಿಫ್ಟಿಂಗ್ ಘಟಕಗಳು ಮತ್ತು ಎಲೆಕ್ಟ್ರೋ–ಮೆಕ್ಯಾನಿಕಲ್ ಕಾಮಗಾರಿಗಳು ಮತ್ತು ಹಂತ–2ರಲ್ಲಿ ಗುರುತ್ವಾಕರ್ಷಣೆ/ಫೀಡರ್ ಕಾಲುವೆ ಕಾಮಗಾರಿಗಳನ್ನು ಒಳಗೊಂಡ ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಯಿತು. ಮಾರ್ಚ್ 2014ರಲ್ಲಿ ವಹಿಸಲಾದ ಹಂತ–1ರಲ್ಲಿನ ಎಂಎಸ್ ರೈಸಿಂಗ್ ಮೇನ್ (ಪೈಪ್ ಲೈನ್) ನಿರ್ಮಾಣ ಸೇರಿದಂತೆ ಸಿವಿಲ್ ಕಾಮಗಾರಿಗಳು ಮಾರ್ಚ್ 2019 ರಲ್ಲಿದ್ದಂತೆ ಪೂರ್ಣಗೊಂಡಿದ್ದವು. ಆದರೆ, ಹಂತ–2ರ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ವಿಜೆಎನ್ಎಲ್ ನ ಕಾರ್ಯನಿರ್ವಹಣಾ ವಿಭಾಗಗಳು ಒಂದು ವರ್ಷಕ್ಕೂ ಹೆಚ್ಚು ವಿಳಂಬದ ನಂತರ ಭೂಸ್ವಾಧೀನಕ್ಕಾಗಿ (ಫೆಬ್ರವರಿ 2015) ಪ್ರಸ್ತಾವನೆಗಳನ್ನು ಸಲ್ಲಿಸಲು ಪ್ರಾರಂಭಿಸಿದವು ಮತ್ತು ಡಿಪಿಆರ್–2 ಅನುಮೋದನೆಯ (ಫೆಬ್ರವರಿ 2014) ಮತ್ತು ಹಂತ–1ರ ಕಾಮಗಾರಿಗಳ ಪ್ರಾರಂಭದಿಂದ (ಮಾರ್ಚ್ 2014) ಎರಡು ವರ್ಷಗಳ ನಂತರ ಸಾಮಾಜಿಕ ಪರಿಣಾಮ ಮೌಲ್ಯಮಾಪನ (ಎಸ್ಐಎ) ಕಾಮಗಾರಿಗಳನ್ನು ಪ್ರಾರಂಭಿಸಲಾಯಿತು (ಜುಲೈ 2016). ಇದು ಡಿಸೆಂಬರ್ 2017ರ ನಂತರ ವಹಿಸಲಾದ ಎರಡನೇ ಹಂತದ ಕಾಮಗಾರಿಗಳಿಗಿನ ಭೂಸ್ವಾಧೀನ ಪ್ರಕ್ರಿಯೆಯ ಮೇಲೆ ಮತ್ತಷ್ಟು ಪರಿಣಾಮ ಬೀರಿತು ಮತ್ತು ಕಾಮಗಾರಿಗಳು ಪ್ರಗತಿಯಲ್ಲಿದವು (ಮಾರ್ಚ್ 2024). ಹಂತ–1 ಮತ್ತು ಹಂತ–2ರ ಕಾಮಗಾರಿಗಳ ನಡುವೆ ಸಮನ್ವಯದ ಅನುಪಸ್ಥಿತಿಯು ಅವಿಚ್ಛಿನ್ನ ಕಾರ್ಯಗತಗೊಳಿಸುವಿಕೆಯಲ್ಲಿ ಪರಿಣಮಿಸಿ ತತ್ಪರಿಣಾಮವಾಗಿ

ಬಿಡಿಬಿಡಿಯಾಗಿ ಮೂಲಸೌಕರ್ಯಗಳ ಸೃಷ್ಟಿಯಾಯಿತು. ಹಂತ–1ರಡಿಯಲ್ಲಿ ರಚಿಸಲಾದ ಸ್ವತ್ತುಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ವೆಚ್ಚ ಮಾಡಿದ ₹2,965.77 ಕೋಟಿಗಳನ್ನು ಉಪಯುಕ್ತಗೊಳಿಸಲಾಗಲಿಲ್ಲ. ಪಂಪ್‌ಗಳು/ಮೋಟಾರ್‌ಗಳಂತಹ ಎಲೆಕ್ಟ್ರೋ–ಮೆಕ್ಯಾನಿಕಲ್ ಉಪಕರಣಗಳನ್ನು ಪರೀಕ್ಷಿಸಲು/ನಿಯೋಜಿಸಲು ಸಾಧ್ಯವಾಗಲಿಲ್ಲ ಮತ್ತು ಅವುಗಳ ಉಪಯುಕ್ತ ಜೀವಿತಾವಧಿಯ ಗಮನಾರ್ಹ ಭಾಗವನ್ನು ಬಳಸದೆ ನಿಷ್ಕ್ರಿಯವಾಗಿ ಇರಿಸಲಾಯಿತು.

ಭೂಸ್ವಾಧೀನಕ್ಕಿಂತ ಮುಂಚಿತವಾಗಿಯೇ ಹಂತ–IIರ ಅಡಿಯಲ್ಲಿ ಗುರುತ್ವಾಕರ್ಷಣಾ ಕಾಲುವೆ ಕಾಮಗಾರಿಗಳನ್ನು (ಡಿಸೆಂಬರ್ 2017 ಮತ್ತು ಮಾರ್ಚ್ 2023 ರ ನಡುವೆ) ₹ 8609.23 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲಾಯಿತು. ಭೂಸ್ವಾಧೀನವಾಗದಿರುವುದರಿಂದ ಹಾಗು ರೈತರ ಪ್ರತಿಭಟನೆಗಳಗಳಿಂದಾಗಿ (ಮಾರ್ಚ್ 2024), ಕಾಮಗಾರಿಗಳು ಅಪೂರ್ಣಗೊಂಡಿವೆ (ಶೇಕಡ 4 ರಿಂದ 92ರವರೆಗೆ ಬಾಕಿ ಉಳಿದಿವೆ). ಸಮತೋಲನ ಜಲಾಶಯದ ನಿರ್ಮಾಣದ ಕಾಮಗಾರಿಯನ್ನು ₹592.35 ಕೋಟಿ ಮೊತ್ತದ ಟೆಂಡರ್ ವೆಚ್ಚದಲ್ಲಿ ಮಂಜೂರು ಮಾಡಿದ್ದರೂ (ಫೆಬ್ರವರಿ 2018), ಭೂಮಿಯ ಅಲಭ್ಯತೆಯಿಂದಾಗಿ ಅದನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ (ಮಾರ್ಚ್ 2024). ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರನ್ನು ಕೊಂಡೊಯಲು ಗುರುತ್ವಾಕರ್ಷಣಾ ಕಾಲುವೆ ಮತ್ತು ಸಮತೋಲನ ಜಲಾಶಯದ ಕಾಮಗಾರಿ ಪೂರ್ಣಗೊಳ್ಳುವುದು ಅತ್ಯಗತ್ಯವಾಗಿದ್ದರಿಂದ, ಹಂತ–I (₹2965.77 ಕೋಟಿ) ಅಡಿಯಲ್ಲಿ ರಚಿಸಲಾದ ಸ್ವತ್ತುಗಳು ನಿಷ್ಕ್ರಿಯವಾಗಿದ್ದವು (ಮಾರ್ಚ್ 2024).

ಗುರುತ್ವಾಕರ್ಷಣಾ ಕಾಲುವೆ ಮತ್ತು ಫೀಡರ್ ಕಾಲುವೆ ಕಾಮಗಾರಿಗಾಗಿ (ಹಂತ–II), ಕಾಮಗಾರಿಗಳನ್ನು ನೀಡುವಲ್ಲಿ ಕ್ರಮವಾಗಿ ಮೂರು ವರ್ಷಗಳು ಮತ್ತು ಐದು ವರ್ಷಗಳಿಗಿಂತ ಹೆಚ್ಚು ವಿಳಂಬವಾಗಿದೆ. ಈ ಕಾಮಗಾರಿಗಳು ಇನ್ನೂ ಪೂರ್ಣಗೊಳ್ಳಬೇಕಾಗಿರುತ್ತದೆ (ಡಿಸೆಂಬರ್ 2023).

ಯೋಜನೆಯ ಗುತ್ತಿಗೆ ನಿರ್ವಹಣೆಯಲ್ಲಿ, ಪ್ರಮಾಣಿತ ಟೆಂಡರ್ ದಾಖಲೆಯನ್ನು ಅಳವಡಿಸಿಕೊಳ್ಳದಿರುವುದು, ಗುತ್ತಿಗೆದಾರರ ಬಿಡ್ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡದಿರುವುದು ಮತ್ತು ₹87.08 ಕೋಟಿಗಳಿಂದ ₹1,135.03 ಕೋಟಿಗಳ ವ್ಯಾಪ್ತಿಯ ಹೆಚ್ಚಿನ ಮೌಲ್ಯದ ಗುತ್ತಿಗೆಗಳಿಗೆ ಸಾಕಷ್ಟು ಬಿಡ್ಡಿಂಗ್ ಸಮಯವಿಲ್ಲದಿರುವುದು ಮುಂತಾದ ಟೆಂಡರ್ ಪ್ರಕ್ರಿಯೆಯಲ್ಲಿನ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆರ್ಥಿಕ ಸಾಮರ್ಥ್ಯ, ಬಿಡ್ ಸಾಮರ್ಥ್ಯ ಮತ್ತು ಕೆಲಸದ ಅನುಭವವನ್ನು ಮೌಲ್ಯಮಾಪನ ಮಾಡದೆಯೇ ಶೇಕಡಾ ಎಂಬತ್ತರಷ್ಟು ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ನೀಡಲಾಗಿದೆ. ಇದು ಕೆಲಸವು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳದಿರುವ ಅಪಾಯವನ್ನು ಒಡ್ಡಿತು. ಇದಲ್ಲದೆ, ಶೇಕಡ ಅರವತ್ತೇಳರಷ್ಟು ಕಾಮಗಾರಿಗಳನ್ನು (₹14,805.80 ಕೋಟಿ) ಕೇವಲ ಏಳು ಗುತ್ತಿಗೆದಾರರಿಗೆ ನೀಡಲಾಯಿತು ಮತ್ತು ಒಬ್ಬ ಗುತ್ತಿಗೆದಾರನಿಗೆ ₹5,216.58 ಕೋಟಿ ಮೊತ್ತದ 11 ಗುತ್ತಿಗೆಗಳನ್ನು ನೀಡಲಾಗಿದೆ. ವಿಜೆಎನ್‌ಎಲ್ ಇಎಂಡಿ ಮುಟ್ಟುಗೋಲು ಹಾಕಿಕೊಳ್ಳಲು ವಿಫಲವಾದದ್ದು ಗುತ್ತಿಗೆದಾರರಿಗೆ ನೀಡಿದ ಅನುಚಿತ ಲಾಭವಾಗಿದೆ.

ಪೈಪ್ ಸಾಮಗ್ರಿಗಳ ಹೆಚ್ಚುವರಿ ಪೂರೈಕೆಯನ್ನು ವಸೂಲಿ ಮಾಡುವ ನಿಭಂದನೆ ಇಲ್ಲದಿರುವುದು, ಟರ್ನ್–ಕೀ ಒಪ್ಪಂದದ ಭಾಗವಾಗಿರುವ ಕೆಲಸಗಳಿಗೆ ಹೆಚ್ಚುವರಿ ಪಾವತಿ, ಧಾರಣ ಹಣ/ಕಾರ್ಯಕ್ಷಮತೆಯ ಭದ್ರತೆಯನ್ನು ಅಕಾಲಿಕವಾಗಿ ಬಿಡುಗಡೆ ಮಾಡುವುದು, ಪೈಪ್‌ಗಳ ಪೂರೈಕೆಗಾಗಿ ಅನಿಯಮಿತ ಮುಂಗಡ ಪಾವತಿಗಳು ಮತ್ತು ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅನುಷ್ಠಾನದಿಂದಾಗಿ ಗುತ್ತಿಗೆದಾರರಿಗೆ ದೊರೆತ ಪ್ರಯೋಜನಗಳನ್ನು ವಸೂಲಿ ಮಾಡದಿರುವುದು ಮುಂತಾದ ಗುತ್ತಿಗೆದಾರರಿಗೆ ಅನುಚಿತ ಅನುಕೂಲಗಳನ್ನು ಮಾಡಿರುವ ನಿದರ್ಶನಗಳನ್ನು ಲೆಕ್ಕಪರಿಶೋಧನೆ ಗಮನಿಸಿದೆ.

ಮೇಲ್ವಿಚಾರಣೆ

ಯೋಜನೆಯ ಸಕಾಲಿಕ ಪೂರ್ಣಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು, ಗುತ್ತಿಗೆಯ ವಿವಿಧ ಹಂತಗಳಲ್ಲಿ ತಮ್ಮ ಅಧಿಕಾರಿಗಳಿಂದ ನಿರ್ದಿಷ್ಟ ಕಾಲಮಿತಿ/ಪರಿಶೀಲನಾ ವೇಳಾಪಟ್ಟಿ ಮತ್ತು ವರದಿ ಮಾಡುವಿಕೆಯನ್ನು ನಿಗದಿಪಡಿಸುವ ಮೂಲಕ ಯೋಜನೆಗಾಗಿ ಯಾವುದೇ ಮೇಲ್ವಿಚಾರಣಾ ವ್ಯವಸ್ಥೆ/ನೀತಿಯನ್ನು

ಸರ್ಕಾರ/ವಿಜೆಎನ್‌ಎಲ್ ನಿಗದಿಪಡಿಸಿರಲಿಲ್ಲ. ಪರಿಣಾಮಕಾರಿ ಮೇಲ್ವಿಚಾರಣಾ ವ್ಯವಸ್ಥೆ ಇಲ್ಲದ ಕಾರಣ, ಯೋಜನೆಯ ಅನುಷ್ಠಾನದಲ್ಲಿ ಎದುರಾದ ಅಡಚಣೆಗಳನ್ನು ಪರಿಹರಿಸಲು ಸಾಧ್ಯವಾಗಲಿಲ್ಲ.

ಸರ್ಕಾರವು (ಫೆಬ್ರವರಿ 2005) ಮೂರನೇ ವ್ಯಕ್ತಿಯಿಂದ ಕಾಮಗಾರಿಗಳ ತಪಾಸಣೆ ನಡೆಸಲು ನಿರ್ದೇಶಿಸಿದ್ದರೂ, ಹಂತ–1 ಕಾಮಗಾರಿಗಳಲ್ಲಿನ ಐದು ಪ್ಯಾಕೇಜ್‌ಗಳನ್ನು ನೀಡಿದ ದಿನಾಂಕದಿಂದ ನಾಲ್ಕು ವರ್ಷಗಳ ವಿಳಂಬದ ನಂತರ (ಮಾರ್ಚ್ 2018) ಮೂರನೇ ವ್ಯಕ್ತಿಯ ಪರಿಶೀಲನೆಗಾಗಿ ಕಾಮಗಾರಿಯ ಆದೇಶವನ್ನು ನೀಡಲಾಯಿತು, ಆ ಹೊತ್ತಿಗೆ, ಎಂಎಸ್ ರೈಸಿಂಗ್ ಮುಖ್ಯ ಪೈಪ್‌ಗಳನ್ನು ಹಾಕುವ ಕೆಲಸವನ್ನು ಒಳಗೊಂಡಿರುವ ಭೌತಿಕ ಪ್ರಗತಿಯ ಸುಮಾರು 64 ಪ್ರತಿಶತವನ್ನು ಸಾಧಿಸಲಾಗಿತ್ತು. ಹೀಗಾಗಿ, ಈ ಹಾಕಿದ ಪೈಪ್‌ಗಳ ಮೇಲೆ ಅಲ್ಟ್ರಾಸಾನಿಕ್ ಪರೀಕ್ಷೆಗಳು, ಡೈ ಪೆನೆಟ್ರೇಶನ್ ಪರೀಕ್ಷೆ ಮತ್ತು ರೇಡಿಯಾಗ್ರಫಿ ಪರೀಕ್ಷೆಯಂತಹ ಪರೀಕ್ಷೆಗಳನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಹಂತ–II ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನ ಒಪ್ಪಂದ ನಿರ್ವಹಣಾ ಮಾಡ್ಯೂಲ್‌ನಲ್ಲಿ ಒದಗಿಸಲಾದ ಸೌಲಭ್ಯವನ್ನು ಬಳಸಿಕೊಳ್ಳುವ ಬದಲು, ಅಳತೆಗಳನ್ನು ಸಡಿಲವಾದ ಎಕ್ಸೆಲ್ ಸ್ಪ್ರೆಡ್‌ಶೀಟ್‌ಗಳಲ್ಲಿ ದಾಖಲಿಸಲಾಗಿದೆ. ಈ ಎಕ್ಸೆಲ್ ಹಾಳೆಗಳು ಮಾರ್ಪಾಡಾಗುವ ಸಾಧ್ಯತೆ ಇರುತ್ತದೆ.

ಹೀಗಾಗಿ, ಬರಪೀಡಿತ ಜಿಲ್ಲೆಗಳಾದ ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಕುಡಿಯುವ ನೀರು ಒದಗಿಸಲು ರೂಪಿಸಲಾದ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯು 12 ವರ್ಷಗಳಿಗೂ ಹೆಚ್ಚು ಕಾಲ ನೆನೆಗುದಿಗೆ ಬಿದ್ದಿದ್ದು, ಸರ್ಕಾರವು ಪೂರ್ಣಗೊಳಿಸಲು ಗಡುವನ್ನು ನಿಗದಿಪಡಿಸಲು ಸಾಧ್ಯವಾಗಲಿಲ್ಲ. ಅಕ್ಟೋಬರ್ 2023 ರಲ್ಲಿ ಮಾತ್ರ, ವಿಜೆಎನ್‌ಎಲ್‌ನ ನಿರ್ದೇಶಕರ ಮಂಡಳಿಯು ಯೋಜನೆಯ ಪೂರ್ಣಗೊಳಿಸುವಿಕೆಯ ಗುರಿ ದಿನಾಂಕವನ್ನು ನವೆಂಬರ್ 01, 2026 ಎಂದು ನಿಗದಿಪಡಿಸಲು ನಿರ್ಧರಿಸಿತು. ಸಮತೋಲನ ಜಲಾಶಯದ ಸ್ಥಳ ಮತ್ತು ಸಾಮರ್ಥ್ಯವನ್ನು ಅಂತಿಮಗೊಳಿಸುವಲ್ಲಿ ಅತಿಯಾದ ವಿಳಂಬ, ಹಣಕಾಸಿನ ಮೂಲದ ಬಗ್ಗೆ ಅನಿಶ್ಚಿತತೆ, ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ದೀರ್ಘ ವಿಳಂಬ ಮತ್ತು ಅನುಷ್ಠಾನದ ಸಮಯದಲ್ಲಿ ವಿವಿಧ ಅಡಚಣೆಗಳನ್ನು ಸಕಾಲಿಕವಾಗಿ ಪರಿಹರಿಸದಿರುವುದು ಮುಂತಾದ ನ್ಯೂನತೆಗಳಿಂದ ಯೋಜನೆಯು ಬಳಲುತ್ತಿತ್ತು. ಇದರ ಪರಿಣಾಮವಾಗಿ, 12 ವರ್ಷಗಳಲ್ಲಿ ₹15,297 ಕೋಟಿಗಳಷ್ಟು ದೊಡ್ಡ ವೆಚ್ಚದ ಹೊರತಾಗಿಯೂ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಉದ್ದೇಶವು ಈಡೇರಲಿಲ್ಲ.

ನಾವು ಏನು ಶಿಫಾರಸು ಮಾಡುತ್ತೇವೆ?

ಯೋಜನೆ ಮತ್ತು ಹಣಕಾಸು ನಿರ್ವಹಣೆ

ಯೋಜನೆಯ ಪೂರ್ಣಗೊಳಿಸುವಿಕೆಗಾಗಿ ವಿಜೆಎನ್‌ಎಲ್ ನಿಗದಿತ ಸಮಯವನ್ನು (ಅಂದರೆ ನವೆಂಬರ್ 01, 2026) ಪಾಲಿಸಬೇಕು ಮತ್ತು ಅದನ್ನು ಸಾಧಿಸಲು ಮಿಷನ್ ಮೋಡ್‌ನಲ್ಲಿ ಕೆಲಸ ಮಾಡಬೇಕು. ಈಗಾಗಲೇ ರಚಿಸಲಾದ ಸ್ವತ್ತುಗಳನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ಸಮತೋಲನ ಜಲಾಶಯದ ನಿರ್ಮಾಣಕ್ಕೂ ವಿಜೆಎನ್‌ಎಲ್ ಆದ್ಯತೆ ನೀಡಬೇಕು. ಯೋಜನೆಯನ್ನು ಯೋಜಿಸುವಾಗ ಹರಿವಿನ ಲೆಕ್ಕಾಚಾರ ಮತ್ತು ಇಳುವರಿಯ ಲಭ್ಯತೆಗಾಗಿ ವಿಜೆಎನ್‌ಎಲ್ ವಿಶ್ವಾಸಾರ್ಹ ದತ್ತಾಂಶವನ್ನು ಬಳಸಬೇಕು. ನಿಗದಿತ ಸಮಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಅಗತ್ಯವಾದ ಹಣವನ್ನು ಒದಗಿಸುವ ಬಗ್ಗೆ ಸರ್ಕಾರವು ಸಕಾಲಿಕ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ.

ಯೋಜನೆಯ ಅನುಷ್ಠಾನ

ಈಗಾಗಲೇ ಸೃಷ್ಟಿಯಾದ ಸ್ವತ್ತುಗಳು ನಿಷ್ಕ್ರಿಯವಾಗುವುದನ್ನು ತಪ್ಪಿಸಲು ವಿಜೆಎನ್‌ಎಲ್ ಎರಡನೇ ಹಂತದ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಬೇಕು. ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯ್ದೆಯ ನಿಬಂಧನೆಗಳನ್ನು ವಿಜೆಎನ್‌ಎಲ್ ಅನುಸರಿಸಬೇಕು ಮತ್ತು ಹೆಚ್ಚುವರಿ ಪಾವತಿಗಳನ್ನು ಕಾಲಮಿತಿಯೊಳಗೆ ವಸೂಲು ಮಾಡಬೇಕು.

ಮೇಲ್ವಿಚಾರಣೆ

ಸರ್ಕಾರದ ಮಟ್ಟದಲ್ಲಿ ಪರಿಣಾಮಕಾರಿ ಮೇಲ್ವಿಚಾರಣಾ ವ್ಯವಸ್ಥೆಯನ್ನು ರಚಿಸಬೇಕು ಮತ್ತು ವಿಜೆಎನ್ಎಲ್ ಮೂರನೇ ವ್ಯಕ್ತಿಯಿಂದ ತಪಾಸಣೆ ಮತ್ತು ನಿಗದಿತ ಪರಿಶೀಲನಾ ಸಭೆಗಳನ್ನು ನಡೆಸುವ ಮೂಲಕ ಯೋಜನೆಯ ಮೇಲ್ವಿಚಾರಣೆಯನ್ನು ಬಲಪಡಿಸಬೇಕು.

ಅಧ್ಯಾಯ–I

ಪರಿಚಯ

ಅಧ್ಯಾಯ–I

ಪರಿಚಯ

1.1 ಪರಿಚಯ

ಜಲ ಸಂಪನ್ಮೂಲಗಳ ಮೂಲಭೂತ ತತ್ವಗಳನ್ನು ವಿವರಿಸುವ 2012ರ ರಾಷ್ಟ್ರೀಯ ಜಲ ನೀತಿಯು, ಸುರಕ್ಷಿತ ಕುಡಿಯುವ ನೀರನ್ನು ಕುಡಿಯಲು ಮತ್ತು ನೈರ್ಮಲ್ಯಕ್ಕಾಗಿ ಬಳಸಲು ಪೂರ್ವಭಾವಿ ಅಗತ್ಯಗಳಾಗಿ ಪರಿಗಣಿಸಬೇಕು ಮತ್ತು ನಂತರ, ಇತರ ಮೂಲಭೂತ ದೇಶೀಯ ಅಗತ್ಯಗಳಿಗೆ ಹೆಚ್ಚಿನ ಆದ್ಯತೆಯ ಹಂಚಿಕೆ, ಆಹಾರ ಭದ್ರತೆಯನ್ನು ಸಾಧಿಸುವುದು, ಜೀವನಾಧಾರಕ್ಕಾಗಿ ಕೃಷಿಯನ್ನು ಬೆಂಬಲಿಸುವುದು ಇತ್ಯಾದಿಗಳನ್ನು ಹೇಳುತ್ತದೆ. ನೀರು ಸರಬರಾಜು ಮುಖ್ಯವಾಗಿ ಹರಿಯುವ ನೀರಿನ ಜೊತೆಗೆ ಅಂತರ್ಜಲ ಮತ್ತು ಮಳೆನೀರಿನ ಸಂಯೋಗ ಅಪೇಕ್ಷಣೀಯವಾದದ್ದು. 2002ರ ಕರ್ನಾಟಕ ರಾಜ್ಯ ಜಲ ನೀತಿಯು ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ 55 ಲೀಟರ್, ಪಟ್ಟಣಗಳಲ್ಲಿ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ 70 ಲೀಟರ್, ಪುರಸಭೆ ಪ್ರದೇಶಗಳಲ್ಲಿ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ 100 ಲೀಟರ್ ಮತ್ತು ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ ಪ್ರತಿ ವ್ಯಕ್ತಿಗೆ ಪ್ರತಿ ದಿನಕ್ಕೆ 135 ಲೀಟರ್‌ಗಳಷ್ಟು ಕುಡಿಯುವ ನೀರನ್ನು ಒದಗಿಸುವುದನ್ನು ಪ್ರಸ್ತಾಪಿಸುತ್ತದೆ.

ಕರ್ನಾಟಕ ರಾಜ್ಯವು 1,91,976 ಚದರ ಕಿಲೋಮೀಟರ್ ಪ್ರದೇಶವನ್ನು ವ್ಯಾಪಿಸಿದೆ ಮತ್ತು 6.11 ಕೋಟಿ ನಿವಾಸಿಗಳೊಂದಿಗೆ (ಜನಗಣತಿ, 2011) ವಿಸ್ತೀರ್ಣದಲ್ಲಿ ಎಂಟನೇ ಅತಿದೊಡ್ಡ ರಾಜ್ಯವಾಗಿದೆ. ರಾಜ್ಯವು ವಾರ್ಷಿಕ ಒಟ್ಟು 3440 ಟಿಎಮ್‌ಸಿ[1] ನೀರಿನ ಇಳುವರಿಯನ್ನು[2] ಹೊಂದಿರುವ ಪ್ರಮುಖ ಸಾರ್ವಕಾಲಿಕ ನದಿಗಳಿಂದ ಕೂಡಿದೆ ಹಾಗು ಇವುಗಳನ್ನು ರಾಜ್ಯದ ಏಳು ನದಿ ವ್ಯವಸ್ಥೆಗಳಲ್ಲಿ ವಿಶಾಲವಾಗಿ ವರ್ಗೀಕರಿಸಲಾಗಿದೆ, ಅವುಗಳೆಂದರೆ ಕೃಷ್ಣಾ, ಕಾವೇರಿ, ಗೋದಾವರಿ, ಪಶ್ಚಿಮಕ್ಕೆ ಹರಿಯುವ ನದಿಗಳು, ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್ ಮತ್ತು ಪಾಲಾರ್. ಮಳೆಯ ತೀವ್ರತೆಯು ಕರ್ನಾಟಕದ ಪೂರ್ವ ಮತ್ತು ಮಧ್ಯ ಭಾಗಗಳಲ್ಲಿ 400 ಮಿ.ಮೀ.ನಿಂದ ಪಶ್ಚಿಮ ಘಟ್ಟಗಳಲ್ಲಿ 6500 ಮಿ.ಮೀ.ವರೆಗಿನ ವ್ಯಾಪ್ತಿಯಲ್ಲಿದೆ. ಮಳೆಯು ಅನಿಯಮಿತವಾಗಿದೆ ಹಾಗು ತೀವ್ರ ಕುಡಿಯುವ ನೀರಿನ ಕೊರತೆ ಇರುವ ಹಲವಾರು ಜಿಲ್ಲೆಗಳು ಮತ್ತು ತಾಲ್ಲೂಕುಗಳು ಕಡಿಮೆ ಮಳೆ ಬೀಳುವ[3] ಪ್ರದೇಶದಡಿಯಲ್ಲಿ ಬರುತ್ತವೆ. ಸರಾಸರಿ ವಾರ್ಷಿಕ ಮಳೆ ಕ್ರಮವಾಗಿ 677 ಮಿ.ಮೀ ಮತ್ತು 622 ಮಿ.ಮೀ. ಆಗುವ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ಹೆಚ್ಚು ಬಾಧಿತ ಪ್ರದೇಶಗಳಾಗಿವೆ. ಅಲ್ಲದೆ, ಈ ಎರಡು ಜಿಲ್ಲೆಗಳಲ್ಲಿ 2.7 ಮಿಲಿಯನ್ ಜನಸಂಖ್ಯೆಗೆ ಕುಡಿಯುವ ನೀರನ್ನು ಪೂರೈಸಲು ಮೀಸಲಾದ ಯಾವುದೇ ಯೋಜನೆ ಇರಲಿಲ್ಲ. ಈ ಜಿಲ್ಲೆಗಳಲ್ಲಿ ಅಂತರ್ಜಲದ ದೊಡ್ಡ ಪ್ರಮಾಣದ ಶೋಷಣೆಯ ಪರಿಣಾಮವಾಗಿ, ಅಂತರ್ಜಲ ಮಟ್ಟವು 2000 ಅಡಿಗಳಿಗಿಂತ ಕಡಿಮೆಯಾಗಿದೆ. ಆರ್ಸೆನಿಕ್ ಮತ್ತು ಫ್ಲೋರೈಡ್ ಮಾಲಿನ್ಯದಿಂದಾಗಿ ಅಂತರ್ಜಲದ ಗುಣಮಟ್ಟವೂ ಕಳಪೆಯಾಗಿದೆ. ಆದ್ದರಿಂದ, ಕರ್ನಾಟಕ ಸರ್ಕಾರ ಹೆಚ್ಚು ಮಳೆಗಾಲದ ತಿಂಗಳುಗಳಲ್ಲಿ (ಜೂನ್‌ನಿಂದ ನವೆಂಬರ್‌ವರೆಗೆ) ಸಕಲೇಶಪುರದಿಂದ (ಪಶ್ಚಿಮ) ಪೂರ್ವಭಾಗದ ಜಿಲ್ಲೆಗಳಿಗೆ (ಚಿಕ್ಕಬಳ್ಳಾಪುರ/ಕೋಲಾರ) ಪ್ರವಾಹದ ನೀರನ್ನು ತಿರಿಗಿಸುವ ಮೂಲಕ ಪರ್ಯಾಯ ಮತ್ತು ವಿಶ್ವಾಸಾರ್ಹ ಮೂಲವನ್ನು ಗುರುತಿಸಿತು.

ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳು ಕರ್ನಾಟಕದ ಸಂಪೂರ್ಣ ನದಿ ವ್ಯವಸ್ಥೆಗಳಲ್ಲಿ ಇಳುವರಿಯ ಪ್ರಮುಖ ಭಾಗವನ್ನು ಹೊಂದಿವೆ ಹಾಗು ಇದು ವಾರ್ಷಿಕವಾಗಿ 3440 ಟಿಎಮ್‌ಸಿಯಲ್ಲಿ ಸುಮಾರು 2000 ಟಿಎಮ್‌ಸಿಯಾಗಿದೆ (ಶೇಕಡಾ 58). ಕಿರಿದಾದ ಕರಾವಳಿ ಪ್ರದೇಶದಿಂದಾಗಿ, ನೀರಿನ ಹೆಚ್ಚಿನ ಭಾಗವು ಬಳಕೆಯಾಗದೆ ಸಮುದ್ರಕ್ಕೆ ಸೇರುತ್ತದೆ. ಪಶ್ಚಿಮ ಘಟ್ಟದ ಸಕಲೇಶಪುರದ ಬಳಿ ಹುಟ್ಟುವ ಎತ್ತಿನಹೊಳೆ ಮತ್ತು ಅದರ ಉಪನದಿಗಳಾದ ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗಡಹಳ್ಳವನ್ನು ಗುರುತಿಸಿದ ಕರ್ನಾಟಕ ಸರ್ಕಾರವು 24.01 ಟಿಎಮ್‌ಸಿ ನೀರನ್ನು ತಿರುಗಿಸಲು ಪ್ರಸ್ತಾಪಿಸಿ, ಅದರಲ್ಲಿ ಹೆಚ್ಚಿನ ಭಾಗವನ್ನು ಚಿಕ್ಕಬಳ್ಳಾಪುರ

---

1 ಸಾವಿರ ಮಿಲಿಯನ್ ಘನ ಅಡಿಗಳು.

2 ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಅನಿಯಂತ್ರಿತ ಹರಿವಿನ ಅಳತೆಗಳಿಂದ ಪಡೆದ ಸಿಹಿನೀರಿನ ಪ್ರಮಾಣ

3 ಪರ್ವತ ಶ್ರೇಣಿಯ ಕೆಳಮುಖ ಗಾಳಿಯ ಬದಿಯಲ್ಲಿರುವ ಭೌಗೋಳಿಕ ಸ್ಥಾನದಿಂದಾಗಿ ಕಡಿಮೆ ಮಳೆಯಾಗುವ ಪ್ರದೇಶ.

ಮತ್ತು ಕೋಲಾರ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುವುದೆಂದು ತಿಳಿಸಿತು. ಗುರುತಿಸಲಾದ ನೀರಿನ ಮೂಲವು ವಿಶ್ವಾಸಾರ್ಹ ಮತ್ತು ಸುಸ್ಥಿರವಾಗಿದ್ದು, ಜೊತೆಗೆ ಇದು ಕರ್ನಾಟಕದ ಭೌಗೋಳಿಕ ವ್ಯಾಪ್ತಿಯಲ್ಲಿರುವುದರಿಂದ ನದಿ ನ್ಯಾಯಾಧಿಕರಣದ ವ್ಯಾಪ್ತಿಯಿಂದ ಮುಕ್ತವಾಗಿದೆ.

ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳು ಹಾಗೂ ಹಾಸನ, ಚಿಕ್ಕಮಗಳೂರು, ತುಮಕೂರು, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ 6.8 ಮಿಲಿಯನ್ ಜನಸಂಖ್ಯೆಗೆ ಕುಡಿಯುವ ನೀರಿನ ಅಗತ್ಯತೆಗಳನ್ನು ಪೂರೈಸಲು ಪಶ್ಚಿಮಕ್ಕೆ ಹರಿಯುವ ನದಿಗಳಿಂದ 24.01 ಟಿಎಮ್‌ಸಿ ನೀರನ್ನು ಹರಿಸಲು ಪ್ರಸ್ತಾವಿಸುವ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ (ಯೋಜನೆ) ಸರ್ಕಾರ ಅನುಮೋದನೆ ನೀಡಿತು (ಜುಲೈ 2012). ಇದು ಪ್ರತ್ಯೇಕವಾಗಿ ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ, ನೀರಾವರಿ ಚಟುವಟಿಕೆ ಅಥವಾ ವಿದ್ಯುತ್ ಉತ್ಪಾದನೆಯನ್ನು ಕಲ್ಪಿಸಿರಲಿಲ್ಲ ಮತ್ತು ನೀರಾವರಿ ಅಚ್ಚುಕಟ್ಟು[4] ಪ್ರದೇಶವೂ ಯೋಜನೆಯ ಭಾಗವಾಗಿರಲಿಲ್ಲ. ಯೋಜನೆಯ ಸ್ಥಳ ಮತ್ತು ವಿವಿಧ ಜಿಲ್ಲೆಗಳಲ್ಲಿ ಹರಡಿರುವ ನೀರು ಸರಬರಾಜು ಪ್ರದೇಶವನ್ನು **ನಕ್ಷೆ–1.1ರಲ್ಲಿ** ನೀಡಲಾಗಿದೆ:

ನಕ್ಷೆ–1.1: ಯೋಜನೆಯ ಸ್ಥಳ ನಕ್ಷೆ



ಆರಂಭದಲ್ಲಿ ಈ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕೆಎನ್‌ಎನ್‌ಎಲ್) ನಿರ್ವಹಿಸುತ್ತಿತ್ತು ಮತ್ತು ಅದು ಕಾರ್ಯಸಾಧ್ಯತಾ ವರದಿ ಮತ್ತು ಆರಂಭಿಕ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿತು (ಸೆಪ್ಟೆಂಬರ್ 2010) ಅದನ್ನು ಜುಲೈ 2012ರಲ್ಲಿ ಅನುಮೋದಿಸಲಾಯಿತು. ತರುವಾಯ, ಫೆಬ್ರವರಿ 2014ರಲ್ಲಿ ಕರ್ನಾಟಕ ಸರ್ಕಾರವು ಪರಿಷ್ಕೃತ ಡಿಪಿಆರ್ ಅನ್ನು ಅನುಮೋದಿಸಿತು. ಆಗಸ್ಟ್ 2016ರಲ್ಲಿ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ (ವಿಜೆಎನ್‌ಎಲ್) ರಚನೆಯಾದ ನಂತರ, ತ್ವರಿತ ಅನುಷ್ಠಾನಕ್ಕಾಗಿ ಯೋಜನೆಯನ್ನು ಅದಕ್ಕೆ ವರ್ಗಾಯಿಸಲಾಯಿತು (ನವೆಂಬರ್ 2016).

ಎಂಟು ವೀಯರ್ ಗಳ[5] ನಿರ್ಮಾಣ, ವೀಯರ್ ಗಳಿಂದ ನೀರನ್ನು ಎತ್ತುವುದು, ಮೈಲ್ಡ್ ಸ್ಟೀಲ್ ರೇಸಿಂಗ್ ಮೇನ್ (ಪೈಪ್ ಲೈನ್), ಗುರುತ್ವಾಕರ್ಷಣ ಮೇನ್ ನಾಲೆ, ಫೀಡರ್ ಕಾಲುವೆಗಳು ಮತ್ತು ಸಮತೋಲನ

[4] ಅಣೆಕಟ್ಟು, ಕಾಲುವೆ ಅಥವಾ ಇತರ ನೀರಾವರಿ ಯೋಜನೆಯಂತಹ ನೀರಿನ ಮೂಲಗಳಿಂದ ವಿಶ್ವಾಸಾರ್ಹವಾಗಿ ನೀರಾವರಿ ಮಾಡಬಹುದಾದ ಭೂಮಿಯ ಪ್ರದೇಶ.

[5] ನೀರಿನ ಹರಿವನ್ನು ನಿಯಂತ್ರಿಸಲು ನದಿ ಅಥವಾ ಹೊಳೆಗೆ ಅಡ್ಡಲಾಗಿ ನಿರ್ಮಿಸಲಾದ ತಡೆಗೋಡೆ.

ಜಲಾಶಯಗಳ ನಿರ್ಮಾಣ, ಇವುಗಳು ಯೋಜನೆಯ ವ್ಯಾಪ್ತಿಯಲ್ಲಿ ಸೇರಿದ್ದವು. ಕುಡಿಯುವ ನೀರು ವಿತರಣಾ ವ್ಯವಸ್ಥೆಯ ಕಾರ್ಯವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯೂಎಸ್ ಡಿಬಿ), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್ಎಸ್ ಬಿ) ಮತ್ತು ಗ್ರಾಮೀಣ ನೀರು ಸರಬರಾಜು (ಆರ್ ಡಬ್ಲ್ಯೂಎಸ್) ಇಲಾಖೆಗಳನ್ನು ಒಳಗೊಂಡ ಸಂಬಂಧಿತ ಸ್ಥಳೀಯ ಸಂಸ್ಥೆಗಳು ಅನುಷ್ಠಾನಗೊಳಿಸಬೇಕಿತ್ತು. ಕೋಷ್ಟಕ–1.1ರಲ್ಲಿ ವಿವರಿಸಿದಂತೆ ಯೋಜನಾ ಕಾಮಗಾರಿಗಳನ್ನು ಎರಡು ಹಂತಗಳಾಗಿ ವಿಂಗಡಿಸಲಾಗಿತ್ತು.

ಕೋಷ್ಟಕ 1.1: ಯೋಜನೆಯಡಿ ಕೈಗೊಂಡ ಕಾಮಗಾರಿಗಳ ವಿವರ

ಹಂತ–I	• ನೀರು ಎತ್ತುವ ಘಟಕಗಳ ಕಾಮಗಾರಿಗಳು–ಜಾಕ್ ವೆಲ್ ಕಮ್ ಪಂಪ್ ಹೌಸ್[6] ಗಳ ನಿರ್ಮಾಣ • ಮೈಲ್ಡ್ ಸ್ಟೀಲ್ ರೇಸಿಂಗ್ ಮೇನ್ ನಿರ್ಮಾಣ[7] • ವಿದ್ಯುತ್ ಉಪಕೇಂದ್ರ ಮತ್ತು ಪ್ರಸರಣ ಮಾರ್ಗಗಳ ನಿರ್ಮಾಣ
ಹಂತ–II	• ಗುರುತ್ವಾಕರ್ಷಣ ಮೇನ್ ಕಾಲುವೆ[8] (ಉದ್ದ 261 ಕಿ.ಮೀ.ಗಳು.) • ಸಮತೋಲನ ಜಲಾಶಯದ ನಿರ್ಮಾಣ • ಮುಖ್ಯ ಫೀಡರ್ ನಾಲೆಗಳು 1. ಮಧುಗಿರಿ ಫೀಡರ್ ನಾಲೆ 2. ಟಿ.ಜಿ.ಹಳ್ಳಿ & ರಾಮನಗರ ಫೀಡರ್ ನಾಲೆ 3. ಗೌರಿಬಿದನೂರು ಫೀಡರ್ ನಾಲೆ 4. ಶ್ರೀನಿವಾಸಪುರ ಫೀಡರ್ ನಾಲೆ 5. ಕೋಲಾರ ಫೀಡರ್ ನಾಲೆ

1.2 ಸಾಂಸ್ಥಿಕ ರಚನೆ

ಕರ್ನಾಟಕದ ಮುಖ್ಯಮಂತ್ರಿಗಳು ವಿಜೆಎನ್ಎಲ್ ನ ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ ಮತ್ತು ಜಲಸಂಪನ್ಮೂಲ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ವಿಜೆಎನ್ಎಲ್ ನ ಆಡಳಿತಾತ್ಮಕ ನಿಯಂತ್ರಣವು ಸರ್ಕಾರದ ಮಟ್ಟದಲ್ಲಿ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಇರುತ್ತದೆ.

ವಾಣಿವಿಲಾಸ ಸಾಗರ ಮತ್ತು ಗಾಯತ್ರಿ ಜಲಾಶಯಗಳು ಮತ್ತು ಕಡೂರು ಕೆರೆ ತುಂಬಿಸುವ ಯೋಜನೆಯ ನಿರ್ವಹಣೆಯ ಜೊತೆಗೆ ಎತ್ತಿನಹೊಳೆ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದ ದೈನಂದಿನ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಕಾರ್ಯವನ್ನು ವಿಜೆಎನ್ಎಲ್ನ ವ್ಯವಸ್ಥಾಪಕ ನಿರ್ದೇಶಕರು (ಎಂಡಿ) ವಹಿಸುತ್ತಾರೆ. ಅವರಿಗೆ ಮುಖ್ಯ ಕಛೇರಿಯಲ್ಲಿ ತಾಂತ್ರಿಕ ನಿರ್ದೇಶಕರು ಮತ್ತು ಮೂರು ಸಮಿತಿಗಳಾದ ಅಂದಾಜು ಪರಿಶೀಲನಾ ಸಮಿತಿ, ಟೆಂಡರ್ ಪರಿಶೀಲನಾ ಸಮಿತಿ ಮತ್ತು ತಾಂತ್ರಿಕ ಉಪ ಸಮಿತಿ ಸಹಾಯ ಮಾಡುತ್ತವೆ, ಅವು ಯೋಜನೆಗಳು, ತಾಂತ್ರಿಕ ವರದಿಗಳು, ಟೆಂಡರ್ ಗಳು ಇತ್ಯಾದಿಗಳ ಬಗ್ಗೆ ಚರ್ಚಿಸುತ್ತವೆ ಮತ್ತು ಅನುಮೋದನೆಗಾಗಿ ನಿರ್ದೇಶಕರ ಮಂಡಳಿಗೆ ಶಿಫಾರಸುಗಳನ್ನು ಸಲ್ಲಿಸುತ್ತವೆ. ಎತ್ತಿನಹೊಳೆ ಯೋಜನೆಯ ಅನುಷ್ಠಾನದ ಜವಾಬ್ದಾರಿಯನ್ನು ತುಮಕೂರಿನ ಮುಖ್ಯ ಅಭಿಯಂತರು/ಅಧೀಕ್ಷಕ ಅಭಿಯಂತರು ಮತ್ತು ಸಕಲೇಶಪುರ, ಅರಸೀಕೆರೆ, ತುಮಕೂರು ಮತ್ತು ಮಧುಗಿರಿಯ ನಾಲ್ಕು ವಿಭಾಗೀಯ ಕಾರ್ಯನಿರ್ವಾಹಕ ಅಭಿಯಂತರು ಗಳಿಗೆ ವಹಿಸಲಾಗಿತ್ತು. ಯೋಜನೆಯ ಅನುಷ್ಠಾನಕ್ಕಾಗಿನ ಸಾಂಸ್ಥಿಕ ರಚನೆಯ ನಕ್ಷೆಯನ್ನು ಕೆಳಗೆ ನೀಡಲಾಗಿದೆ:

---

6 ನೀರನ್ನು ಸಂಗ್ರಹಿಸಲು ಮತ್ತು ನೀರನ್ನು ಎತ್ತರದ ಮಟ್ಟಕ್ಕೆ ಎತ್ತಲು ಪಂಪ್ ಗಳನ್ನು ಇರಿಸಲು ಬಳಸುವ ರಚನೆ

7 ಒತ್ತಡದಲ್ಲಿ ನೀರನ್ನು ಕೆಳಮಟ್ಟದಿಂದ ಎತ್ತರದ ಮಟ್ಟಕ್ಕೆ ಸಾಗಿಸುಲು ಮೈಲ್ಡ್ ಸ್ಟೀಲ್ ನಿಂದ ಮಾಡಿದ ಪೈಪ್ ಲೈನ್

8 ಕಾಲುವೆಗಳ ಮೂಲಕ ನೀರನ್ನು ಹರಿಸಲು ಗುರುತ್ವಾಕರ್ಷಣೆಯನ್ನು ಬಳಸುವ ವ್ಯವಸ್ಥೆ

ನಕ್ಷೆ 1.2: ಯೋಜನೆಯ ಅನುಷ್ಠಾನಕ್ಕಾಗಿ ಸಾಂಸ್ಥಿಕ ನಕ್ಷೆ



1.3 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವುಗಳನ್ನು ನಿರ್ಣಯಿಸುವುದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಉದ್ದೇಶವಾಗಿತ್ತು:

- ನೀರಿನ ಲಭ್ಯತೆಯ ಮೌಲ್ಯಮಾಪನವನ್ನು ಸರಿಯಾಗಿ ಮಾಡಲಾಯಿತೆ, ಆಯವ್ಯಯ, ಕಾಲಮಿತಿಗಳು ವಾಸ್ತವಿಕವಾಗಿದ್ದವೆ ಮತ್ತು ಕಾಮಗಾರಿಗಳ ಎಲ್ಲಾ ಘಟಕಗಳಿಗೆ ಪರಿಣಾಮಕಾರಿ ಯೋಜನೆಗಳನ್ನು ಸಿದ್ಧಪಡಿಸಲಾಯಿತೆ;
- ಯೋಜನೆಯ ವಿವಿಧ ಘಟಕಗಳನ್ನು ಮಿತವ್ಯಯವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತ ಗೊಳಿಸಲಾಯಿತೆ ಹಾಗೂ ಸಂಗ್ರಹಣೆ ಮತ್ತು ಕಾಲುವೆ ಜಾಲಕ್ಕಾಗಿ ಮೂಲಸೌಕರ್ಯಗಳ ಸೃಷ್ಟಿಯನ್ನು ಸಮನ್ವಯಗೊಳಿಸಲಾಯಿತೆ ಮತ್ತು ಸಮಕಾಲಿಕವಾಗಿದ್ದಿತೆ;
- ಪರಿಣಾಮಕಾರಿ ಮತ್ತು ಸಮರ್ಪಕ ಮೇಲ್ವಿಚಾರಣೆ ಮತ್ತು ನಿಯಂತ್ರಣ ವ್ಯವಸ್ಥೆ ಜಾರಿಯಲ್ಲಿತ್ತೆ; ಮತ್ತು
- ಉದ್ದೇಶಿತ ಫಲಾನುಭವಿಗಳಿಗೆ ಕುಡಿಯುವ ನೀರಿನ ಪೂರೈಕೆಯನ್ನು ಆಲೋಚಿಸಿದಂತೆ ಸಾಧಿಸಲಾಯಿತೆ.

1.4 ಲೆಕ್ಕಪರಿಶೋಧನಾ ಮಾನದಂಡ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಲೆಕ್ಕಪರಿಶೋಧನಾ ಮಾನದಂಡಗಳನ್ನು ಈ ಕೆಳಗಿನ ಮೂಲಗಳಿಂದ ಪಡೆಯಲಾಯಿತು.

- ರಾಷ್ಟ್ರೀಯ ಜಲ ನೀತಿ 2012 ಮತ್ತು ಕರ್ನಾಟಕ ರಾಜ್ಯ ಜಲ ನೀತಿ 2002;
- ಕೇಂದ್ರ ಜಲ ಆಯೋಗದ ನಿರ್ದೇಶನಗಳು ಹಾಗೂ ಕರ್ನಾಟಕ ಸರ್ಕಾರ ಹೊರಡಿಸಿದ ಸೂಚನೆಗಳು/ ಆದೇಶಗಳು/ಸುತ್ತೋಲೆಗಳು;
- ನಿರ್ದೇಶಕರ ಮಂಡಳಿ ಮತ್ತು ತಾಂತ್ರಿಕ ಉಪಸಮಿತಿಗಳ ಸಭೆಗಳ ನಡವಳಿಗಳು;
- ಕರ್ನಾಟಕ ಹಣಕಾಸು ಸಂಹಿತೆ 1958, ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ 2014, ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯಿದೆ, 1999;

- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ ಕಾಯಿದೆ, 2013 ಮತ್ತು
- ವಿವರವಾದ ಯೋಜನಾ ವರದಿಗಳು, ಬಿಡ್ ದಾಖಲೆಗಳು, ವಿವಿಧ ಕಾರ್ಯನಿರ್ವಾಹಕ ಸಂಸ್ಥೆಗಳೊಂದಿಗಿನ ಗುತ್ತಿಗೆ ಒಪ್ಪಂದಗಳು/ತಿಳುವಳಿಕೆ ಪತ್ರಗಳು.

1.5 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ

ಜೂನ್ 2023 ರಿಂದ ಅಕ್ಟೋಬರ್ 2023ರ ಅವಧಿಯಲ್ಲಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು. ಜಲ ಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ವಿಜೆಎನ್‌ಎಲ್‌ನ ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಲೆಕ್ಕಪತ್ರ ಕಛೇರಿ, ಚಿತ್ರದುರ್ಗ, ತುಮಕೂರಿನ ಮುಖ್ಯ ಅಭಿಯಂತರು / ಅಧೀಕ್ಷಕ ಅಭಿಯಂತರು, ನಾಲ್ಕು[9] ವಿಭಾಗೀಯ ಕಚೇರಿಗಳು ಮತ್ತು ಮೂರು ಸಂಬಂಧಿತ ವಿಶೇಷ ಭೂಸ್ವಾಧೀನ ಕಚೇರಿಗಳಲ್ಲಿನ[10] ಯೋಜನೆಯ ಪ್ರಾರಂಭದ ದಿನಾಂಕದಿಂದ ಮಾರ್ಚ್ 2023 ರವರೆಗಿನ ದಾಖಲೆಗಳನ್ನು ಪರೀಕ್ಷಾ–ತನಿಖೆ ನಡೆಸಲಾಯಿತು.

ಲೆಕ್ಕಪರಿಶೋಧನೆಯ ವಿಧಾನವು ಅಗತ್ಯವಿರುವ ಕಡೆಗಳಲ್ಲಿ ಕಾಮಗಾರಿಗಳ ಜಂಟಿ ಪರಿಶೀಲನೆಯ ಜೊತೆಗೆ ದಾಖಲೆಗಳ ವಿಶ್ಲೇಷಣೆ, ಲೆಕ್ಕಪರಿಶೋಧನಾ ಅವಲೋಕನಗಳ ವಿತರಣೆ ಮತ್ತು ಪ್ರತಿಕ್ರಿಯೆಗಳನ್ನು ಪಡೆಯುವುದು, ಇವುಗಳನ್ನು ಒಳಗೊಂಡಿತ್ತು. ಜಲ ಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳೊಂದಿಗೆ ಪ್ರವೇಶ ಸಮ್ಮೇಳನವನ್ನು ನಡೆಸಲಾಯಿತು (20 ಜೂನ್ 2023), ಅದರಲ್ಲಿ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ವ್ಯಾಪ್ತಿ, ಲೆಕ್ಕಪರಿಶೋಧನಾ ಉದ್ದೇಶಗಳು ಮತ್ತು ಮಾನದಂಡಗಳನ್ನು ವಿವರಿಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು 20 ಮಾರ್ಚ್ 2024ರಂದು ನಡೆದ ನಿರ್ಗಮನ ಸಮ್ಮೇಳನದಲ್ಲಿ ಜಲ ಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಯಿತು. ರಾಜ್ಯ ಸರ್ಕಾರದಿಂದ ಸ್ವೀಕರಿಸಿದ (ಮಾರ್ಚ್ 2024) ಪ್ರತಿಕ್ರಿಯೆಗಳನ್ನು ವರದಿಯಲ್ಲಿ ಸೂಕ್ತವಾಗಿ ಸೇರಿಸಲಾಗಿದೆ.

1.6 ಕೃತಜ್ಞತೆ

ಈ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ವಿಜೆಎನ್‌ಎಲ್‌ನ ವ್ಯವಸ್ಥಾಪಕ ನಿರ್ದೇಶಕರು ಮತ್ತು ಜಲಸಂಪನ್ಮೂಲ ಇಲಾಖೆ/ ವಿಜೆಎನ್‌ಎಲ್‌ನ ಇತರ ಅಧಿಕಾರಿಗಳು/ಸಿಬ್ಬಂದಿ ನೀಡಿದ ಸಹಕಾರವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

1.7 ಅಧ್ಯಾಯಗಳು

ಲೆಕ್ಕಪರಿಶೋಧನೆಯ ಅಂಶಗಳನ್ನು ಮೂರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ:

- ಯೋಜನೆ ಮತ್ತು ಹಣಕಾಸು ನಿರ್ವಹಣೆ
- ಯೋಜನೆಯ ಅನುಷ್ಠಾನ
- ಮೇಲ್ವಿಚಾರಣೆ

[9] ಅರಸೀಕೆರೆ, ಮಧುಗಿರಿ, ಸಕಲೇಶಪುರ ಮತ್ತು ತುಮಕೂರು

[10] ದೊಡ್ಡಬಳ್ಳಾಪುರ, ಹಾಸನ ಮತ್ತು ತುಮಕೂರು

ಅಧ್ಯಾಯ–II

ಯೋಜನೆ ಮತ್ತು ಹಣಕಾಸು ನಿರ್ವಹಣೆ

ಅಧ್ಯಾಯ–II

ಯೋಜನೆ ಮತ್ತು ಹಣಕಾಸು ನಿರ್ವಹಣೆ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ (ಯೋಜನೆ) ವಿಸ್ತೃತ ಯೋಜನಾ ವರದಿಯನ್ನು ಎರಡು ಬಾರಿ ಪರಿಷ್ಕರಿಸಲಾಯಿತು, ಅಂದರೆ, ಜುಲೈ 2012 ರಲ್ಲಿ ಮೂಲತಃ ಅನುಮೋದಿಸಲಾದ ₹8,323.50 ಕೋಟಿಯಿಂದ ಫೆಬ್ರವರಿ 2014 ರಲ್ಲಿ ₹12,912.36 ಕೋಟಿಗೆ ಮತ್ತು ಜನವರಿ 2023 ರಲ್ಲಿ ₹23,251.66 ಕೋಟಿಗೆ. ಯಾವುದೇ ಡಿಪಿಆರ್‌ಗಳು ಯೋಜನೆಗೆ ನಿರ್ದಿಷ್ಟ ಪೂರ್ಣಗೊಳಿಸುವ ಅವಧಿಯನ್ನು ಉಲ್ಲೇಖಿಸಿಲ್ಲ. ಕಾಮಗಾರಿಗಳನ್ನು ಬಿಗಿಬಂಧವಿಲ್ಲದೆ ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಯೋಜನೆ ಪರಿಕಲ್ಪನೆಯಾಗಿ 12 ವರ್ಷಗಳ ನಂತರವೂ ಯೋಜನೆಯ ಉದ್ದೇಶವನ್ನು ಸಾಧಿಸಲಾಗಿಲ್ಲ.

ಎತ್ತಿನಹೊಳೆಯಿಂದ ತಿರುಗಿಸಲಾದ ನೀರನ್ನು ಸಂಗ್ರಹಿಸಲು ಮತ್ತು ಬೇಸಿಗೆಯ ತಿಂಗಳುಗಳಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ನಿರಂತರವಾಗಿ ನೀರು ಸರಬರಾಜು ಮಾಡಲು ಸಮತೋಲನ ಜಲಾಶಯದ ನಿರ್ಮಾಣವನ್ನು ಡಿಪಿಆರ್‌ನಲ್ಲಿ ಕಲ್ಪಿಸಲಾಗಿತ್ತು. ಆದರೆ, ಸಮತೋಲನ ಜಲಾಶಯದ ಸ್ಥಳವನ್ನು ಡಿಪಿಆರ್‌ಗಳಲ್ಲಿ ಎರಡು ಬಾರಿ ಬದಲಾಯಿಸಲಾಯಿತು. ಸಮತೋಲನ ಜಲಾಶಯದ ಸಾಮರ್ಥ್ಯವನ್ನು ಮೂಲತಃ ಪ್ರಸ್ತಾವಿಸಲಾದ 10 ಟಿಎಮ್‌ಸಿಯಿಂದ ಅಂತಿಮವಾಗಿ ಎರಡು ಟಿಎಮ್‌ಸಿಗೆ ಗಣನೀಯವಾಗಿ ಕಡಿಮೆ ಮಾಡಲಾಯಿತು. ವಿನ್ಯಾಸದಲ್ಲಿನ ಈ ಬದಲಾವಣೆಗಳ ಪರಿಣಾಮದಿಂದ ಯೋಜನೆಯ ವೆಚ್ಚವು ₹621.45 ಕೋಟಿಗಳಷ್ಟು ಅಧಿಕವಾಯಿತು.

ಯೋಜನೆಗೆ ಲಭ್ಯವಿರುವ ನೀರಿನ ಇಳುವರಿಯನ್ನು ಅಂದಾಜು ಮಾಡಲು ಅಳವಡಿಸಿಕೊಳ್ಳಲಾದ ಮಳೆಯ ದತ್ತಾಂಶವು ಜಲಾನಯನ ಪ್ರದೇಶದಲ್ಲಿ ಮತ್ತು ಸುತ್ತಮುತ್ತಲಿನ ಸರ್ಕಾರಿ ಮಾಪನ ಕೇಂದ್ರಗಳ ಲಭ್ಯವಿರುವ ಮಳೆ ದತ್ತಾಂಶಕ್ಕೆ ಹೋಲಿಸಿದರೆ ಹೆಚ್ಚಿನ ಮಟ್ಟದಲ್ಲಿತ್ತು. ಎತ್ತಿನಹೊಳೆಗೆ ಅಡ್ಡಲಾಗಿ ನಿರ್ಮಿಸಲಾದ ಎಂಟು ವೀಯರ್‌ಗಳಲ್ಲಿ ದಾಖಲಾದ ಹರಿವಿನ ದತ್ತಾಂಶದ ಹೋಲಿಕೆಯು ವೀಯರ್‌ಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣವು ಡಿಪಿಆರ್‌ನಲ್ಲಿ ಪರಿಗಣಿಸಲಾದ ಅಂದಾಜು 32.15 ಟಿಎಮ್‌ಸಿ ಪ್ರಮಾಣಕ್ಕೆ ಪ್ರತಿಯಾಗಿ 7.20 ಟಿಎಮ್‌ಸಿಯಿಂದ 24.70 ಟಿಎಮ್‌ಸಿ ವರೆಗಿನ ವ್ಯಾಪ್ತಿಯಲ್ಲಿತ್ತು ಎಂಬುದನ್ನು ತಿಳಿಯಪಡಿಸಿತು.

2018–19 ರಿಂದ 2022–23ರ ಅವಧಿಯಲ್ಲಿ ಸರ್ಕಾರವು ಆಯವ್ಯಯ ಅಗತ್ಯತೆಯಲ್ಲಿ ಕೇವಲ ಶೇಕಡಾ 25ರಿಂದ 54 ರಷ್ಟನ್ನು ಮಾತ್ರ ಒದಗಿಸಿದ್ದರಿಂದ ಯೋಜನೆಯು ಹಣಕಾಸಿನ ತೊಂದರೆಗಳನ್ನು ಎದುರಿಸಿತು. ಯೋಜನೆಯನ್ನು ಪೂರ್ಣಗೊಳಿಸಲು ಹೊಸ ಸಾಲಗಳನ್ನು ಪಡೆಯುವ ವಿಜೆಎನ್‌ಎಲ್‌ನ ವಿನಂತಿಯನ್ನು ಸರ್ಕಾರ ಇನ್ನೂ ಅನುಮೋದಿಸಬೇಕಾಗಿದೆ (ಮೇ 2024). ತತ್ಪರಿಣಾಮವಾಗಿ, ಯೋಜನೆಯನ್ನು ಪೂರ್ಣಗೊಳಿಸಲು ಮಾರ್ಚ್ 2024ರ ಹೊತ್ತಿಗೆ ವಿಜೆಎನ್‌ಎಲ್ ₹7,954.63 ಕೋಟಿಗಳ ಕೊರತೆಯನ್ನು ಎದುರಿಸುತ್ತಿತ್ತು.

2.1 ಯೋಜನೆಗಳ ಯೋಜನೆ ಮತ್ತು ವಿನ್ಯಾಸ

2011–12ನೇ ಸಾಲಿನ ಜಲಸಂಪನ್ಮೂಲ ಇಲಾಖೆಯ ದರಪಟ್ಟಿ (ಎಸ್‌ಆರ್) ಆಧಾರದ ಮೇಲೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಯೋಜನೆಗೆ (ಯೋಜನೆ) ಸರ್ಕಾರವು ₹8,323.50 ಕೋಟಿ ಅಂದಾಜು ವೆಚ್ಚದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು (ಜುಲೈ 2012). ಈ ಯೋಜನೆಯು ಆಯ್ದ ಹೊಳೆಗಳಿಗೆ[11] ಅಡ್ಡಲಾಗಿ ಎಂಟು ವೀಯರ್‌ಗಳನ್ನು ನಿರ್ಮಿಸುವುದು ಮತ್ತು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ

[11] ಎತ್ತಿನಹೊಳೆ, ಕಾಡುಮನೆಹೊಳೆ, ಕೇರಿಹೊಳೆ ಮತ್ತು ಹೊಂಗದಹಳ್ಳ

ಶೇಕಡಾ 50ರಷ್ಟು ಅವಲಂಬನೆಯಲ್ಲಿ[12] ಸುಮಾರು 24.01 ಟಿಎಮ್‌ಸಿ[13] ಮತ್ತು ಶೇಕಡಾ 90ರಷ್ಟು ಅವಲಂಬನೆಯಲ್ಲಿ 20.58 ಟಿಎಮ್‌ಸಿ ನೀರನ್ನು ಹರಿಸಲು ಏತನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿತ್ತು. 24.01 ಮಾರ್ಗಪಲ್ಲಟ ಮಾಡಬಹುದಾದ ಟಿಎಮ್‌ಸಿ ಇಳುವರಿಯಲ್ಲಿ, 15.029 ಟಿಎಮ್‌ಸಿ ಕುಡಿಯುವ ನೀರಿಗೆ ಮೀಸಲಾಗಿತ್ತು ಮತ್ತು ಉಳಿದ 8.981 ಟಿಎಮ್‌ಸಿಯನ್ನು ಅಂತರ್ಜಲ ಮರುಪೂರಣಕ್ಕಾಗಿ ಮೀಸಲಿಡಲಾಗಿತ್ತು. ಮೊದಲ ಡಿಪಿಆರ್ (ಜುಲೈ 2012) ಪ್ರಕಾರ ಕೈಗೆತ್ತಿಕೊಳ್ಳಬೇಕಾದ ಕಾಮಗಾರಿಗಳನ್ನು ಎರಡು ಹಂತಗಳಾಗಿ ವಿಂಗಡಿಸಲಾಗಿತ್ತು, ಅವುಗಳಲ್ಲಿ ಈ ಕೆಳಗಿನವು ಸೇರಿದ್ದವು:

ಹಂತ–I: (₹3269.50 ಕೋಟಿ)

- ಹೊಳೆಗಳಿಗೆ ಅಡ್ಡಲಾಗಿ ಆಯ್ದ ಸ್ಥಳಗಳಲ್ಲಿ[14] ನೀರಿನ ವೀಯರ್‌ಗಳ ನಿರ್ಮಾಣ
- ಎಲ್ಲಾ ಲಿಫ್ಟಿಂಗ್ ಸ್ಥಳಗಳಲ್ಲಿ ಜಾಕ್‌ವೆಲ್ ಕಮ್ ಪಂಪ್ ಹೌಸ್ ನಿರ್ಮಾಣ
- ಪಶ್ಚಿಮ ಘಟ್ಟಗಳನ್ನು ದಾಟುವ ವಿತರಣಾ ಚೇಂಬರ್‌ಗಳಿಗೆ ನೀರನ್ನು ಸಾಗಿಸಲು ರೈಸಿಂಗ್ ಮೇನ್ (ಪೈಪ್‌ಲೈನ್) ನಿರ್ಮಾಣ.

ಹಂತ–II: (₹5054 ಕೋಟಿ)

- ಸಮತೋಲನ ಜಲಾಶಯಕ್ಕೆ ನೀರನ್ನು ಸಾಗಿಸಲು 233.00 ಕಿಮೀ ಉದ್ದದ ಗುರುತ್ವಾಕರ್ಷಣ ಕಾಲುವೆಯ ನಿರ್ಮಾಣ
- ತುಮಕೂರು ತಾಲ್ಲೂಕಿನ ದೇವರಾಯನದುರ್ಗದ ಬಳಿ 10 ಟಿಎಮ್‌ಸಿ ಸಾಮರ್ಥ್ಯದ ಸಮತೋಲನ ಜಲಾಶಯದ ನಿರ್ಮಾಣ.
- ಸಮತೋಲನ ಜಲಾಶಯದಿಂದ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಕಡೆಗೆ ರೈಸಿಂಗ್ ಮೇನ್ (ಪೈಪ್‌ಲೈನ್) ನಿರ್ಮಾಣ.

ಆದರೆ, ಮೇಲಿನ ಅನುಮೋದಿತ ಯೋಜನಾ ವರದಿಯನ್ನು **ಕೋಷ್ಟಕ–2.1**ರಲ್ಲಿ ವಿವರಿಸಿದಂತೆ ವಿನ್ಯಾಸ ಮತ್ತು ಜೋಡಣೆ ಬದಲಾವಣೆಗಳನ್ನು ಸೇರಿಸಿಕೊಂಡು ಎರಡು ಬಾರಿ ಪರಿಷ್ಕರಿಸಲಾಯಿತು:

ಕೋಷ್ಟಕ–2.1: ಯೋಜನೆಯ ಡಿಪಿಆರ್ ಪರಿಷ್ಕರಣೆಯ ವಿವರಗಳು

	ಆಡಳಿತಾತ್ಮಕ ಅನುಮೋದನೆಯ ದಿನಾಂಕ	ಅನುಮೋದಿತ ವೆಚ್ಚ (₹ ಕೋಟಿಗಳಲ್ಲಿ)	ಮುಖ್ಯ ಪರಿಷ್ಕರಣೆಗಳು
ಮೊದಲ ಪರಿಷ್ಕರಣೆ (ಡಿಪಿಆರ್–II) 2012–13ರ ದರಪಟ್ಟಿ ಆಧಾರಿತ	ಫೆಬ್ರವರಿ 2014	12,912.36 (ಹಂತ–I: 3,527.17 ಮತ್ತು ಹಂತ–II: 9,385.19)	• ದೇವರಾಯನದುರ್ಗ ತಾಲ್ಲೂಕಿನಲ್ಲಿ ಪ್ರಸ್ತಾವಿಸಲಾದ 10 ಟಿಎಮ್‌ಸಿ ಸಾಮರ್ಥ್ಯದ ಸಮತೋಲನ ಜಲಾಶಯವು 578 ಹೆಕ್ಟೇರ್ ಅರಣ್ಯ ಭೂಮಿ, ಪ್ರಮುಖ ರಸ್ತೆಗಳು, ಎರಡು ಹಳ್ಳಿಗಳು ಮತ್ತು ಒಂದು ಐತಿಹಾಸಿಕ ಸ್ಥಳದ ಮುಳುಗಡೆಯನ್ನು ಒಳಗೊಂಡಿತ್ತು. ಈ ಕಾರಣಗಳಿಂದಾಗಿ, ಸಮತೋಲನ ಜಲಾಶಯದ ಸ್ಥಳವನ್ನು 5.78 ಟಿಎಮ್‌ಸಿ ಕಡಿಮೆ ಸಾಮರ್ಥ್ಯದೊಂದಿಗೆ ಕೊರಟಗೆರೆ ತಾಲ್ಲೂಕಿನ ಭೈರಗೊಂಡ್ಲು ಗ್ರಾಮಕ್ಕೆ ಬದಲಾಯಿಸಲಾಯಿತು. ಸಮತೋಲನ ಜಲಾಶಯದ ಸಾಮರ್ಥ್ಯದಲ್ಲಿನ ಇಳಿಕೆಗೆ ಕಾರಣಗಳನ್ನು ಡಿಪಿಆರ್–IIರಲ್ಲಿ ಉಲ್ಲೇಖಿಸಿಸಿರಲಿಲ್ಲ. • ಗುರುತ್ವಾಕರ್ಷಣ ಕಾಲುವೆಯ ಉದ್ದವನ್ನು 233 ಕಿ.ಮೀ.ನಿಂದ 273 ಕಿ.ಮೀ.ಗೆ ಹೆಚ್ಚಿಸುವುದು. • ಫಲಾನುಭವಿ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಫೀಡರ್ ಕಾಲುವೆಗಳ ನಿರ್ಮಾಣ.

[12] ಅಂದರೆ ಅರ್ಧ ಅವಧಿಗೆ ಕನಿಷ್ಠ ಇಳುವರಿಯ ಲಭ್ಯತೆಯನ್ನು ಪರಿಗಣಿಸಲಾಗಿದೆ (10 ವರ್ಷಗಳಲ್ಲಿ 5 ವರ್ಷಗಳು).

[13] ಅನುಕರಣಾ ಅಧ್ಯಯನಗಳ ಪ್ರಕಾರ ಜಲಾಶಯಗಳಿಂದ ಲಭ್ಯವಿರುವ ಸಂಭವನೀಯ ವಾರ್ಷಿಕ ಇಳುವರಿ. ಇದು ಕೆಳಗೆ ಹರಿಸಲು ಬೇಕಾಗಿರುವ ಅಗತ್ಯವನ್ನು ಕಡಿತಗೊಳಿಸಿದ ನಂತರ ತಿರುವುಗಳಿಗೆ ಲಭ್ಯವಿರುವ ನಿವ್ವಳ ಇಳುವರಿ.

[14] ಹೊಂಗದಹಳ್ಳ, ಕಾಡುಮನೆಹೊಳೆ ಮತ್ತು ಅದರ ಉಪನದಿ, ಕೇರಿಹೊಳೆ, ಎತ್ತಿನಹೊಳೆ ಮತ್ತು ಅದರ ಮೂರು ಉಪನದಿಗಳು

	ಆಡಳಿತಾತ್ಮಕ ಅನುಮೋದನೆಯ ದಿನಾಂಕ	ಅನುಮೋದಿತ ವೆಚ್ಚ (₹ ಕೋಟಿಗಳಲ್ಲಿ)	ಮುಖ್ಯ ಪರಿಷ್ಕರಣೆಗಳು
			• ಫಲಾನುಭವಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಂಗ್ರಹಣಾ ಜಲಾಶಯಗಳ ನಿರ್ಮಾಣ.
ಎರಡನೇ ಪರಿಷ್ಕರಣೆ (ಡಿಪಿಆರ್–III) 2018–19ರ ದರಪಟ್ಟಿ ಆಧಾರಿತ	ಜನವರಿ 2023	23,251.66 (ಹಂತ–I: 4,711.45 ಹಂತ–II: 18,540.21)	• ಭೈರಗೊಂಡ್ಲುವಿನಲ್ಲಿ ಜಲಾಶಯ ನಿರ್ಮಿಸಿದಲ್ಲಿ ಕೊರಟಗೆರೆ ತಾಲ್ಲೂಕಿನ ಐದು ಗ್ರಾಮಗಳು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಎರಡು ಗ್ರಾಮಗಳು ಮುಳುಗಡೆಯಾಗುತ್ತವೆ ಎಂಬ ಕಾರಣ ನೀಡಿ ಸಮತೋಲನ ಜಲಾಶಯದ ಸ್ಥಳವನ್ನು ಭೈರಗೊಂಡ್ಲುವಿನಿಂದ ದೊಡ್ಡಬಳ್ಳಾಪುರ ತಾಲ್ಲೂಕಿನ ಲಕ್ಕೇನಹಳ್ಳಿ ಗ್ರಾಮಕ್ಕೆ ಮತ್ತೆ ಬದಲಾಯಿಸಲಾಯಿತು. ಅಲ್ಲದೆ, ಎರಡೂ ತಾಲ್ಲೂಕುಗಳಲ್ಲಿನ ಬಾಧಿತ ರೈತರು ಭೂಸ್ವಾಧೀನಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಏಕರೂಪದ ದರವನ್ನು ಕೋರಿದರು. ಆದ್ದರಿಂದ, ಸಮತೋಲನ ಜಲಾಶಯದ ಸಾಮರ್ಥ್ಯವನ್ನು ಎರಡು ಟಿಎಮ್‌ಸಿಗೆ ಸೀಮಿತಗೊಳಿಸಲು ನಿರ್ಧರಿಸಲಾಯಿತು, ಇದು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೇವಲ ಮೂರು ಹಳ್ಳಿಗಳ ಮುಳುಗಡೆಯನ್ನು ಮಾತ್ರ ಒಳಗೊಂಡಿತ್ತು. • ಡಿಪಿಆರ್–II ರಲ್ಲಿ ಪ್ರಸ್ತಾವಿಸಲಾದ ಸಂಗ್ರಹಣಾ ಜಲಾಶಯಗಳನ್ನು ವರ್ಜಿಸಲಾಯಿತು ಮತ್ತು ಜೂನ್‌ನಿಂದ ನವೆಂಬರ್‌ವರೆಗೆ ಪಂಪ್ ಮಾಡಿದ ನೀರನ್ನು ಬಳಕೆದಾರ ಇಲಾಖೆಗಳು (ಗ್ರಾಮೀಣ ನೀರು ಸರಬರಾಜು ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) ಗುರುತಿಸಿದ ಸಣ್ಣ ನೀರಾವರಿ ಟ್ಯಾಂಕ್‌ಗಳಲ್ಲಿ ಸಂಗ್ರಹಿಸಲು ಪ್ರಸ್ತಾವಿಸಲಾಯಿತು. • ಗುರುತ್ವಾಕರ್ಷಣಾ ನಾಲೆಯ ಉದ್ದವನ್ನು 261 ಕಿ.ಮೀ.ಗೆ ಇಳಿಸಲಾಯಿತು. • ಜಲಾಶಯದ ಸಾಮರ್ಥ್ಯದಲ್ಲಿನ ಬದಲಾವಣೆಯಿಂದಾಗಿ ರೈಸಿಂಗ್ ಮೇನ್‌ಗಳು (ಪೈಪ್‌ಲೈನ್), ಗುರುತ್ವಾಕರ್ಷಣ ಕೊಳವೆಗಳು, ಪಂಪ್ ಹೆಡ್‌ಗಳು ಇತ್ಯಾದಿಗಳ ಗಾತ್ರದಲ್ಲಿ ಹೆಚ್ಚಳ (ಫೀಡರ್ ಕಾಲುವೆಗಳಿಗೆ). • ಫೀಡರ್‌ಗಳಿಗೆ ನೀರನ್ನು ತೆರೆದ ಕಾಲುವೆಗಳ ಬದಲು ಮುಚ್ಚಿದಕೊಳ ಮೂಲಕ ಸಾಗಿಸುವ ವಿಧಾನ ಅನುಸರಣೆ.

ಆಧಾರ: ಅನುಮೋದಿತ ಡಿಪಿಆರ್ ಗಳು

ಮೇಲಿನ ಪರಿಷ್ಕರಣೆಗಳ ಪರಿಣಾಮದಿಂದ ಯೋಜನಾ ವೆಚ್ಚವು ₹8,323.50 ಕೋಟಿಯಿಂದ ₹23,251.66 ಕೋಟಿಗೆ ಮೂರು ಪಟ್ಟು ಹೆಚ್ಚಾಯಿತು, ಅಂದರೆ ₹14,928.19 ಕೋಟಿಗಳಷ್ಟು ಹೆಚ್ಚಳವಾಯಿತು. ಮೊದಲಿಗೆ ಜುಲೈ 2012ರಲ್ಲಿ ಅನುಮೋದನೆ ಪಡೆದ ಯೋಜನೆಯು ಇನ್ನೂ ಪ್ರಗತಿಯಲ್ಲಿದೆ (ಡಿಸೆಂಬರ್ 2024).

ಕೆಳಗಿನ **ನಕ್ಷೆ–2.1** ಡಿಪಿಆರ್–IIರಿಂದ ಡಿಪಿಆರ್–IIIರವರೆಗೆ ಘಟಕವಾರು ವೆಚ್ಚವು ಹೆಚ್ಚಿರುವುದನ್ನು ಸೂಚಿಸುತ್ತದೆ, ಇದು ಯೋಜನಾ ವೆಚ್ಚದಲ್ಲಿ ಭಾರಿ ಏರಿಕೆಯಾಗುವಲ್ಲಿ ಪರಿಣಮಿಸಿತು:

ನಕ್ಷೆ–2.1: ಯೋಜನಾ ವೆಚ್ಚದಲ್ಲಿ ಘಟಕವಾರು ಹೆಚ್ಚಳ



ದರಪಟ್ಟಿಯಲ್ಲಿ ಬದಲಾವಣೆ: ದರಪಟ್ಟಿ 2012–13 ರಿಂದ 2018–19 ರವರೆಗೆ
ಕಾಮಗಾರಿಗಳ ವ್ಯಾಪ್ತಿಯಲ್ಲಿ ಬದಲಾವಣೆ: ಫೀಡರ್ ಕಾಲುವೆಗಳಿಗೆ ಸಂಬಂಧಿಸಿದಂತೆ ರೈಸಿಂಗ್ ಮೇನ್‌ಗಳು, ಗುರುತ್ವಾಕರ್ಷಣೆಯ ಪೈಪ್‌ಗಳು, ಪಂಪ್ ಹೆಡ್‌ಗಳ ಗಾತ್ರದಲ್ಲಿ ಹೆಚ್ಚಳ ಮತ್ತು ತೆರೆದ ಕಾಲುವೆಯಿಂದ ಮುಚ್ಚಿದ ಪೈಪ್‌ಗಳಿಗೆ ಸಾಗಣೆಯಲ್ಲಿ ಬದಲಾವಣೆ.

ಆಧಾರ: ಅನುಮೋದಿತ ಡಿಪಿಆರ್–II ಮತ್ತು ಡಿಪಿಆರ್–III

ಕಂಡಿಕೆ–2.1.2ರಲ್ಲಿ ವಿವರಿಸಿದಂತೆ ಯೋಜನೆಯ ವಿನ್ಯಾಸ ಮತ್ತು ಜೋಡಣೆಯ ಪರಿಷ್ಕರಣೆಯಿಂದಾದ ಕಾಮಗಾರಿಗಳ ವ್ಯಾಪ್ತಿಯಲ್ಲಿನ ಬದಲಾವಣೆಯು ಯೋಜನಾ ವೆಚ್ಚದಲ್ಲಿನ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ. ದರಪಟ್ಟಿಯಲ್ಲಿನ ಪರಿಷ್ಕರಣೆ ಮತ್ತು ಭೂಸ್ವಾಧೀನದಲ್ಲಿನ ವಿಳಂಬದಿಂದಾಗಿ ಭೂಮಿಯ ಬೆಲೆಯಲ್ಲಿನ ಹೆಚ್ಚಳವು ಇತರ ಕಾರಣಗಳಾಗಿವೆ.

ಸಮತೋಲನ ಜಲಾಶಯದ ಸಾಮರ್ಥ್ಯವನ್ನು ಎರಡು ಟಿಎಮ್‌ಸಿಗೆ ಇಳಿಸಿದ ಕಾರಣ ವಿನ್ಯಾಸ ಬದಲಾವಣೆಗಳು ಸಂಭವಿಸಿದವು ಎಂದು ಸರ್ಕಾರ ಉತ್ತರಿಸಿತು (ಮಾರ್ಚ್ 2024). ಆರ್‌ಡಬ್ಲ್ಯೂಎಸ್, ಕೆಯುಡಬ್ಲ್ಯೂಎಸ್‌ಡಿಬಿ ಮತ್ತು ಬಿಡಬ್ಲ್ಯೂಎಸ್‌ಎಸ್‌ಬಿಯಂತಹ ಬಳಕೆದಾರ ಇಲಾಖೆಗಳು ಅಸ್ತಿತ್ವದಲ್ಲಿರುವ ಸಣ್ಣ ನೀರಾವರಿ ಟ್ಯಾಂಕ್‌ಗಳಲ್ಲಿ ಕುಡಿಯುವ ನೀರಿಗಾಗಿ ಪ್ರತ್ಯೇಕ ಮೀಸಲಾದ ಸಂಗ್ರಹಣಾ ಸ್ಥಳವನ್ನು ನಿರ್ಮಿಸುವುದರಿಂದ ಇದು ಅಗತ್ಯವಾಗಿತ್ತು. ಮೇಲಿನ ಸಂಗ್ರಹಣಾ ಸ್ಥಳಗಳ ಲಭ್ಯತೆಯು ಹೆಚ್ಚಿನ ಸಾಮರ್ಥ್ಯದ ಸಮತೋಲನ ಜಲಾಶಯದ ನಿರ್ಮಾಣದ ಅಗತ್ಯವನ್ನು ನಿವಾರಿಸಿತು.

ಡಿಪಿಆರ್–IIರಲ್ಲಿ, ಸಮತೋಲನ ಜಲಾಶಯದ ಸಾಮರ್ಥ್ಯವು 5.78 ಟಿಎಮ್‌ಸಿ ಆಗಿದ್ದಾಗಲೂ ಸಹ ಯೋಜನೆಯಡಿಯಲ್ಲಿ ಕುಡಿಯುವ ನೀರಿಗಾಗಿ ಸಂಗ್ರಹಣಾ ಟ್ಯಾಂಕ್‌ಗಳನ್ನು ನಿರ್ಮಿಸಲು ಅವಕಾಶವಿದ್ದುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಡಿಪಿಆರ್–IIIರಲ್ಲಿ, ಮೇಲಿನ ಸಂಗ್ರಹಣಾ ಟ್ಯಾಂಕ್‌ಗಳನ್ನು ವರ್ಜಿಸಲಾಯಿತು ಮತ್ತು ಬಳಕೆದಾರ ಇಲಾಖೆಗಳು ಕುಡಿಯುವ ನೀರನ್ನು ಸಣ್ಣ ನೀರಾವರಿ ಟ್ಯಾಂಕ್‌ಗಳೊಳಗೆ ಮೀಸಲಾದ ಸಂಗ್ರಹಣಾ ಸ್ಥಳಗಳಲ್ಲಿ ಸಂಗ್ರಹಿಸಲು ಯೋಜಿಸಲಾಗಿತ್ತು. ಆದ್ದರಿಂದ ಎರಡೂ ಡಿಪಿಆರ್‌ಗಳಲ್ಲಿ ಸಂಗ್ರಹಣಾ ಟ್ಯಾಂಕ್‌ಗಳಿಗೆ ಅವಕಾಶ ಲಭ್ಯವಿದ್ದುದರಿಂದ ಸಮತೋಲನ ಜಲಾಶಯದ ಸಾಮರ್ಥ್ಯವನ್ನು ಕಡಿಮೆ ಮಾಡಲು ನೀಡಲಾದ ಮೇಲಿನ ಸಮರ್ಥನೆಯು ಸ್ವೀಕಾರಾರ್ಹವಾಗಿಲ್ಲ.

ಯೋಜಿಸುವಿಕೆಯಲ್ಲಿ ಈ ಕೆಳಗಿನ ಲೋಪಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು:

2.1.1 ಡಿಪಿಆರ್‌ಗಳಲ್ಲಿ ಪೂರ್ಣಗೊಳಿಸುವಿಕೆಯ ಅವಧಿಯನ್ನು ನಿಗದಿಪಡಿಸದಿರುವುದು

ಭಾರತ ಸರ್ಕಾರದ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಬಿಡುಗಡೆ ಮಾಡಿದ (ಜೂನ್ 2010) ಯೋಜನಾ ಅನುಷ್ಠಾನ ಕೈಪಿಡಿಯು[15] ಯೋಜನೆಯ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ನಿಯಂತ್ರಿಸಲು ಮತ್ತು ಮೇಲ್ವಿಚಾರಣೆ ಮಾಡಲು ಒಂದು ಸಾಧನವಾಗಿ ಬಳಸಬಹುದಾದ ನಿರ್ದಿಷ್ಟ ಸಮಯದ ವೇಳಾಪಟ್ಟಿ ಮತ್ತು ದೃಢೀಕೃತ ವೆಚ್ಚಗಳೊಂದಿಗೆ ಯೋಜನೆಯ ಎಲ್ಲಾ ಘಟಕಗಳ ಸಂಪೂರ್ಣ ವಿಘಟನೆಯನ್ನು ಡಿಪಿಆರ್ ಒಳಗೊಂಡಿರಬೇಕು ಎಂದು ಸೂಚಿಸುತ್ತದೆ. ಆದರೆ, ಯೋಜನೆಯ ಪೂರ್ಣಗೊಳಿಸುವಿಕೆ ಮತ್ತು ಕುಡಿಯುವ ನೀರಿನ ಉದ್ದೇಶಿತ ಪ್ರಯೋಜನವನ್ನು ತಲುಪಿಸುವ ಸಮಯವನ್ನು ಸರ್ಕಾರ ನಿರ್ಧರಿಸಿರಲಿಲ್ಲ ಅಥವಾ ವಿಜೆಎನ್‌ಎಲ್ ಬದ್ಧವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯಾವುದೇ ಡಿಪಿಆರ್‌ಗಳು ಯೋಜನೆಯ ಪೂರ್ಣಗೊಳಿಸುವಿಕೆಯ ದಿನಾಂಕವನ್ನು ನಿಗದಿಪಡಿಸಿರಲ್ಲ. ಹಂತ–I ಮತ್ತು ಹಂತ–IIರ ಕಾಮಗಾರಿಗಳನ್ನು ಯಾವುದೇ ಸಮನ್ವಯತೆಯಿಲ್ಲದೆ ಪ್ಯಾಕೇಜ್‌ಗಳಲ್ಲಿ ಕಾರ್ಯಗತ ಗೊಳಿಸಲಾಗುತ್ತಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನೆಯಲ್ಲಿನ ಈ ಪ್ರಮುಖ ಲೋಪವು ಕಾಮಗಾರಿ ಘಟಕಗಳಿಗೆ ಆದ್ಯತೆ ನೀಡದಿರುವಲ್ಲಿ, ಕಾಮಗಾರಿಗಳ ಅಸಂಗತ ಕಾರ್ಯಗತಗೊಳಿಸುವಿಕೆ ಮತ್ತು ತುಂಡುತುಂಡಾಗಿ ಮೂಲಸೌಕರ್ಯಗಳನ್ನು ರಚಿಸುವಲ್ಲಿ ಪರಿಣಮಿಸಿತು. ಪ್ರಾರಂಭವಾದ 12 ವರ್ಷಗಳ ನಂತರವೂ ಯೋಜನೆಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ.

ಪ್ರಮುಖ ರಚನೆಗಳ ನಿರ್ಮಾಣ ಮತ್ತು 273 ಕಿ.ಮೀ ಉದ್ದದ ಕಾಲುವೆ ನಿರ್ಮಾಣ ಹಾಗೂ ಸುಮಾರು 9141 ಎಕರೆ ಭೂಸ್ವಾಧೀನವನ್ನು ಒಳಗೊಂಡ ಇಂತಹ ಸಮಗ್ರ ಯೋಜನೆಗೆ ಡಿಪಿಆರ್‌ನಲ್ಲಿ ಸಮಯಸೂಚಿಯನ್ನು ನಿಗದಿಪಡಿಸುವುದು ಕಷ್ಟಕರವಾಗಿತ್ತು ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024). ಅಗತ್ಯವಿರುವ ದತ್ತಾಂಶ ಸಂಗ್ರಹಣೆ (ಸ್ಥಳಾಕೃತಿಯ ಪದರಗಳು, ಜಲಾನಯನ ಪ್ರದೇಶದ ಗಡಿ ಗುರುತಿಸುವಿಕೆ, ತಿರುವು ರಚನೆಗಳ ನಿರ್ಮಾಣಕ್ಕೆ ಸೂಕ್ತವಾದ ಸ್ಥಳಗಳ ಗುರುತಿಸುವಿಕೆ, ಪಂಪ್‌ಹೌಸ್, ರೇಸಿಂಗ್ ಮೇನ್ (ಪೈಪ್‌ಲೈನ್) ನಿರ್ಮಾಣ ಇತ್ಯಾದಿ) ಹಾಗೂ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅನುಮತಿಯಂತಹ ಯೋಜನೆಯ ವಿವಿಧ ಅಂಶಗಳನ್ನು ಇದು ಒಳಗೊಂಡಿದ್ದರಿಂದ ಡಿಪಿಆರ್‌ನಲ್ಲಿ ಪೂರ್ಣಗೊಳಿಸುವ ಸಂಭವನೀಯ ದಿನಾಂಕವನ್ನು ಒದಗಿಸುವುದು ಸಾಧ್ಯವಿರಲಿಲ್ಲ/ಪ್ರಾಯೋಗಿಕವಾಗಿರಲಿಲ್ಲ. ಯೋಜನೆಯನ್ನು ಪೂರ್ಣಗೊಳಿಸಲು ದಿನಾಂಕವನ್ನು ಈಗ ನಿಗದಿಪಡಿಸಲಾಗಿದೆ ಮತ್ತು ಯೋಜನೆಯು 01ನೇ ನವೆಂಬರ್ 2026ರೊಳಗೆ ಪೂರ್ಣಗೊಳ್ಳುತ್ತದೆ ಎಂದೂ ಸಹ ಸರ್ಕಾರವು ತಿಳಿಸಿತು.

ಡಿಪಿಆರ್‌ಗಳಲ್ಲಿ ಪೂರ್ಣಗೊಳಿಸುವ ಅವಧಿಯನ್ನು ನಿರ್ದಿಷ್ಟಪಡಿಸದಿರುವುದು ಯೋಜನಾ ಅನುಷ್ಠಾನ ಕೈಪಿಡಿಯಲ್ಲಿ ಸೂಚಿಸಲಾದ ಮಾನದಂಡಗಳ ಉಲ್ಲಂಘನೆಯಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಸರ್ಕಾರದ ಉತ್ತರದಿಂದ ಕಂಡುಬರುವಂತೆ, ವಿವಿಧ ಘಟಕಗಳನ್ನು ಪೂರ್ಣಗೊಳಿಸಲು ಸಮಯವನ್ನು ನಿರ್ದಿಷ್ಟಪಡಿಸದೆ ಯೋಜನೆಯನ್ನು ಪ್ರಾರಂಭಿಸಲಾಗಿತ್ತು ಮತ್ತು ಕಾರ್ಯಗತಗೊಳಿಸುವಿಕೆಯು ತಾತ್ಕಾಲಿಕವಾಗಿತ್ತು. ಯೋಜನೆಯ ಪೂರ್ಣಗೊಳಿಸುವಿಕೆಗೆ ನಿರ್ದಿಷ್ಟ ಸಮಯದ ಅನುಪಸ್ಥಿತಿಯಲ್ಲಿ, ವಿಭಿನ್ನ ಘಟಕಗಳ ಸಮನ್ವಯ ಸಾಧ್ಯವಾಗಲಿಲ್ಲ; ಇದು ವಿನ್ಯಾಸ/ಜೋಡಣೆಯನ್ನು ಅಂತಿಮಗೊಳಿಸುವಲ್ಲಿ ದೀರ್ಘ ವಿಳಂಬಕ್ಕೆ ಕಾರಣವಾಗಿ, ಹಣಕಾಸಿನ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ ಮತ್ತು ತುಂಡು ತುಂಡಾಗಿ ಮೂಲಸೌಕರ್ಯವನ್ನು ರಚಿಸುವುದರಲ್ಲಿ ಪರಿಣಮಿಸಿ ಯೋಜನೆಯು ಪ್ರಾರಂಭವಾದ 12 ವರ್ಷಗಳ ನಂತರವೂ ಉದ್ದೇಶಿತ ಗುರಿಯನ್ನು ಸಾಧಿಸಲಾಗಲಿಲ್ಲ.

---

[15] ಕೇಂದ್ರ ಮತ್ತು ರಾಜ್ಯ ವಲಯದ ನಿಧಿಯ ಅಡಿಯಲ್ಲಿ ಪ್ರಮುಖ ಯೋಜನೆಗಳ ಅನುಷ್ಠಾನಕ್ಕೆ ಮಾರ್ಗಸೂಚಿಗಳು

2.1.2 ಸಂಗ್ರಹಣಾ ಜಲಾಶಯದ ಸ್ಥಳವನ್ನು ಅಂತಿಮಗೊಳಿಸುವಲ್ಲಿ ಅತಿಯಾದ ವಿಳಂಬ

ಸಮತೋಲನ ಜಲಾಶಯದ ನಿರ್ಮಾಣವು ಯೋಜನೆಯ ನಿರ್ಣಾಯಕ ಅಂಶವಾಗಿದೆ ಏಕೆಂದರೆ ಮಳೆಗಾಲದಲ್ಲಿ ಪಶ್ಚಿಮ ಘಟ್ಟಗಳಿಂದ ಪಡೆಯಲಾದ ನೀರನ್ನು ಬೇಸಿಗೆಯ ತಿಂಗಳುಗಳಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಕುಡಿಯುವ ನೀರಿನ ನಿರಂತರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸಂಗ್ರಹಿಸಬೇಕಾಗುತ್ತದೆ. ಸಮತೋಲನ ಜಲಾಶಯದ ಸ್ಥಳವನ್ನು ದೃಢೀಕರಿಸಲು ಸರ್ಕಾರ/ವಿಜೆಎನ್‌ಎಲ್ ವಿಫಲವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದನ್ನು 2012ರಲ್ಲಿ ಮೂಲತಃ ಕಲ್ಪಿಸಲಾಗಿದ್ದರಿಂದ ಎರಡು ಬಾರಿ (ಫೆಬ್ರವರಿ 2014 ಮತ್ತು ಜನವರಿ 2023) ಬದಲಾಯಿಸಲಾಯಿತು. ದೇವರಾಯನದುರ್ಗದಲ್ಲಿ 10 ಟಿಎಮ್‌ಸಿ ಸಾಮರ್ಥ್ಯದ ಸಮತೋಲನ ಜಲಾಶಯ ನಿರ್ಮಾಣದ ಆರಂಭಿಕ ಪ್ರಸ್ತಾವನೆಯನ್ನು (ಡಿಪಿಆರ್–I/ಜುಲೈ 2012) 1428.27 ಎಕರೆ ಅರಣ್ಯ ಭೂಮಿ, ಪ್ರಮುಖ ರಸ್ತೆಗಳು ಮತ್ತು ಐತಿಹಾಸಿಕ ಸ್ಥಳವು ಮುಳುಗುವ ಕಳವಳದಿಂದಾಗಿ ಕೈಬಿಡಲಾಯಿತು. ತರುವಾಯ, ಡಿಪಿಆರ್–IIರಲ್ಲಿ (ಫೆಬ್ರವರಿ 2014), ಭೈರಗೊಂಡ್ಲುವಿನಲ್ಲಿ 5.78 ಟಿಎಮ್‌ಸಿ ಕಡಿಮೆ ಸಾಮರ್ಥ್ಯದ ಸಮತೋಲನ ಜಲಾಶಯವನ್ನು ನಿರ್ಮಿಸಲು ಪ್ರಸ್ತಾವಿಸಲಾಯಿತು. ಇದಕ್ಕಾಗಿ 5078 ಎಕರೆ ಖಾಸಗಿ ಭೂಮಿಯನ್ನು (ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 2388 ಎಕರೆ ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿ 2690 ಎಕರೆ) ಸ್ವಾಧೀನಪಡಿಸಿಕೊಳ್ಳಬೇಕಾಗಿತ್ತು. ಎರಡು ತಾಲ್ಲೂಕುಗಳ ಗ್ರಾಮಗಳಲ್ಲಿನ ಭೂಮಿಯ ಮಾರ್ಗದರ್ಶನ ಮೌಲ್ಯದಲ್ಲಿನ ಬೃಹತ್ ವ್ಯತ್ಯಾಸವನ್ನು ಗಮನದಲ್ಲಿಟ್ಟುಕೊಂಡು, ರೈತರು ಎಲ್ಲಾ ಗ್ರಾಮಗಳ ಭೂಮಿಯನ್ನು ಒಂದೇ ಘಟಕವಾಗಿ ಪರಿಗಣಿಸಿ ಏಕರೂಪದ ದರದಲ್ಲಿ ಪಾವತಿಸಬೇಕೆಂದು ಒತ್ತಾಯಿಸಿದರು. ಎಲ್ಲಾ ಗ್ರಾಮಗಳಿಗೆ ಏಕರೂಪದ ದರಗಳನ್ನು ಪಾವತಿಸಲು ವಿಜೆಎನ್‌ಎಲ್ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದರೂ (ಸೆಪ್ಟೆಂಬರ್ 2019) ಸಹ ಸರ್ಕಾರವು ಅದಕ್ಕೆ ತನ್ನ ಅನುಮೋದನೆಯನ್ನು ನೀಡಲಿಲ್ಲ. ಹೀಗೆ, ನಂತರ ಡಿಪಿಆರ್–IIIರಲ್ಲಿ (ಜನವರಿ 2023), ಮೂರು ಹಳ್ಳಿಗಳಲ್ಲಿ 1200.50 ಎಕರೆಗಳ ಮುಳುಗಡೆಯಾಗುವ ದೊಡ್ಡಬಳ್ಳಾಪುರ ತಾಲ್ಲೂಕಿನ ಲಕ್ಕೇನಹಳ್ಳಿ ಗ್ರಾಮದಲ್ಲಿ ಕೇವಲ ಎರಡು ಟಿಎಮ್‌ಸಿ ಸಾಮರ್ಥ್ಯದೊಂದಿಗೆ ಸಮತೋಲನ ಜಲಾಶಯವನ್ನು ನಿರ್ಮಿಸಲು ಪ್ರಸ್ತಾವಿಸಲಾಯಿತು.

ಜನವರಿ 2023ರಲ್ಲಿ ಡಿಪಿಆರ್–IIIರ ಪ್ರಕಾರ ಸಮತೋಲನ ಜಲಾಶಯ ನಿರ್ಮಾಣಕ್ಕಾಗಿ ವಿಜೆಎನ್‌ಎಲ್ ಹೊಸ ಸ್ಥಳವನ್ನು ಅಂತಿಮಗೊಳಿಸಿದ್ದರೂ ಸಹ, ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ/ಅಂತಿಮ ಅಧಿಸೂಚನೆ ಮತ್ತು ಪರಿಹಾರ ನಿಗದಿಪಡಿಸುವುದು ಮುಂತಾದ ಪ್ರಕ್ರಿಯೆಗಳನ್ನು ವಿಜೆಎನ್‌ಎಲ್ ಇದುವರೆಗೂ (ಡಿಸೆಂಬರ್ 2024) ಪ್ರಾರಂಭಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಡಿಪಿಆರ್‌ಗಳು ಮತ್ತು ಸಂಬಂಧಿತ ದಾಖಲೆಗಳ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ತಿಳಿಯಪಡಿಸಿತು:

- ದೇವರಾಯನದುರ್ಗದಲ್ಲಿ 10 ಟಿಎಮ್‌ಸಿ ಜಲಾಶಯ ನಿರ್ಮಾಣಕ್ಕೆ ಭೂಮಿಯು ಸೂಕ್ತವಾಗಿಲ್ಲದಿರುವ ಬಗ್ಗೆ ಡಿಪಿಆರ್–IIರಲ್ಲಿ ಹೇಳಲಾದ ಕಾರಣಗಳು ಸಮರ್ಥನೀಯವಾಗಿರಲಿಲ್ಲ ಏಕೆಂದರೆ ಇವು ತಿಳಿದಿರುವ ಸಂಗತಿಗಳಾಗಿದ್ದು, ಕಾರ್ಯಸಾಧ್ಯತಾ ಅಧ್ಯಯನ ಹಂತದಲ್ಲಿಯೇ ಅವುಗಳನ್ನು ಗುರುತಿಸಬೇಕಾಗಿತ್ತು. ಇದು ಡಿಪಿಆರ್–I ಅನ್ನು ರೂಪಿಸುವಲ್ಲಿ ಸೂಕ್ತ ಶ್ರದ್ಧೆಯ ಕೊರತೆಯನ್ನು ಸೂಚಿಸುತ್ತದೆ ಏಕೆಂದರೆ ಸಮೀಕ್ಷೆ ಮತ್ತು ಮಾಹಿತಿ ಸಂಗ್ರಹಣೆಯಲ್ಲಿ ಕಾಳಜಿ ಮತ್ತು ನಿಖರತೆ ಇಲ್ಲದೆ ಡಿಪಿಆರ್ ಅನ್ನು ತಯಾರಿಸಲಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.
- ಡಿಪಿಆರ್–IIರಲ್ಲಿ, ಅಂತಿಮ ಬಳಕೆದಾರರಿಗೆ 24.01 ಟಿಎಮ್‌ಸಿ ನೀರಿನಲ್ಲಿ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಹಂಚಿಕೆಯಾದ ನೀರಿನ ಪ್ರಮಾಣ 12.33 ಟಿಎಮ್‌ಸಿ ಆಗಿತ್ತು. ಅದರಲ್ಲಿ, 6.66 ಟಿಎಮ್‌ಸಿ (ಶೇಕಡಾ 54) ನೀರನ್ನು ಮಳೆಗಾಲದಲ್ಲಿ (ಜೂನ್ ನಿಂದ ಅಕ್ಟೋಬರ್) ಮತ್ತು ಉಳಿದ 5.73 ಟಿಎಮ್‌ಸಿ (ಶೇಕಡಾ 46) ನೀರನ್ನು ನವೆಂಬರ್‌ನಿಂದ ಫೆಬ್ರವರಿ ಅವಧಿಯಲ್ಲಿ ಪಂಪ್ ಮಾಡಲು ಯೋಜಿಸಲಾಗಿತ್ತು ಏಕೆಂದರೆ ಸಮತೋಲನ ಜಲಾಶಯದಲ್ಲಿ 5.78 ಟಿಎಮ್‌ಸಿ ನೀರನ್ನು ಮಾತ್ರ ಸಂಗ್ರಹಿಸಬಹುದು. ಡಿಪಿಆರ್–III ರಲ್ಲಿ ಸಮತೋಲನ ಜಲಾಶಯದ ಸಂಗ್ರಹ ಸಾಮರ್ಥ್ಯವನ್ನು ಎರಡು ಟಿಎಮ್‌ಸಿಗೆ ಇಳಿಸಿದ ಕಾರಣ, ಜೂನ್‌ನಿಂದ ಅಕ್ಟೋಬರ್‌ವರೆಗೆ ಮಳೆಗಾಲದಲ್ಲಿ 10.30 ಟಿಎಮ್‌ಸಿ

(ಶೇಕಡಾ 84) ನೀರನ್ನು ಪಂಪ್ ಮಾಡಬೇಕಾಗಿತ್ತು. ಗುರುತಿಸಲಾದ ಸಣ್ಣ ನೀರಾವರಿ ಟ್ಯಾಂಕ್‌ಗಳಿಗೆ ಹೆಚ್ಚಿದ ಪ್ರಮಾಣದ ನೀರನ್ನು ಪಂಪ್ ಮಾಡಲು ಪಂಪ್‌ಗಳ ಸಾಮರ್ಥ್ಯ ಮತ್ತು ರೇಸಿಂಗ್ ಮೇನ್‌ಗಳ (ಪೈಪ್‌ಲೈನ್) ಗಾತ್ರವನ್ನು ಹೆಚ್ಚಿಸುವ ಅಗತ್ಯವಿದ್ದಿತು.

- ಡಿಪಿಆರ್–IIIರಲ್ಲಿ, ಸಮತೋಲನ ಜಲಾಶಯದ ಸಾಮರ್ಥ್ಯದಲ್ಲಿ ಕಡಿತ (5.78ರಿಂದ 2 ಟಿಎಮ್‌ಸಿಗೆ) ಮತ್ತು ಸಮತೋಲನ ಜಲಾಶಯದ ಸ್ಥಳ ಬದಲಾವಣೆಗೆ ದೊಡ್ಡಬಳ್ಳಾಪುರ ಮತ್ತು ಕೊರಟಗೆರೆ ಎರಡು ತಾಲ್ಲೂಕುಗಳಡಿಯಲ್ಲಿ ಬರುವ ಹಳ್ಳಿಗಳಲ್ಲಿ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ಏಕರೂಪದ ದರಕ್ಕಾಗಿ ರೈತರ ಬೇಡಿಕೆಯು ಕಾರಣವಾಗಿತ್ತು. 2017ರ ಮಾರ್ಗಸೂಚಿ ಮೌಲ್ಯದ ಪ್ರಕಾರ, ದೊಡ್ಡಬಳ್ಳಾಪುರ ತಾಲ್ಲೂಕು ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿರುವ ಭೂಮಿಗೆ ಪಾವತಿಸಬೇಕಾದ ಪರಿಹಾರವು ಕ್ರಮವಾಗಿ ಎಕರೆಗೆ ₹32.00 ಲಕ್ಷ ಮತ್ತು ₹20.00 ಲಕ್ಷ ಆಗಿತ್ತು. ಅದರಂತೆ, ವಿಜೆಎನ್‌ಎಲ್ ಎರಡೂ ತಾಲ್ಲೂಕುಗಳಿಗೆ ಏಕರೂಪದ ದರಗಳನ್ನು ಪಾವತಿಸಲು ₹319.47 ಕೋಟಿ ಹೆಚ್ಚುವರಿ ಆರ್ಥಿಕ ಹೊರೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು (ಸೆಪ್ಟೆಂಬರ್ 2019) ಸಲ್ಲಿಸಿತು. ಡಿಪಿಆರ್–IIIರಲ್ಲಿ (ಜನವರಿ 2023) ಲಕ್ಕೇನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಪ್ರಸ್ತಾಪಿಸಲಾದ ಸಮತೋಲನ ಜಲಾಶಯದ ಕಾಮಗಾರಿಯ ವ್ಯಾಪ್ತಿಯಲ್ಲಿನ ಬದಲಾವಣೆಗಳಿಂದಾಗಿ ಅಂದರೆ, ಪಂಪಿಂಗ್ ಸಾಮರ್ಥ್ಯದಲ್ಲಿನ ಹೆಚ್ಚಳ, 3.6 ಕಿ.ಮೀ. ಗುರುತ್ವಾಕರ್ಷಣ ಕಾಲುವೆಯ ಹೆಚ್ಚುವರಿ ಉದ್ದ, ಗುರುತ್ವಾಕರ್ಷಣ ಫೀಡರ್ ಕಾಲುವೆಯ ಹೆಚ್ಚುವರಿ ಸಾಗಿಸುವ ಸಾಮರ್ಥ್ಯ ಮತ್ತು ದರಪಟ್ಟಿಯ ಪರಿಷ್ಕರಣೆಯಿಂದಾಗಿ ₹940.92 ಕೋಟಿಯಷ್ಟು ಆರ್ಥಿಕ ಪರಿಣಾಮ ಉಂಟಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ದೊಡ್ಡಬಳ್ಳಾಪುರ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಸಮತೋಲನ ಜಲಾಶಯದ ಪ್ರಸ್ತಾವನೆಯನ್ನು ಅಂತಿಮಗೊಳಿಸುವಲ್ಲಿ ಸರ್ಕಾರದ ನಿಷ್ಕ್ರಿಯತೆಯು, ಮೇಲೆ ಚರ್ಚಿಸಿದಂತೆ, ವ್ಯಾಪ್ತಿಯಲ್ಲಿನ ಬದಲಾವಣೆಗಳಿಂದಾಗಿ ₹621.45 ಕೋಟಿ (₹940.42 ಕೋಟಿ – ₹319.47 ಕೋಟಿ) ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು.
- ದೊಡ್ಡಬಳ್ಳಾಪುರ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ನಿರ್ಧಾರವನ್ನು ಸರ್ಕಾರ ತ್ವರಿತವಾಗಿ ತೆಗೆದುಕೊಂಡಿದ್ದರೆ, ಸಮತೋಲನ ಜಲಾಶಯದ ಕಾಮಗಾರಿಯು ಭೂಸ್ವಾಧೀನದ 18 ತಿಂಗಳೊಳಗೆ 5.78 ಟಿಎಮ್‌ಸಿ ಹೆಚ್ಚಿನ ಸಾಮರ್ಥ್ಯದೊಂದಿಗೆ ಕಡಿಮೆ ವೆಚ್ಚದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿತ್ತು, ಇದರಿಂದಾಗಿ ಯೋಜನೆಯ ಉಪಯುಕ್ತತೆ ಹೆಚ್ಚಾಗುತ್ತಿತ್ತು.

ಮೇಲಿನ ಸಂಗತಿಗಳು ಸಮತೋಲನ ಜಲಾಶಯ ನಿರ್ಮಾಣಕ್ಕೆ ಅಗತ್ಯವಾದ ಭೂಮಿಯನ್ನು ಗುರುತಿಸಲು ಮತ್ತು ಸ್ವಾಧೀನಪಡಿಸಿಕೊಳ್ಳಲು ವಿಫಲವಾಗಿರುವುದರ ಜೊತೆಗೆ ಭೂಸ್ವಾಧೀನಕ್ಕೆ ಅನುಮೋದನೆಯನ್ನು ತಡೆಹಿಡಿದಿರುವುದು, ಸರ್ಕಾರದ ಪೂರ್ವಾಲೋಚನೆಯ ಕೊರತೆಯನ್ನು ಸೂಚಿಸುತ್ತವೆ. ಯೋಜನೆಯ ಜೋಡಣೆ ಮತ್ತು ವಿನ್ಯಾಸದಲ್ಲಿ ಆಗಾಗ್ಗೆ ಬದಲಾವಣೆಗಳು ಉಂಟಾದದ್ದು, ಯೋಜನೆಯು ಪೂರ್ಣಗೊಳ್ಳದಿರುವುದರ ಜೊತೆಗೆ ವ್ಯಾಪ್ತಿ ಬದಲಾವಣೆಗಳು ಮತ್ತು ದರಪಟ್ಟಿಯ ಪರಿಷ್ಕರಣೆಯಿಂದಾಗಿ ವೆಚ್ಚದ ಹೆಚ್ಚಳದಲ್ಲಿ ಪರಿಣಮಿಸಿತು.

ಡಿಪಿಆರ್–I ಮತ್ತು ಡಿಪಿಆರ್–IIಕ್ಕೆ ಸಂಬಂಧಿಸಿದ ಲೆಕ್ಕಪರಿಶೋಧನಾ ಅವಲೋಕನಗಳಿಗೆ ಸರ್ಕಾರವು ಯಾವುದೇ ನಿರ್ದಿಷ್ಟ ಉತ್ತರವನ್ನು ಸಲ್ಲಿಸಲಿಲ್ಲ (ಮಾರ್ಚ್ 2024). ಡಿಪಿಆರ್–IIIರಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ, 2013ರ ಭೂಸ್ವಾಧೀನ ಕಾಯ್ದೆಯ ನಿಬಂಧನೆಗಳು ಎರಡು ವಿಭಿನ್ನ ತಾಲ್ಲೂಕುಗಳಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಗೆ ಏಕರೂಪದ ದರವನ್ನು ಪಾವತಿಸಲು ಅವಕಾಶ ನೀಡುವುದಿಲ್ಲ ಮತ್ತು ಅಂತಹ ಯಾವುದೇ ಪಾವತಿಯು ಇತರ ನೀರಾವರಿ ಯೋಜನೆಗಳಿಗೆ ಪೂರ್ವಭಾವಿಯಾಗುತ್ತದೆ ಎಂದು ಸರ್ಕಾರ ತಿಳಿಸಿತು.

ಈ ಕೆಳಗಿನ ಕಾರಣಗಳಿಂದಾಗಿ ಉತ್ತರವನ್ನು ಒಪ್ಪಲಾಗುವುದಿಲ್ಲ:

i) ಮೇಲೆ ಹೇಳಿದಂತೆ ಭೂಸ್ವಾಧೀನ ಕಾಯ್ದೆ, 2013 ಏಕರೂಪದ ದರ ಪಾವತಿಯನ್ನು ನಿಷೇಧಿಸಿಲ್ಲ.

ii) ಪ್ರಸ್ತುತ ಪ್ರಕರಣದಲ್ಲಿ, ಬೆಲೆ ನಿಗದಿ ಸಮಿತಿಯ ಅಧ್ಯಕ್ಷರು ಮತ್ತು ವಿಜೆಎನ್ಎಲ್‌ನ ನಿರ್ದೇಶಕ ಮಂಡಳಿಯ ಸದಸ್ಯರು ಸಹ ಆಗಿದ್ದ ತುಮಕೂರು ಜಿಲ್ಲಾಧಿಕಾರಿಗಳು ಈ ಎರಡು ತಾಲ್ಲೂಕುಗಳಿಗೆ ಏಕರೂಪದ ದರ ಪಾವತಿಯನ್ನು ಶಿಫಾರಸು ಮಾಡಿದ್ದರು.

iii) ಈ ಯೋಜನೆಯ ಹಂತ–1ರ ಕಾಮಗಾರಿಗಳಿಗಾಗಿ ಸಕಲೇಶಪುರ ತಾಲ್ಲೂಕಿನ 22 ಹಳ್ಳಿಗಳಲ್ಲಿ 448 ಎಕರೆ ಭೂಮಿಯನ್ನು ಖರೀದಿಸಲು ವಿಜೆಎನ್ಎಲ್ ಈಗಾಗಲೇ ಏಕರೂಪದ ದರದಲ್ಲಿ ಪಾವತಿ ಮಾಡಿದೆ.

2.1.3 ಲಭ್ಯವಿರುವ ಇಳುವರಿಯ ತಪ್ಪಾದ ಲೆಕ್ಕಾಚಾರ

ಯೋಜಿಸುವಿಕೆ ಮತ್ತು ವಿನ್ಯಾಸಕ್ಕೆ ಇಳುವರಿಯು ನಿರ್ಣಾಯಕ ನಿಯತಾಂಕವಾಗಿತ್ತು. ಕೆಎನ್ಎನ್ಎಲ್ (ಸೆಪ್ಟೆಂಬರ್ 2010) ಬೆಂಗಳೂರಿನ ಮೆಸರ್ಸ್ ಇಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಸಲಹೆಗಾರ) ಮೂಲಕ ಯೋಜನೆಯ ಕಾರ್ಯಸಾಧ್ಯತಾ ಅಧ್ಯಯನವನ್ನು ಕೈಗೊಂಡಿತು, ಇದರಲ್ಲಿ ನೀರಿನ ತಿರುವಿಗಾಗಿ ಎಂಟು ಹೊಳೆಗಳನ್ನು ಗುರುತಿಸಲಾಯಿತು. ತಿರುವು ಮಾಡಬಹುದಾದ ನೀರನ್ನು ಶೇಕಡಾ 50ರಷ್ಟು ಅವಲಂಬನೆಯಲ್ಲಿ ಸುಮಾರು 24.01 ಟಿಎಮ್‌ಸಿ ಎಂದು ಅಂದಾಜಿಸಲಾಯಿತು. ಅಧ್ಯಯನ ವರದಿಯಲ್ಲಿ ಇಳುವರಿಯನ್ನು ಲೆಕ್ಕಾಚಾರ ಮಾಡಲು ಅಳವಡಿಸಿಕೊಂಡ ವಿಧಾನವು ಈ ಕೆಳಗಿನ ನ್ಯೂನತೆಗಳಿಂದ ಬಾಧಿತವಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2.1.3.1 ಇಳುವರಿ ಲೆಕ್ಕಾಚಾರಕ್ಕಾಗಿ ದತ್ತಾಂಶವನ್ನು ಒಟ್ಟುಗೂಡಿಸುವಲ್ಲಿನ ತಪ್ಪುಗಳು

- ಸರಾಸರಿ ಮಳೆಯ ದತ್ತಾಂಶವನ್ನು ಪಡೆಯಲು ಸಲಹೆಗಾರರು ವೀಯರ್ ಗಳ ಜಲಾನಯನ ಪ್ರದೇಶದ (ಕೊಟ್ಟನಹಳ್ಳಿ, ಹೊಂಗದಹಳ್ಳ ಮತ್ತು ಕಾಡುಮನೆ ಎಸ್ಟೇಟ್) ಒಳಗೆ/ಸಮೀಪದಲ್ಲಿರುವ ಖಾಸಗಿ ಭೂಮಾಲೀಕರ ಮಾಪನ ಕೇಂದ್ರದ ಹಿಂದಿನ 12 ರಿಂದ 15 ವರ್ಷಗಳ ಮಳೆಯ ದತ್ತಾಂಶವನ್ನು ಬಳಸಿಕೊಂಡರು. ಖಾಸಗಿ ಮಾಪನ ಕೇಂದ್ರಗಳಿಂದ ಪಡೆದ ದತ್ತಾಂಶದ ಸತ್ಯಾಸತ್ಯತೆಯ ಸ್ವತಂತ್ರ ಪರಿಶೀಲನೆ ನಡೆಸಲಿಲ್ಲ. ವೀಯರ್ ಗಳ ಪ್ರಸ್ತಾವಿತ ಜಲಾನಯನ ಪ್ರದೇಶದ ಒಳಗಿರುವ ಮಾರನಹಳ್ಳಿ ಮತ್ತು ಹಾರ್ಲೆಯಲ್ಲಿರುವ ಸರ್ಕಾರಿ ಮಳೆ ಮಾಪನ ಕೇಂದ್ರಗಳು ಮತ್ತು ವೀಯರ್ ಪ್ರದೇಶಕ್ಕೆ ಬಹಳ ಹತ್ತಿರದಲ್ಲಿರುವ ಮೂರು ಮಳೆ ಮಾಪನ ಕೇಂದ್ರಗಳಲ್ಲಿ (ಹೇತೂರು, ಯಸ್ಳೂರು ಮತ್ತು ಬಣಗೆರೆ) ಲಭ್ಯವಿರುವ ಮಳೆಯ ದತ್ತಾಂಶವನ್ನು ಸಲಹೆಗಾರರು ಬಳಸಲಿಲ್ಲ.
- ಖಾಸಗಿ ಮಳೆ ಮಾಪನ ಕೇಂದ್ರಗಳಿಂದ ಪಡೆದ ದತ್ತಾಂಶದ ಸಹಾಯದಿಂದ ಸಲಹೆಗಾರರು ವಾರ್ಷಿಕ ಮಳೆ 6280 ಮಿ.ಮೀ. ಎಂದು ಅಂದಾಜಿಸಿದ್ದರು. 176.74 ಚದರ ಕಿ.ಮೀ.ನ ಸಂಪೂರ್ಣ ಜಲಾನಯನ ಪ್ರದೇಶಕ್ಕೆ ಅದೇ ವಾರ್ಷಿಕ ಸರಾಸರಿ ಮಳೆಯನ್ನು ಏಕರೂಪವಾಗಿ ತೆಗೆದುಕೊಳ್ಳಲಾಯಿತು. ಆದರೆ, ಕರ್ನಾಟಕದ ಅರ್ಥಶಾಸ್ತ್ರ ಮತ್ತು ಅಂಕಿಅಂಶಗಳ ಇಲಾಖೆಯು ಪ್ರಕಟಿಸಿದ ವಾರ್ಷಿಕ ವರದಿಗಳಿಂದ (2011–2018ರ ಅವಧಿಯಲ್ಲಿ 2013 ಅನ್ನು ಹೊರತುಪಡಿಸಿ) ಜಲಾನಯನ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಾರ್ಷಿಕ ಮಳೆಯು ಸ್ಥಳ ಬದಲಾವಣೆಯೊಂದಿಗೆ ಬದಲಾಗುತ್ತದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿವರಗಳನ್ನು **ಕೋಷ್ಟಕ–2.2**ರಲ್ಲಿ ನೀಡಲಾಗಿದೆ.

ಕೋಷ್ಟಕ–2.2: ವೀಯರ್ ನ ಜಲಾನಯನ ಪ್ರದೇಶಗಳ ಸುತ್ತಲಿನ ಮಾಪನ ಕೇಂದ್ರಗಳಲ್ಲಿ ದಾಖಲಾಗಿರುವ ಮಳೆಯ ವಿವರಗಳು

ಮಳೆ ಮಾಪಕ ಕೇಂದ್ರ	ದಾಖಲಾದ ಮಳೆ (ಮಿಮೀಗಳಲ್ಲಿ)							ವ್ಯತ್ಯಾಸದ ವ್ಯಾಪ್ತಿ ಶ್ರೇಣಿ (ಮಿಮೀ)	ಸರಾಸರಿ (ಮಿ.ಮೀ)
	2011	2012	2014	2015	2016	2017	2018		
ಮಾರನಹಳ್ಳಿ	5135	5238	4733	3677	4022	3347	6605	3347 ರಿಂದ 6605	4680
ಯಸಲೂರು	2447	1995	2565	2057	1981	2121	3435	1981 ರಿಂದ 3435	2372
ಹೆತೂರು	4267	3280	3841	2837	2577	2833	5124	2577 ರಿಂದ 5124	3537
ಬನಗೆರೆ	4855	3845	4632	3086	3703	3762	7480	3086 ರಿಂದ 7480	4480
ಹಾರ್ಲೆ	3389	2995	3730	2387	1670	1990	4144	1670 ರಿಂದ 4144	2901

ಆಧಾರ: ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ಇಲಾಖೆ ಪ್ರಕಟಿಸಿದ ವರದಿಗಳು

ಹೀಗೆ, ಜಲಾನಯನ ಪ್ರದೇಶದಲ್ಲಿ ಮತ್ತು ಸುತ್ತಮುತ್ತಲಿನ ಸರ್ಕಾರಿ ಮಾಪನ ಕೇಂದ್ರಗಳಲ್ಲಿ ಅಳೆಯಲಾದ ಮಳೆಯು ಡಿಪಿಆರ್‌ನಲ್ಲಿ ಪ್ರತಿ ವೀಯರ್‌ನ ಹರಿವಿನ ಲೆಕ್ಕಾಚಾರಕ್ಕಾಗಿ ಬಳಸಲಾದ ಖಾಸಗಿ ಮಾಪನ ಕೇಂದ್ರಗಳಿಂದ ಸಂಗ್ರಹಿಸಿದ ವಾರ್ಷಿಕ ಮಳೆ ದತ್ತಾಂಶಕ್ಕೆ ಹೋಲಿಸಿದರೆ ತುಂಬಾ ಕಡಿಮೆಯಿದ್ದಿತು.

- 2009 ರ ಅವಧಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ[16] (ಕೆಪಿಸಿಎಲ್) ಉದ್ದೇಶಿತ ವೀಯರ್‌ಗಳ ನೆರೆಹೊರೆಯಲ್ಲಿ ಮೂರು ನೀರು ಹರಿವು ಮಾಪನ ಕೇಂದ್ರಗಳನ್ನು (ಬಿದಳ್ಳಿ, ಮುಕನಮನೆ ಮತ್ತು ಮಾರನಹಳ್ಳಿ) ಸ್ಥಾಪಿಸಿತ್ತು. ಮೇಲಿನ ಮಾಪನ ಕೇಂದ್ರಗಳಲ್ಲಿ ಲಭ್ಯವಿರುವ ನಾಲ್ಕು ವರ್ಷಗಳ (2009–12) ದತ್ತಾಂಶದ ಆಧಾರದ ಮೇಲೆ ಸಲಹೆಗಾರರು ಪ್ರತಿ ಚದರ ಕಿಲೋಮೀಟರ್‌ಗೆ ಸರಾಸರಿ ಜಲಾನಯನ ಹರಿವನ್ನು ಲೆಕ್ಕ ಹಾಕಿದರು. ಮೇಲಿನ ಮಾಪನ ಕೇಂದ್ರಗಳ ಹರಿವು ಮತ್ತು ಜಲಾನಯನ ಪ್ರದೇಶವನ್ನು ಕೇಂದ್ರ ಜಲ ಆಯೋಗದ (ಸಿಡಬ್ಲ್ಯೂಸಿ) ಬಂಟ್ವಾಳ ಮಾಪನ ಕೇಂದ್ರದಲ್ಲಿ ಲಭ್ಯವಿರುವ ಹರಿವಿನ ದತ್ತಾಂಶದೊಂದಿಗೆ ಹೋಲಿಸಿ ಅವುಗಳ ನಡುವಿನ ಸಂಬಂಧವನ್ನು ಕಂಡುಹಿಡಿಯಲಾಯಿತು. ಮೇಲಿನ ಸಂಬಂಧದ ಆಧಾರದ ಮೇಲೆ, ಡಿಪಿಆರ್‌ನಲ್ಲಿ ಪರಿಗಣಿಸಲಾದ ಪ್ರತಿ ವೀಯರ್‌ನ 37 ವರ್ಷಗಳ ಅಂದರೆ 1971ರಿಂದ 2007ರವರೆಗಿನ ಹರಿವಿನ ದತ್ತಾಂಶವನ್ನು ಪಡೆಯಲಾಯಿತು. ಆದರೆ, ಕೇವಲ ನಾಲ್ಕು ವರ್ಷಗಳ ವಾಸ್ತವಿಕ ಹರಿವಿನ ದತ್ತಾಂಶವನ್ನು ಆಧರಿಸಿ 37 ವರ್ಷಗಳ ಹರಿವಿನ ದತ್ತಾಂಶವನ್ನು ಲೆಕ್ಕಹಾಕುವುದು ಸಮಂಜಸವಾದ ಮೌಲ್ಯಮಾಪನವಲ್ಲ ಎಂಬುದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿದೆ.

ಹರಿವಿನ ದತ್ತಾಂಶದ ಲೆಕ್ಕಾಚಾರವು 35 ವರ್ಷಗಳ ವಾರ್ಷಿಕ ಸರಾಸರಿ ಮಳೆಯನ್ನು ಅಳವಡಿಸಿಕೊಳ್ಳಲು ಅವಕಾಶ ನೀಡುವ ನೀರಾವರಿ ಕೈಪಿಡಿಯನ್ನು ಆಧರಿಸಿದೆ ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024). ಕೆಪಿಸಿಎಲ್ ಮಾಪನ ಕೇಂದ್ರಗಳಲ್ಲಿ ದಾಖಲಾದ ಮಳೆಯ ಇಳಿಕೆ ಪ್ರಮಾಣವನ್ನು ಪರಿಗಣಿಸಿ, ತಿರುಗಿಸಬಹುದಾದ ಇಳುವರಿಯನ್ನು 24.01 ಟಿಎಮ್‌ಸಿಗೆ ಪ್ರತಿಯಾಗಿ 22.14 ಟಿಎಮ್‌ಸಿ ಎಂದು ನಿರ್ಧರಿಸಲಾಯಿತು. ಡಿಪಿಆರ್–IIನ್ನು ಸಿದ್ಧಪಡಿಸುವ ಸಮಯದಲ್ಲಿ, **ಕೋಷ್ಟಕ–2.2**ರಲ್ಲಿ ಉಲ್ಲೇಖಿಸಲಾದ (ಲೆಕ್ಕಪರಿಶೋಧನೆಯಿಂದ) ಸರ್ಕಾರಿ ಮಾಪನ ಕೇಂದ್ರಗಳ ಮಳೆಯ ದತ್ತಾಂಶ ಲಭ್ಯವಿರಲಿಲ್ಲ ಎಂದು ಸರ್ಕಾರ ವಾದಿಸಿತು. ಲೆಕ್ಕಪರಿಶೋಧನೆಯು ಜೂನ್‌ನಿಂದ ನವೆಂಬರ್‌ಗೆ ಸಂಬಂಧಿಸಿದ ದತ್ತಾಂಶದ ಬದಲು ವಾರ್ಷಿಕ ಆಧಾರದ ಮೇಲೆ ಮಳೆಯ ದತ್ತಾಂಶವನ್ನು ಪರಿಗಣಿಸಿದೆ ಎಂದೂ ಸಹ ಸರ್ಕಾರವು ತಿಳಿಸಿತು. ಜಲವಿಜ್ಞಾನ, ರಾಷ್ಟ್ರೀಯ ಜಲವಿಜ್ಞಾನ ಸಂಸ್ಥೆ (ಎನ್‌ಐಎಚ್), ಸಿಡಬ್ಲ್ಯೂಸಿ ಮತ್ತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಕ್ಷೇತ್ರದ ತಜ್ಞರ ಅಭಿಪ್ರಾಯವನ್ನು ಪಡೆಯಲಾಗಿದೆ ಎಂದು ಉತ್ತರದಲ್ಲಿ ಉಲ್ಲೇಖಿಸಲಾಗಿದೆ.

ಜಲಾನಯನ ಪ್ರದೇಶದೊಳಗಿನ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವ್ಯತ್ಯಾಸವನ್ನು ಪರಿಗಣಿಸದೆ ಇಡೀ ಯೋಜನಾ ಪ್ರದೇಶಕ್ಕೆ 6280 ಮಿ.ಮೀ ಏಕರೂಪದ ಮಳೆ ದತ್ತಾಂಶವನ್ನು ತೆಗೆದುಕೂಂಡ ಖಾಸಗಿ ಮಾಪನ ಕೇಂದ್ರಗಳಿಂದ ಮಳೆ ದತ್ತಾಂಶವನ್ನು ಅಳವಡಿಸಿಕೊಳ್ಳುವ ಬಗ್ಗೆ ಲೆಕ್ಕಪರಿಶೋಧನಾ ಅವಲೋಕನವನ್ನು ಇದು ಉಲ್ಲೇಖಿಸುವುದಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. 37 ವರ್ಷಗಳ ವಿಸ್ತೃತ ದತ್ತಾಂಶವನ್ನು ಬಳಸಿಕೊಂಡು ಲೆಕ್ಕಹಾಕಿದ ಇಳುವರಿ ಕೇವಲ 22.14 ಟಿಎಮ್‌ಸಿ ಆಗಿದ್ದರೂ, ಡಿಪಿಆರ್‌ನಲ್ಲಿ ಬೇರೆಡೆಗೆ ತಿರುಗಿಸುವ ಇಳುವರಿಯಾಗಿ 24.01 ಟಿಎಮ್‌ಸಿಯನ್ನು ಅಳವಡಿಸಿಕೊಳ್ಳುವುದನ್ನೂ ಸಹ ಉತ್ತರವು ಸಮರ್ಥಿಸಲಿಲ್ಲ. **ಕೋಷ್ಟಕ–2.2**ರಲ್ಲಿ ಉಲ್ಲೇಖಿಸಲಾದ ಸರ್ಕಾರಿ ಮಳೆ ಮಾಪನ ಕೇಂದ್ರಗಳಿಗೆ ಸಂಬಂಧಿಸಿದಂತೆ ಮಳೆಯ ದತ್ತಾಂಶ ಲಭ್ಯವಿಲ್ಲದಿರುವ ಬಗ್ಗೆ ಸರ್ಕಾರದ ಉತ್ತರವನ್ನು ಒಪ್ಪಲಾಗುವುದಿಲ್ಲ, ಏಕೆಂದರೆ ಮೇಲಿನ ಕೇಂದ್ರಗಳಿಗೆ 1976ರಿಂದಲೂ ಮಳೆಯ ದತ್ತಾಂಶ ಲಭ್ಯವಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತ್ತು. ಖಾಸಗಿ ಮಳೆ ಮಾಪನ ಕೇಂದ್ರಗಳಿಗೆ ಸಂಬಂಧಿಸಿದಂತೆ ವಾರ್ಷಿಕ 6280 ಮಿ.ಮೀ. ಮಳೆ ದತ್ತಾಂಶವನ್ನು ಅಳವಡಿಸಿಕೊಂಡ ಸಮಾಲೋಚಕರಂತೆಯೇ ಸಹ ಲೆಕ್ಕಪರಿಶೋಧನೆಯು ವಾರ್ಷಿಕ ಆಧಾರದ ಮೇಲೆ

[16] ಕರ್ನಾಟಕ ಸರ್ಕಾರ ಒಡೆತನದ ವಿದ್ಯುತ್ ಉತ್ಪಾದನಾ ಕಂಪನಿ

(ಜೂನ್‌ನಿಂದ ನವೆಂಬರ್ ಬದಲಿಗೆ) ಮಳೆಯ ದತ್ತಾಂಶವನ್ನು ಹೋಲಿಸಿ ನೋಡಿತು. ಎನ್‌ಐಎಚ್, ಸಿಡಬ್ಲ್ಯೂಸಿ ಮತ್ತು ಎನ್‌ಜಿಟಿಯ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ, ಡಿಪಿಆರ್ ಪ್ರಕಾರ ಇಳುವರಿಯ ಲಭ್ಯತೆಯ ಬಗ್ಗೆ ಸಿಡಬ್ಲ್ಯೂಸಿ ಮತ್ತು ಎನ್‌ಜಿಟಿ ಸ್ವತಂತ್ರ ಪ್ರತಿಕ್ರಿಯೆಗಳನ್ನು ನೀಡಿಲ್ಲವಾದರೂ, ಎನ್‌ಐಎಚ್‌ನ ವರದಿಗಳು, **ಕಂಡಿಕೆ–2.1.3.2**ರಲ್ಲಿ ವಿವರಿಸಿದಂತೆ, ಡಿಪಿಆರ್‌ನಲ್ಲಿ ಯೋಜಿಸಲಾದ 31.54 ಟಿಎಮ್‌ಸಿಗೆ (ಶೇಕಡಾ 50ರ ಅವಲಂಬನೆಯಲ್ಲಿ) ಪ್ರತಿಯಾಗಿ 22.48 ರಿಂದ 23.41 ಟಿಎಮ್‌ಸಿ ಇಳುವರಿ ಲಭ್ಯವಿದೆ ಎಂದು ಸೂಚಿಸಿದ್ದವು.

2.1.3.2 ವಾಸ್ತವಿಕ ಹರಿವಿನ ದತ್ತಾಂಶದ ಪ್ರಕಾರ ನಿರೀಕ್ಷಿತ ಇಳುವರಿಯನ್ನು ಸಾಧಿಸದಿರುವುದು

ಗುರುತಿಸಿದ ಎಂಟು ವೀಯರ್ ಗಳಲ್ಲಿ ಸರಾಸರಿ ಲಭ್ಯವಿರುವ ಒಳಹರಿವಿನ 32.15 ಟಿಎಮ್‌ಸಿಯಲ್ಲಿ[17] ಶೇಕಡಾ 50ರಷ್ಟು ಅವಲಂಬನೆಯಲ್ಲಿ 24.01 ಟಿಎಮ್‌ಸಿ ನೀರಿನ ತಿರುಗಿಸಬಹುದಾದ ಇಳುವರಿಯನ್ನು ಸಲಹೆಗಾರರು ಪ್ರಸ್ತಾವಿಸಿದ್ದರು. 2018 ಮತ್ತು 2019ರಲ್ಲಿ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಮತ್ತು ಕರ್ನಾಟಕ ಅರಣ್ಯ ಇಲಾಖೆಯ ಆದೇಶಗಳ ಪ್ರಕಾರ ವಿಜೆಎನ್‌ಎಲ್ ಎಲ್ಲಾ ಎಂಟು ವೀಯರ್ ಗಳಲ್ಲಿ ಮಾಪನಗಳನ್ನು ಸ್ಥಾಪಿಸಿತು. 2018 ರಿಂದ 2023 ರವರೆಗಿನ ಆರು ವರ್ಷಗಳ ಕಾಲ ದಾಖಲಾದ ಹರಿವಿನ ದತ್ತಾಂಶವು ಲಭ್ಯವಿತ್ತು ಮತ್ತು ಅದನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಯಿತು. ಈ ಮಾಪನ ಕೇಂದ್ರಗಳಲ್ಲಿ ದಾಖಲಾದ ಹರಿವಿನ ದತ್ತಾಂಶವನ್ನು ಆಧರಿಸಿ, ಕೆಳಗಿನ **ನಕ್ಷೆ–2.2**ರಲ್ಲಿ ವಿವರಿಸಿದಂತೆ, ಲೆಕ್ಕಪರಿಶೋಧನೆಯು ಪ್ರತಿ ವೀಯರ್ ಗೆ ಲಭ್ಯವಿರುವ ಇಳುವರಿಯನ್ನು ಲೆಕ್ಕಹಾಕಿದೆ:

ನಕ್ಷೆ–2.2: ಅಂದಾಜು ಇಳುವರಿಗೆ (ಡಿಪಿಆರ್) ಪ್ರತಿಯಾಗಿ ವಾಸ್ತವಿಕ ಇಳುವರಿ (ವೀಯರ್‌ಗಳಲ್ಲಿ ದಾಖಲಾದ ದತ್ತಾಂಶ)



ಆಧಾರ: ವಿಜೆಎನ್‌ಎಲ್ ಒದಗಿಸಿದ ಹರಿವಿನ ದತ್ತಾಂಶ (ದತ್ತಾಂಶವನ್ನು 17 ಅಕ್ಟೋಬರ್ 2023ರವರೆಗೆ ಇಂದೀಕರಿಸಲಾಗಿದೆ. 2018ಕ್ಕೆ ವಾಸ್ತವಿಕ ಇಳುವರಿಯು 2019ರಲ್ಲಿ ಸ್ಥಾಪಿಸಲಾದ ವೀಯರ್–3ರ ಹರಿವಿನ ದತ್ತಾಂಶವನ್ನು ಒಳಗೊಂಡಿಲ್ಲ)

2018–23 ರಲ್ಲಿ ಗರಿಷ್ಠ ಇಳುವರಿಯು (2018 ಮತ್ತು 2019 ರಲ್ಲಿ) ಡಿಪಿಆರ್ ಪ್ರಕಾರ ಅಂದಾಜು ಮಾಡಿದ್ದ ಇಳುವರಿಗಿಂತ (32.15 ಟಿಎಮ್‌ಸಿ) ಕಡಿಮೆಯಿರುವುದನ್ನು ಫಲಿತಾಂಶಗಳು ಸೂಚಿಸುತ್ತವೆ. 26.80 ಟಿಎಮ್‌ಸಿ ಲಭ್ಯವಿರುವ ಗರಿಷ್ಠ ಪ್ರಮಾಣ 2018 ರಲ್ಲಿ ಮತ್ತು 8.77 ಟಿಎಮ್‌ಸಿ ಕನಿಷ್ಠ ಪ್ರಮಾಣ 2023 ರಲ್ಲಿ ಇದ್ದಿತು.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು 06 ಜನವರಿ 2016 ರಂದು ಹೊರಡಿಸಿದ ಆದೇಶದಲ್ಲಿ, ಆ ಪ್ರದೇಶದಲ್ಲಿ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಲು ಜೂನ್ 15ರಿಂದ ಅಕ್ಟೋಬರ್ 31 ರವರೆಗೆ ಯೋಜನೆಯಡಿಯಲ್ಲಿ ಪಂಪಿಂಗ್ ಕಾರ್ಯಾಚರಣೆಯನ್ನು ಮಿತಗೊಳಿಸುವ ಬಗ್ಗೆ ವಿಜೆಎನ್‌ಎಲ್

[17] 31.54 ಟಿಎಮ್‌ಸಿ ಶೇಕಡಾ 50ರ ಅವಲಂಬನೆಯಲ್ಲಿ

ಒಂದು ಮುಚ್ಚಳಿಕೆಯನ್ನು ನೀಡಬೇಕು ಎಂದು ಷರತ್ತು ವಿಧಿಸಿರುವುದನ್ನು ಲೆಕ್ಕಪರಿಶೊಧನೆಯು ಗಮನಿಸಿತು. ಡಿಪಿಆರ್‌ನಲ್ಲಿ ಪರಿಗಣಿಸಲಾದ ಅಂದಾಜು 183 ದಿನಗಳಿಗೆ (ಜೂನ್‌ನಿಂದ ನವೆಂಬರ್‌ವರೆಗೆ) ಪ್ರತಿಯಾಗಿ ಇದು ನೀರನ್ನು ಪಂಪ್ ಮಾಡಲು ಕೇವಲ 139 ದಿನಗಳ ಸಮಯವನ್ನು ಒದಗಿಸಿತ್ತು. ಎಲ್ಲಾ ಅಣೆಕಟ್ಟುಗಳಿಗೆ ಒದಗಿಸಲಾದ ಮಾಪನ ದತ್ತಾಂಶದ ಸಹಾಯದಿಂದ ಲೆಕ್ಕಪರಿಶೋಧನೆಯು 139 ದಿನಗಳವರೆಗೆ ಲಭ್ಯವಿರುವ ಹರಿವನ್ನು ಲೆಕ್ಕಹಾಕಿತು ಮತ್ತು ಫಲಿತಾಂಶಗಳನ್ನು **ಕೋಷ್ಟಕ–2.3**ರಲ್ಲಿ ನೀಡಲಾಗಿದೆ:

ಕೊಷ್ಟಕ–2.3: ವೀಯರ್‌ಗಳಲ್ಲಿ 139 ದಿನಗಳ (ಜೂನ್ 15ರಿಂದ ಅಕ್ಟೋಬರ್ 31 ರವರೆಗೆ) ಹರಿವಿನ ದತ್ತಾಂಶ

ವರ್ಷ	ವೀಯರ್ 1	ವೀಯರ್ 2	ವೀಯರ್ 3	ವೀಯರ್ 4	ವೀಯರ್ 5	ವೀಯರ್ 6	ವೀಯರ್ 7	ವೀಯರ್ 8	ಒಟ್ಟು
2018	4.29	0.82	ಲಭ್ಯವಿಲ್ಲ	1.47	3.02	3.61	5.65	5.82	**24.70**
2019	4.39	0.81	1.33	1.15	1.51	2.88	5.98	5.48	**23.54**
2020	2.68	0.01	1.40	1.14	2.16	2.22	7.04	1.15	**17.80**
2021	3.70	0.47	1.60	1.00	2.26	2.87	7.40	1.59	**20.90**
2022	4.50	0.56	1.25	1.60	2.65	2.00	5.70	1.48	**19.75**
2023	1.60	0.34	0.94	0.90	1.70	0.29	0.59	0.84	**7.20**
ಶೇಕಡಾ 50ರಷ್ಟು ಅವಲಂಬಿತ ಹರಿವು	**4.00**	**0.51**	**1.33**	**1.14**	**2.21**	**2.54**	**5.84**	**1.53**	**19.12**

ಆಧಾರ: ವಿಜೆಎನ್‌ಎಲ್ ಒದಗಿಸಿದ ಹರಿವಿನ ದತ್ತಾಂಶ

139 ದಿನಗಳ ಅವಧಿಯಲ್ಲಿ ಎಂಟು ವೀಯರ್ ಗಳಲ್ಲಿ ಲಭ್ಯವಿರುವ ನೀರಿನ ಪ್ರಮಾಣವು ಡಿಪಿಆರ್‌ನಲ್ಲಿ ಅಂದಾಜು ಮಾಡಿದ್ದ 32.15 ಟಿಎಮ್‌ಸಿ ಪ್ರಮಾಣಕ್ಕೆ ಪ್ರತಿಯಾಗಿ 7.20 ಟಿಎಮ್‌ಸಿ ಯಿಂದ 24.7 ಟಿಎಮ್‌ಸಿ ವ್ಯಾಪ್ತಿಯಲ್ಲಿದ್ದಿತು ಎಂಬುದನ್ನು **ಕೋಷ್ಟಕ–2.3** ರಿಂದ ಗಮನಿಸಬಹುದು, ಡಿಪಿಆರ್‌ನ ಲೆಕ್ಕಾಚಾರದ ವಿಧಾನವನ್ನು ಅಳವಡಿಸಿಕೊಂಡರೆ, ಶೇಕಡಾ 50ರಷ್ಟು ಅವಲಂಬಿತ ಪ್ರಮಾಣವು ಅಂದಾಜು 31.54 ಟಿಎಮ್‌ಸಿಗೆ ಪ್ರತಿಯಾಗಿ 19.12[18] ಟಿಎಮ್‌ಸಿಗೆ ಆಗುತ್ತದೆ ಮತ್ತು ತಿರುಗಿಸಬಹುದಾದ ಇಳುವರಿ 24.01 ಟಿಎಮ್‌ಸಿಗೆ ಪ್ರತಿಯಾಗಿ 14.55 ಟಿಎಮ್‌ಸಿ[19] ಆಗುತ್ತದೆ. ಇದು ಡಿಪಿಆರ್‌ಗಳಲ್ಲಿ ಯೋಜಿಸಲಾದ ಅಂದಾಜು ಪ್ರಮಾಣದ ನೀರು ಲಭ್ಯವಿಲ್ಲದಿರುವ ಸಾಧ್ಯತೆಯನ್ನು ಸೂಚಿಸುತ್ತದೆ.

ಕೆಎನ್‌ಎನ್‌ಎಲ್ ಕೋರಿಕೆಯ ಮೇರೆಗೆ ಇಳುವರಿ ದತ್ತಾಂಶವನ್ನು ಅಧ್ಯಯನ ಮಾಡಿದ ನಂತರ ರಾಷ್ಟ್ರೀಯ ಜಲವಿಜ್ಞಾನ ಸಂಸ್ಥೆ (ಎನ್‌ಐಎಚ್) ನೀಡಿದ ಅಭಿಪ್ರಾಯದಿಂದ ಲೆಕ್ಕಪರಿಶೋಧನಾ ವಾದವು ಬಲಗೊಳ್ಳುತ್ತದೆ. ಎನ್‌ಐಎಚ್ ಒದಗಿಸಿದ ವರದಿಯು (ಮಾರ್ಚ್ 2015) ಅಂದಾಜಿಸಿದ 31.54 ಟಿಎಮ್‌ಸಿಗೆ ಪ್ರತಿಯಾಗಿ ಸಂಯೋಜಿತವಾಗಿ ಎಲ್ಲಾ ವೀಯರ್ ಗಳಲ್ಲಿ ಸ್ವಾಟ್[20] ಮಾದರಿಯನ್ನು ಬಳಸಿಕೊಂಡು ಒಟ್ಟು ಶೇಕಡಾ 50ರಷ್ಟು ಅವಲಂಬಿತ ಇಳುವರಿಯು 22.48 ಟಿಎಮ್‌ಸಿ ಮತ್ತು ಎಆರ್‌ಎನ್‌ಒ[21] ಮಾದರಿಯನ್ನು ಬಳಸಿಕೊಂಡು 23.41 ಟಿಎಮ್‌ಸಿ ಎಂದು ಒದಗಿಸಿತ್ತು. 1993 ರಿಂದ 2012 ರ ಅವಧಿಗೆ ಮಾರೇನಹಳ್ಳಿ ಮಳೆ ಮಾಪನ ಕೇಂದ್ರದ

[18] ಶೇಕಡಾ 50ರಷ್ಟು ಅವಲಂಬಿತ ಹರಿವನ್ನು 'ಪರ್ಸೆಂಟೈಲ್ ಫಂಕ್ಷನ್' ಬಳಸಿಕೊಂಡು ಲೆಕ್ಕ ಹಾಕಲಾಗಿದೆ.

[19] 24.01 ಟಿಎಮ್‌ಸಿ ನೀರಿನ ತಿರುಗುವಿಕೆ ಇಳುವರಿಯನ್ನು ಪಡೆಯಲು ಡಿಪಿಆರ್‌ನಲ್ಲಿ ಬಳಸಲಾದ ಅದೇ ಅನುಪಾತವನ್ನು ಬಳಸಿಕೊಂಡು ಶೇಕಡಾ 50ರಷ್ಟು ಅವಲಂಬನೆಯಲ್ಲಿ ತಿರುಗುವಿಕೆ ಇಳುವರಿಯನ್ನು ಲೆಕ್ಕ ಹಾಕಲಾಗಿದೆ.

[20] ಎಸ್‌ಡಬ್ಲ್ಯುಎಟಿ ಮಾದರಿಯು ದೀರ್ಘಾವಧಿಯ, ನಿರಂತರ ಮತ್ತು ಪ್ರತ್ಯನುಕರಣೆ ಜಲಾನಯನ ಪ್ರದೇಶದ ಮಳೆ–ಹರಿವು ಮಾದರಿಯಾಗಿದೆ.

[21] ಎಆರ್‌ಎನ್‌ಒ ಮಾದರಿಯು ಹೀರಿಕೊಳ್ಳುವ–ಹರಿಯುವ ಮಾದರಿಯಾಗಿದ್ದು, ಇದು ದೈನಂದಿನ ಸಮಯದ ಹಂತವನ್ನು ಬಳಸಿಕೊಂಡು ವಿಸರ್ಜನೆಗಳನ್ನು ಅನುಕರಿಸುತ್ತದೆ.

ವಾರ್ಷಿಕ ಮಳೆ ದತ್ತಾಂಶವನ್ನು ಎನ್‌ಐಎಚ್ ಬಳಸಿಕೊಂಡಿತು, ಅದು 4880 ಮಿ.ಮೀ. ಆಗಿತ್ತು ಮತ್ತು ಲೆಕ್ಕಪರಿಶೋಧನಾ ವಾದಕ್ಕೆ ಅನುಗುಣವಾಗಿತ್ತು.

ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ನೀರಿನ ವಾಸ್ತವಿಕ ಲಭ್ಯತೆಯು ಡಿಪಿಆರ್ ಪ್ರಕಾರ ಇಳುವರಿಯು ಅಂದಾಜು ಮಾಡಿದ್ದಕ್ಕಿಂತ ಕಡಿಮೆಯಿರುವ ಸಾಧ್ಯತೆಯನ್ನು ನಿರಾಕರಿಸಲಾಗುವುದಿಲ್ಲ. 93 ದಿನಗಳಲ್ಲಿ 24.01 ಟಿಎಮ್‌ಸಿ ತಿರುಗಿಸಬಲ್ಲ ಇಳುವರಿಯನ್ನು ಪಂಪ್ ಮಾಡಲು 85 ಕ್ಯೂಮೆಕ್ಸ್ ಗಳ[22] ಪಂಪಿಂಗ್ ಸಾಮರ್ಥ್ಯವನ್ನು ಯೋಜಿಸಲಾಗಿತ್ತು. ಆದರೆ, ಲೆಕ್ಕಪರಿಶೋಧನೆಯ ಲೆಕ್ಕಾಚಾರದ ಪ್ರಕಾರ ತಿರುಗಿಸಬಲ್ಲ ಇಳುವರಿಯನ್ನು 14.55 ಟಿಎಮ್‌ಸಿಗೆ ಇಳಿಸಿದರೆ, ಪಂಪಿಂಗ್ ಸಾಮರ್ಥ್ಯವನ್ನು 52 ಕ್ಯೂಮೆಕ್ಸ್ ಗಳಿಗೆ ಇಳಿಸಬಹುದು. ಈ ಸನ್ನಿವೇಶದಲ್ಲಿ, ಫಲಾನುಭವಿ ಪ್ರದೇಶಕ್ಕೆ ತಿರುಗಿಸಬಲ್ಲ ನೀರನ್ನು ಪಂಪ್ ಮಾಡಲು ಮತ್ತು ಸಾಗಿಸಲು ಯಂತ್ರೋಪಕರಣಗಳು ಮತ್ತು ರಚನೆಗಳ ಸ್ಥಾಪಿತ ಸಾಮರ್ಥ್ಯವು ಅಗತ್ಯಕ್ಕಿಂತ ಹೆಚ್ಚಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಲೆಕ್ಕಪರಿಶೋಧನೆಯು ಅಳವಡಿಸಿಕೊಂಡ ಆರು ವರ್ಷಗಳ ಹರಿವಿನ ದತ್ತಾಂಶಕ್ಕೆ ಹೋಲಿಸಿದರೆ, ಡಿಪಿಆರ್‌ನಲ್ಲಿ ಲೆಕ್ಕ ಹಾಕಲಾದ ಹರಿವಿನ ಮೌಲ್ಯಮಾಪನವನ್ನು 30 ವರ್ಷಗಳಿಗಿಂತ ಹೆಚ್ಚು ಅವಧಿಗೆ ನಡೆಸಲಾಗಿತ್ತು ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಮೇಲಿನ ಜಲವಿಜ್ಞಾನ ಅಧ್ಯಯನಗಳ ಆಧಾರದ ಮೇಲೆ 85 ಕ್ಯೂಮೆಕ್ಸ್ ಗಳ ಪಂಪಿಂಗ್ ಸಾಮರ್ಥ್ಯವನ್ನು ನಿರ್ಧರಿಸಲಾಯಿತು. ಹೆಚ್ಚಿನ ಪಂಪಿಂಗ್ ಸಾಮರ್ಥ್ಯವನ್ನು ಹೊಂದಿದಲ್ಲಿ ಮಾತ್ರ ಭಾರೀ ಮಳೆಯ ಅವಧಿಯಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ತಿರುಗಿಸಬಹುದು ಎಂದೂ ಸಹ ತಿಳಿಸಲಾಯಿತು.

ಮೇಲಿನ **ಕಂಡಿಕೆ–2.1.3.1ರಲ್ಲಿ** ವಿವರಿಸಿದಂತೆ ಕೇವಲ ನಾಲ್ಕು ವರ್ಷಗಳ (2009–12) ಇಂಡೀಕೃತ ದತ್ತಾಂಶವನ್ನು ಆಧರಿಸಿ ಕೆಪಿಸಿಎಲ್ ವೀಯರ್‌ಗಳಲ್ಲಿ ದಾಖಲಾದ ಹರಿವಿನ ದತ್ತಾಂಶ ಮತ್ತು ಬಂಟ್ವಾಳ ಮಾಪನ ಕೇಂದ್ರಗಳ ನಡುವಿನ ಪರಸ್ಪರ ಸಂಬಂಧದ ಮೂಲಕ ಅಣೆಕಟ್ಟುಗಳಲ್ಲಿನ 37 ವರ್ಷಗಳ ಹರಿವಿನ ದತ್ತಾಂಶವನ್ನು ಲೆಕ್ಕ ಹಾಕಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಸಮತೋಲನ ಜಲಾಶಯದ ಗಾತ್ರದಲ್ಲಿನ ಕಡಿತ ಮತ್ತು ಸಮತೋಲನ ಜಲಾಶಯದ ತುದಿಯಲ್ಲಿ ಒದಗಿಸಲಾದ ಪಂಪಿಂಗ್ ಸಾಮರ್ಥ್ಯದ ಮಿತಿಯು (38 ಕ್ಯೂಮೆಕ್ಸ್ ಗಳು), ಭಾರೀ ಮಳೆಯ ಋತುಗಳಲ್ಲಿ ಹೆಚ್ಚಿನ ಸಾಮರ್ಥ್ಯದ ಪಂಪ್‌ಗಳು ಬೇಕಾಗುತ್ತವೆ ಎಂಬ ಸರ್ಕಾರದ ವಾದವು ಸಮರ್ಥನೀಯವಲ್ಲ ಎಂದು ತೋರಿಸುತ್ತದೆ.

2.2 ಹಣಕಾಸು ನಿರ್ವಹಣೆ

ಸರ್ಕಾರದ ಖಾತರಿಯ ಆಧಾರದ ಮೇಲೆ ವಾಣಿಜ್ಯ ಬ್ಯಾಂಕುಗಳಿಂದ ವಿಜೆಎನ್‌ಎಲ್ ಪಡೆಯುವ ಸಾಲದ ಹೊರತಾಗಿ ರಾಜ್ಯ ಸರ್ಕಾರವು ಬಂಡವಾಳ ಅನುದಾನದ ಮೂಲಕ ಈ ಯೋಜನೆಗೆ ಧನಸಹಾಯ ಮಾಡುತ್ತದೆ. ಆಯವ್ಯಯ ಹಂಚಿಕೆ, ಬಿಡುಗಡೆಗಳು (ಸಾಲ ಸೇರಿದಂತೆ) ಮತ್ತು ಯೋಜನೆಯ ವೆಚ್ಚದ ಸಾರಾಂಶವನ್ನು ಕೆಳಗಿನ **ಕೋಷ್ಟಕ–2.5** ರಲ್ಲಿ ನೀಡಲಾಗಿದೆ:

ಕೋಷ್ಟಕ–2.5: ಯೋಜನೆಯಡಿಯಲ್ಲಿ ಆಯವ್ಯಯ ಹಂಚಿಕೆ ಮತ್ತು ವೆಚ್ಚ

(₹ ಕೋಟಿಗಳಲ್ಲಿ)

ವರ್ಷ	ವಿಜೆಎನ್‌ಎಲ್ ಪ್ರಸ್ತಾವಿಸಿದ ಆಯವ್ಯಯ	ಆಯವ್ಯಯ ಹಂಚಿಕೆ/ಬಿಡುಗಡೆ			ಕಡಿಮೆ ಬಿಡುಗಡೆ	ಕಡಿಮೆ ಬಿಡುಗಡೆಯ ಶೇಕಡಾವಾರು	ಭರಿಸಿದ ವೆಚ್ಚ
		ಕರ್ನಾಟಕ ಸರ್ಕಾರ	ಸಾಲಗಳು	ಒಟ್ಟು			
2017–18 ರ ವರೆಗೆ		2909.26	206.69	3115.95			3115.95
2018–19	2882.61	783.26	767.69	1550.95	1331.66	46	1550.95
2019–20	5000.00	1357.80	640.43	1998.23	3001.77	60	1998.23
2020–21	7939.15	1717.39	228.39	1945.78	5993.37	75	1945.78
2021–22	5637.63	1951.44	181.63	2133.07	3504.56	62	2133.07
2022–23	8700.00	2567.44	542.83	3110.27	5589.73	64	3110.27
2023–24	5000.00	1249.00	ಶೂನ್ಯ	1442.78	3557.22	71	1442.78
ಒಟ್ಟು	**35159.39**	**12535.59**	**2567.66**	**15297.03**			**15297.03**

ಆಧಾರ: ವಿಜೆಎನ್‌ಎಲ್ ಸಲ್ಲಿಸಿದ ಮಾಹಿತಿ

[22] ಪ್ರತಿ ಸೆಕೆಂಡಿಗೆ ಘನ ಮೀಟರ್‌ಗಳು

ಲೆಕ್ಕಪರಿಶೋಧನಾ ಅವಲೋಕನಗಳನ್ನು ಕೆಳಗೆ ವಿವರಿಸಲಾಗಿದೆ:

2.2.1 ಸರ್ಕಾರದಿಂದ ತಾತ್ಕಾಲಿಕ ಆಧಾರದ ಮೇಲೆ ಬಜೆಟ್ ಅನುದಾನಗಳ ಹಂಚಿಕೆ.

ಕೋಷ್ಟಕ-2.5 ರಿಂದ ಗಮನಿಸಿದಂತೆ, ವಿಜೆಎನ್‌ಎಲ್ ಪ್ರಸ್ತಾಪಿಸಿದ ಆಯವ್ಯಯ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಯೋಜನೆಯಡಿಯಲ್ಲಿ ನಿಧಿಯ ಬಿಡುಗಡೆಯ ಕೊರತೆಯಿದ್ದಿತು. 2018-19ರಿಂದ 2023-24ರ ಅವಧಿಯಲ್ಲಿ ಕೊರತೆಯು ಶೇಕಡಾ 46 ರಿಂದ 75 ರ ವ್ಯಾಪ್ತಿಯಲ್ಲಿತ್ತು. ಯೋಜನೆಗಾಗಿ ಬಿಡುಗಡೆಯಾದ ₹15,297.03 ಕೋಟಿಗಳ ಸಂಪೂರ್ಣ ಮೊತ್ತವನ್ನು (ಸರ್ಕಾರದ ಅನುದಾನಗಳು-₹12,535.59 ಕೋಟಿ ಮತ್ತು ಸಾಲಗಳು-₹2,567.66 ಕೋಟಿ) ವಿಜೆಎನ್‌ಎಲ್ ವೆಚ್ಚ ಮಾಡಿತ್ತು.

ವಾರ್ಷಿಕ ಆಯವ್ಯಯದಲ್ಲಿ ಜಲಸಂಪನ್ಮೂಲ ಇಲಾಖೆಗೆ ಹಂಚಿಕೆಯಾದ ನಿಧಿಯ ಶೇಕಡಾ 26 ರಷ್ಟನ್ನು ವಿಜೆಎನ್‌ಎಲ್‌ಗೆ ಹಂಚಿಕೆ ಮಾಡಲಾಗಿದೆ ಮತ್ತು ಲಭ್ಯವಿರುವ ಸಂಪನ್ಮೂಲಗಳೊಂದಿಗೆ ವಿಜೆಎನ್‌ಎಲ್ ಯೋಜನೆಯಡಿಯಲ್ಲಿನ ಉಳಿಕೆ ಕಾಮಗಾರಿಗಳು ಮತ್ತು ಹೊಸ ಕಾಮಗಾರಿಗಳನ್ನು ಯೋಜಿಸಬೇಕಾಗಿದೆ ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024).

ಯೋಜನೆಗೆ ವಿಜೆಎನ್‌ಎಲ್ ಇಟ್ಟಿರುವ ಅವಶ್ಯಕತೆ/ಬೇಡಿಕೆಗೆ ಯಾವುದೇ ಮಾನದಂಡವಿರಲಿಲ್ಲ ಮತ್ತು ಯೋಜನೆಯ ನಿಜವಾದ ಅಗತ್ಯತೆಯೊಂದಿಗೆ ಯಾವುದೇ ಸಂಬಂಧವಿಲ್ಲದೆ ಆಯವ್ಯಯ ಹಂಚಿಕೆಯನ್ನು ತಾತ್ಕಾಲಿಕ ಆಧಾರದ ಮೇಲೆ ಮಾಡಲಾಗಿದೆ ಎಂದು ಇದು ತೋರಿಸುತ್ತದೆ.

2.2.2 ಯೋಜನೆಯನ್ನು ಪೂರ್ಣಗೊಳಿಸಲು ಹಣಕಾಸು ಸಂಗ್ರಹಿಸುವಲ್ಲಿ ಅನಿಶ್ಚಿತತೆ

ಜನವರಿ 2023 ರಲ್ಲಿ ವಿಜೆಎನ್‌ಎಲ್ ಎರಡನೇ ಬಾರಿಗೆ ಡಿಪಿಆರ್ ಅನ್ನು ಪರಿಷ್ಕರಿಸಿತು ಮತ್ತು ಇತ್ತೀಚಿನ ಯೋಜನಾ ವೆಚ್ಚವನ್ನು ₹23,251.66 ಕೋಟಿ ಎಂದು ಅಂದಾಜಿಸಲಾಗಿದೆ. ಹೀಗೆ, ಇತ್ತೀಚಿನ ಡಿಪಿಆರ್ ಪ್ರಕಾರ, ವಿಜೆಎನ್‌ಎಲ್ ಯೋಜನೆಯನ್ನು ಪೂರ್ಣಗೊಳಿಸಲು ₹7,954.63 ಕೋಟಿ[23] ಬಾಕಿ ಮೊತ್ತದ ಅಗತ್ಯವಿದೆ. ಯೋಜನೆಯಿಂದ ವಿಜೆಎನ್‌ಎಲ್ ಯಾವುದೇ ಆದಾಯವನ್ನು ಗಳಿಸುತ್ತಿಲ್ಲ ಮತ್ತು ಮರುಪಾವತಿಗಾಗಿ ಕರ್ನಾಟಕ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಗಳ ಮೇಲೆ ಅವಲಂಬಿತವಾಗಿರುವುದರಿಂದ ಇನ್ನು ತಾವುಗಳು ಯೋಜನೆಗೆ ಹಣಕಾಸು ಒದಗಿಸುವುದಿಲ್ಲ ಎಂದು ಬ್ಯಾಂಕುಗಳು ತಿಳಿಸಿರುವುದನ್ನು ಪತ್ರಗಳಿಂದ ಲೆಕ್ಕಪರಿಶೋಧನೆಯು ಗಮನಿಸಿತು.

ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ಯೋಜನೆಯನ್ನು ಪೂರ್ಣಗೊಳಿಸಲು ವಿಜೆಎನ್‌ಎಲ್, ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ) ಮತ್ತು ಗ್ರಾಮೀಣ ವಿದ್ಯುಚ್ಛಕ್ತಿ ನಿಗಮ ನಿಯಮಿತ (ಆರ್‌ಇಸಿ) ಇವುಗಳಿಂದ ದೀರ್ಘಾವಧಿಯ ಸಾಲವನ್ನು ಪಡೆಯಲು ಪ್ರಸ್ತಾವಿಸಿತು ಮತ್ತು ಎರಡೂ ಕ್ರಮವಾಗಿ ಶೇಕಡಾ 9.50 ಮತ್ತು ಶೇಕಡಾ 9.65ರಷ್ಟು ಬಡ್ಡಿ ದರದಲ್ಲಿ ಸಾಲಗಳನ್ನು ಮಂಜೂರು ಮಾಡಿದ್ದವು. ಸಾಲದ ಮಂಜೂರಾತಿಯ ನಿಯಮಗಳು ಕರ್ನಾಟಕ ಸರ್ಕಾರದಿಂದ ಖಾತರಿ ಒದಗಿಸುವಿಕೆಯನ್ನು ನಿಗದಿಪಡಿಸಿರುವುದರಿಂದ, ಖಾತರಿ ಒದಗಿಸಲು ಈ ವಿಷಯವನ್ನು ಜೂನ್ 2023 ರಲ್ಲಿ ಸರ್ಕಾರಕ್ಕೆ ಉಲ್ಲೇಖಿಸಲಾಗಿದೆ.

ಆದರೆ, ಯೋಜನೆಯನ್ನು ಪೂರ್ಣಗೊಳಿಸಲು ಹೊಸ ಸಾಲಗಳನ್ನು ಪಡೆಯಲು ವಿಜೆಎನ್‌ಎಲ್‌ನ ಕೋರಿಕೆಯ ಕುರಿತು ಕರ್ನಾಟಕ ಸರ್ಕಾರ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ. ತತ್ಪರಿಣಾಮವಾಗಿ,

[23] ₹23251.66 – ₹15297.03 = ₹7954.63 ಕೋಟಿ

ಯೋಜನೆಯನ್ನು ಪೂರ್ಣಗೊಳಿಸಲು ಮಾರ್ಚ್ 2024ರಲ್ಲಿದ್ದಂತೆ ವಿಜೆಎನ್‌ಎಲ್ ₹7,954.63 ಕೋಟಿಗಳ ಕೊರತೆಯನ್ನು ಎದುರಿಸುತ್ತಿದೆ.

ಪ್ರಸ್ತಾವಿತ ಹಣಕಾಸುದಾರರಿಂದ ಸಾಲ ಪಡೆಯುವ ಪ್ರಸ್ತಾವನೆಯು ಸರ್ಕಾರದಲ್ಲಿ ಬಾಕಿ ಇದೆ ಮತ್ತು ಸೂಕ್ತ ನಿರ್ದೇಶನಗಳನ್ನು ಸ್ವೀಕರಿಸಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ವಿಜೆಎನ್‌ಎಲ್ ತಿಳಿಸಿತು (ಮಾರ್ಚ್ 2024). ಪಿಎಫ್‌ಸಿ ಮತ್ತು ಆರ್‌ಇಸಿಯಿಂದ ಸಾಲ ಪಡೆಯುವ ವಿಜೆಎನ್‌ಎಲ್‌ನ ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹಣಕಾಸು ಇಲಾಖೆ ತಿಳಿಸಿತು (ಮೇ 2024).

ಹೀಗೆ, ಯೋಜನೆಯ ಬಾಕಿ ಕಾಮಗಾರಿಗಳಿಗೆ ಹಣಕಾಸು ಒದಗಿಸಲು ಹಣದ ಮೂಲದ ಸ್ಪಷ್ಟತೆಯ ಕೊರತೆಯಿದ್ದಿತು.

ಲೆಕ್ಕಪರಿಶೋಧನಾ ಶಿಫಾರಸುಗಳು

ಶಿಫಾರಸು–1: ಯೋಜನೆಯ ಪೂರ್ಣಗೊಳಿಸುವಿಕೆಗಾಗಿ ವಿಜೆಎನ್‌ಎಲ್ 1 ನವೆಂಬರ್ 2026ರ ನಿಗದಿತ ಗಡುವನ್ನು ಪಾಲಿಸಬೇಕು ಮತ್ತು ಅದನ್ನು ಸಾಧಿಸಲು ಮಿಷನ್ ಮೋಡ್‌ನಲ್ಲಿ ಕೆಲಸ ಮಾಡಬೇಕು.

ಶಿಫಾರಸು–2: ಈಗಾಗಲೇ ರಚಿಸಲಾದ ಸ್ವತ್ತುಗಳನ್ನು ಬಳಕೆಗೆ ತರಲು ವಿಜೆಎನ್‌ಎಲ್ ಸಮತೋಲನ ಜಲಾಶಯದ ನಿರ್ಮಾಣಕ್ಕೆ ಆದ್ಯತೆ ನೀಡಬೇಕು.

ಶಿಫಾರಸು–3: ಯೋಜನೆಯನ್ನು ಯೋಜಿಸುವಾಗ ವಿಜೆಎನ್‌ಎಲ್ ಹರಿವು ಮತ್ತು ಇಳುವರಿಯ ವಿಶ್ವಾಸಾರ್ಹ ದತ್ತಾಂಶದ ಲಭ್ಯತೆಯ ಅನುಗುಣವಾಗಿ ಲೆಕ್ಕಚಾರ ಮಾಡಬೇಕು.

ಶಿಫಾರಸು–4: ನಿಗದಿತ ಸಮಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಅಗತ್ಯವಿರುವ ಹಣವನ್ನು ಒದಗಿಸುವ ಬಗ್ಗೆ ಸರ್ಕಾರವು ಸಕಾಲಿಕ ನಿರ್ಧಾರ ತೆಗೆದುಕೊಳ್ಳಬೇಕು

ಅಧ್ಯಾಯ–III

ಯೋಜನೆಯ ಅನುಷ್ಠಾನ

ಅಧ್ಯಾಯ–III

ಯೋಜನೆಯ ಅನುಷ್ಠಾನ

ಯೋಜನೆಯ ಹಂತ–Iರ ಅಡಿಯಲ್ಲಿನ (ಲಿಫ್ಟಿಂಗ್ ಘಟಕಗಳು) ಕಾಮಗಾರಿಗಳನ್ನು ಮಾರ್ಚ್ 2014ರಲ್ಲಿ ವಹಿಸಲಾಯಿತು ಮತ್ತು ಮೈಲ್ಡ್ ಸ್ಟೀಲ್ ರೇಸಿಂಗ್ ಮೇನ್ (ಪೈಪ್‌ಲೈನ್) ನಿರ್ಮಾಣ ಸೇರಿದಂತೆ ಸಿವಿಲ್ ಕಾಮಗಾರಿಗಳನ್ನು ಮಾರ್ಚ್ 2019ರಲ್ಲಿ ಪೂರ್ಣಗೊಳಿಸಲಾಯಿತು. ವಿಜೆಎನ್‌ಎಲ್‌ನ ಕಾರ್ಯನಿರ್ವಾಹಕ ವಿಭಾಗಗಳು ಹಂತ–IIರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕಾಗಿ ಪ್ರಸ್ತಾವನೆಗಳನ್ನು ಒಂದು ವರ್ಷಕ್ಕೂ ಹೆಚ್ಚು ವಿಳಂಬದ ನಂತರ ಪ್ರಾರಂಭಿಸಿತು (ಫೆಬ್ರವರಿ 2015) ಮತ್ತು ಡಿಪಿಆರ್–IIರ ಅನುಮೋದನೆ ಹಾಗು ಹಂತ–Iರ ಕಾಮಗಾರಿಗಳ ಪ್ರಾರಂಭವಾದ ಎರಡು ವರ್ಷಗಳ ನಂತರ ಸಾಮಾಜಿಕ ಪರಿಣಾಮ ಮೌಲ್ಯಮಾಪನ ಅಧ್ಯಯನವನ್ನು ಪ್ರಾರಂಭಿಸಿತು (ಜುಲೈ 2016). ಇದು ಭೂಸ್ವಾಧೀನದ ಇತರ ಹಂತಗಳಿಗೆ ವರ್ಧಿತ ವಿಳಂಬದಲ್ಲಿ ಪರಿಣಮಿಸಿತು ಮತ್ತು ಹಂತ–IIರ ಅಡಿಯಲ್ಲಿ ಕಾಮಗಾರಿಗಳನ್ನು ವಹಿಸುವಲ್ಲಿ ಮೂರು ವರ್ಷಗಳಿಗೂ ಹೆಚ್ಚು ವಿಳಂಬವಾಯಿತು. ಫಲಾನುಭವಿ ಜಿಲ್ಲೆಗಳಿಗೆ ನೀರನ್ನು ಸಾಗಿಸಲು ಗುರುತ್ವಾಕರ್ಷಣ ಕಾಲುವೆಯ ನಿರ್ಮಾಣ ಪೂರ್ಣಗೊಳ್ಳದ ಕಾರಣ ಹಂತ–Iರ ಅಡಿಯಲ್ಲಿ ₹2,965.57 ಕೋಟಿ ವೆಚ್ಚದಲ್ಲಿ ರಚಿಸಲಾದ ಸ್ವತ್ತುಗಳನ್ನು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಂತ–Iರ ಕಾಮಗಾರಿಗಳಡಿಯಲ್ಲಿ ಸ್ಥಾಪಿಸಲಾದ ಪಂಪ್‌ಗಳು/ಮೋಟಾರುಗಳಂತಹ ಎಲೆಕ್ಟ್ರೋ–ಮೆಕ್ಯಾನಿಕಲ್ ಉಪಕರಣಗಳನ್ನು ಪರೀಕ್ಷಿಸಲು/ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ಅವುಗಳ ಉಪಯುಕ್ತ ಜೀವನದ ಗಮನಾರ್ಹ ಭಾಗವನ್ನು ಒಳಗೊಂಡ ಅವಧಿಗೆ ನಿಷ್ಕ್ರಿಯವಾಗಿಡಲಾಯಿತು. ಹಂತ–I ಮತ್ತು ಹಂತ–IIರ ಅಡಿಯಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳ ನಡುವೆ ಸಮನ್ವಯದ ಕೊರತೆಯು ತುಂಡು–ತುಂಡು ಮೂಲಸೌಕರ್ಯಗಳ ರಚನೆಗೆ ಕಾರಣವಾಗಿ ಆಸ್ತಿಗಳು ನಿಷ್ಕ್ರಿಯವಾಗುವಲ್ಲಿ ಮತ್ತು ಯೋಜನೆಯ ಉದ್ದೇಶವನ್ನು ಸಾಧಿಸದಿರುವಲ್ಲಿ ಪರಿಣಮಿಸಿತು.

ಯೋಜನೆಯ ಗುತ್ತಿಗೆ ನಿರ್ವಹಣೆಯಲ್ಲಿ, ಪ್ರಮಾಣಿತ ಟೆಂಡರ್ ದಾಖಲೆಗಳನ್ನು ಅಳವಡಿಸಿಕೊಳ್ಳದಿರುವುದು, ಗುತ್ತಿಗೆದಾರರ ಬಿಡ್ ಸಾಮರ್ಥ್ಯದ ಮೌಲ್ಯಮಾಪನ ಮಾಡದಿರುವುದು, ಹೆಚ್ಚಿನ ಮೌಲ್ಯದ ಒಪ್ಪಂದಗಳಿಗೆ ಸಾಕಷ್ಟು ಬಿಡ್ಡಿಂಗ್ ಸಮಯವಿಲ್ಲದಿರುವುದು ಮುಂತಾದ ಟೆಂಡರ್ ಪ್ರಕ್ರಿಯೆಯಲ್ಲಿನ ನ್ಯೂನತೆಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪೈಪ್ ಸಾಮಗ್ರಿಗಳ ಹೆಚ್ಚುವರಿ ಪೂರೈಕೆಯನ್ನು ವಸೂಲಿ ಮಾಡದಿರುವುದು, ಟರ್ನ್–ಕೀ ಒಪ್ಪಂದದ ಭಾಗವಾಗಿದ್ದ ಕಾಮಗಾರಿಗಳಿಗೆ ಹೆಚ್ಚುವರಿ ಪಾವತಿ, ಧಾರಣ ಹಣ/ಕಾರ್ಯಕ್ಷಮತಾ ಭದ್ರತೆಯನ್ನು ಅಕಾಲಿಕವಾಗಿ ಬಿಡುಗಡೆ ಮಾಡುವುದು, ಪೈಪ್‌ಗಳ ಪೂರೈಕೆಗಾಗಿ ಅಕ್ರಮ ಮುಂಗಡ ಪಾವತಿ ಮತ್ತು ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅನುಷ್ಠಾನದಿಂದಾಗಿ ಗುತ್ತಿಗೆದಾರರಿಂದ ಪ್ರಯೋಜನಗಳನ್ನು ವಸೂಲಿ ಮಾಡದಿರುವುದು ಮುಂತಾದ ಗುತ್ತಿಗೆದಾರರಿಗೆ ನೀಡಲಾದ ಅನುಚಿತ ಅನುಕೂಲಗಳ ನಿದರ್ಶನಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

3.1 ಯೋಜನೆಯಡಿಯಲ್ಲಿನ ಕಾಮಗಾರಿಗಳ ಅಸಮಕಾಲಿಕತೆ

ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಯಿತು. ಹಂತ–Iರ ಅಡಿಯಲ್ಲಿ, ಪಶ್ಚಿಮಕ್ಕೆ ಹರಿಯುವ ಎಂಟು[24] ವೀಯರ್ ಗಳಿಂದ 24.01 ಟಿಎಮ್‌ಸಿ ನೀರನ್ನು ತಿರುಗಿಸಬೇಕಾಗಿತ್ತು. ಇದನ್ನು ಜಾಕ್‌ವೆಲ್ ಕಮ್ ಪಂಪ್ ಹೌಸ್‌ನಂತಹ ಸೂಕ್ತವಾದ ಲಿಫ್ಟಿಂಗ್ ವ್ಯವಸ್ಥೆಗಳನ್ನು ಹೊಂದಿರುವ ಎಂಟು ವೀಯರ್‌ಗಳನ್ನು ನಿರ್ಮಿಸಿ, ಕೆಳಗಿನ **ನಕ್ಷೆ–3.1**ರಲ್ಲಿ ಸೂಚಿಸಿದಂತೆ ಮೈಲ್ಡ್ ಸ್ಟೀಲ್ ರೇಸಿಂಗ್ ಮೇನ್ (ಪೈಪ್‌ಲೈನ್) ಮೂಲಕ ಗುರುತಿಸಲಾದ ವಿತರಣಾ ಕೋಣೆಗಳಿಗೆ ನೀರನ್ನು ಸಾಗಿಸಬೇಕಾಗಿತ್ತು:

---

[24] ಹೊಂಗಡಹಳ್ಳ, ಕಾಡುಮನೆಹೊಳೆ ಮತ್ತು ಅದರ ಉಪನದಿ, ಕೇರಿಹೊಳೆ, ಎತ್ತಿನಹೊಳೆ ಮತ್ತು ಅದರ ಮೂರು ಉಪನದಿಗಳು

ನಕ್ಷೆ–3.1: ಹಂತ–Iರ ಕಾಮಗಾರಿಗಳ ಘಟಕಗಳು



ಗುರುತ್ವಾಕರ್ಷಣಾ ಕಾಲುವೆಯ ಮೂಲಕ ವಿತರಣಾ ಕೊಠಡಿ–4ರ ನಂತರ ಸಮತೋಲನ ಜಲಾಶಯದ ಮುಂಚೂಣಿಗೆ ನೀರನ್ನು ಸಾಗಿಸಲು ಸಾಗಣೆ ವ್ಯವಸ್ಥೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಮತ್ತು ನಂತರ ವಿತರಣಾ ಕೊಠಡಿ–5ಕ್ಕೆ ಪಂಪ್ ಮಾಡುವುದನ್ನು ಯೋಜನೆಯ ಹಂತ–II ಒಳಗೊಂಡಿತ್ತು. ನಂತರ ಫೀಡರ್ ಕಾಲುವೆಗಳ ಮೂಲಕ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರನ್ನು ತಲುಪಿಸಬೇಕಾಗಿತ್ತು. ಹಂತ–IIರ ಕಾಮಗಾರಿಗಳ ಘಟಕಗಳನ್ನು ಕೆಳಗಿನ **ನಕ್ಷೆ–3.2**ರಲ್ಲಿ ನೀಡಲಾಗಿದೆ:

ನಕ್ಷೆ–3.2: ಹಂತ–IIರ ಕಾಮಗಾರಿಗಳ ಘಟಕಗಳು



31 ಮಾರ್ಚ್ 2023 ರಲ್ಲಿದ್ದಂತೆ ಯೋಜನೆಯ ವಿವಿಧ ಘಟಕಗಳಡಿಯಲ್ಲಿ ಭೌತಿಕ ಪ್ರಗತಿಯನ್ನು **ಕೋಷ್ಟಕ–3.1** ರಲ್ಲಿ ನೀಡಲಾಗಿದೆ:

ಕೋಷ್ಟಕ–3.1: 31 ಮಾರ್ಚ್ 2024 ರಲ್ಲಿದ್ದಂತೆ ವಿವಿಧ ಘಟಕಗಳಡಿಯಲ್ಲಿ ಭೌತಿಕ ಪ್ರಗತಿಯ ವಿವರಗಳು

ಘಟಕಗಳು			ಪೂರ್ಣಗೊಂಡವು	ಬಾಕಿ	ಪೂರ್ಣಗೊಂಡವುಗಳ ಶೇಕಡಾವಾರು
ಹಂತ–Iರ ಕಾಮಗಾರಿಗಳು					
ವೀಯರ್ ಗಳು (ಸಂಖ್ಯೆ)		8	8	0	100
ಜಾಕ್ ವೆಲ್–ಕಮ್–ಪಂಪ್ ಹೌಸ್ (ಸಂಖ್ಯೆ)		9	9	0	100
ವಿತರಣಾ ಕೊಠಡಿ (ಸಂಖ್ಯೆ)		4	4	0	100
ಎಮ್ಎಸ್ ರೇಸಿಂಗ್ ಮೇನ್ (ಕಿಮೀ)		126.801	125.849	0.952	99
ವಿದ್ಯುತ್ ಕೇಂದ್ರಗಳು	ಕೆಪಿಟಿಸಿಲ್ (400/220 ಕೆವಿ) ಉಪಕೇಂದ್ರ	2	2	0	100
	ಗ್ರಾಹಕ ಉಪಕೇಂದ್ರ	8	7	1	88
220 ಕೆವಿ/66 ಕೆವಿ ಲೈನ್ ಗಳು (ಕಿಮೀ)*		52.66	37.22	15.86	70
ಹಂತ–IIರ ಕಾಮಗಾರಿಗಳು					
ಗುರುತ್ವಾಕರ್ಷಣ ನಾಲೆ (ಕಿಮೀ)		252.54	143.05	109.49	57
ಲಕ್ಕೇನಹಳ್ಳಿಯಲ್ಲಿ ಸಮತೋಲನ ಜಲಾಶಯ		ಮಾರ್ಚ್ 2018ರಲ್ಲಿ ವಹಿಸಿದ ಕಾಮಗಾರಿ ಭೂಸ್ವಾಧೀನ (1200 ಎಕರೆ) ಮಾಡದಿರುವುದರಿಂದ ಇನ್ನೂ ಪ್ರಾರಂಭವಾಗಬೇಕಿದೆ			
ಫೀಡರ್ ನಾಲೆಗಳು (ಕಿಮೀ)		256.81	211.55	45.26	82

* ಅಣೆಕಟ್ಟು–3ರಲ್ಲಿ ಬಾಕಿ ವಿದ್ಯುತ್ ಕೆಲಸಗಳು ಮತ್ತು ಗೋಪುರಗಳ ನಡುವೆ ಓವರ್ ಹೆಡ್ ವಿದ್ಯುತ್ ಮಾರ್ಗಗಳ ಜೋಡಣೆ ಇನ್ನೂ ಪೂರ್ಣಗೊಂಡಿರಲಿಲ್ಲ.

ಆಧಾರ: ವಿಜೆಎನ್ಎಲ್ ಒದಗಿಸಿದ ಮಾಹಿತಿ

ವಿಜೆಎನ್ಎಲ್ ಹಂತ–Iರ ಕಾಮಗಾರಿಗಳ ಲಿಫ್ಟಿಂಗ್ ಘಟಕಗಳನ್ನು ಮೂರು ವರ್ಷಗಳ ಅವಧಿಯಲ್ಲಿ (ಮಾರ್ಚ್ 2017) ಪೂರ್ಣಗೊಳಿಸುವಂತೆ ನಿಗದಿಪಡಿಸಿ ಮಾರ್ಚ್ 2014ರಲ್ಲಿ ವಹಿಸಿತು. ಹಂತ–Iರ ಅಡಿಯಲ್ಲಿ, ವೀಯರ್‌ಗಳ ನಿರ್ಮಾಣ, ಜಾಕ್‌ವೆಲ್ ಕಮ್ ಪಂಪ್‌ಹೌಸ್‌ಗಳು, ಎಮ್ಎಸ್ ರೇಸಿಂಗ್ ಮೇನ್ (ಪೈಪ್‌ಲೈನ್) ಇತ್ಯಾದಿ ಸಿವಿಲ್ ಕಾಮಗಾರಿಗಳು ಮಾರ್ಚ್ 2019ರಲ್ಲಿದ್ದಂತೆ ಪೂರ್ಣಗೊಂಡಿರುವುದನ್ನು ಮೇಲಿನ **ಕೋಷ್ಟಕ–3.1**ರಲ್ಲಿ ಗಮನಿಸಬಹುದು. ಒಂದು ಗ್ರಾಹಕ ಉಪ–ಕೇಂದ್ರದ ನಿರ್ಮಾಣ ಮತ್ತು ಲಿಫ್ಟಿಂಗ್ ಘಟಕ/ಉಪಕರಣಗಳ ಪರೀಕ್ಷೆ ಮತ್ತು ಕಾರ್ಯಾರಂಭ ಪೂರ್ಣಗೊಳ್ಳಬೇಕಾದ ಬಾಕಿ ಕಾಮಗಾರಿಗಳಾಗಿದ್ದವು. ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ನೀರನ್ನು ಸಾಗಿಸಲು ಗುರುತ್ವಾಕರ್ಷಣ ಕಾಲುವೆಯನ್ನು (ಯೋಜನೆಯ ಹಂತ–IIರ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ) ಪೂರ್ಣಗೊಳಿಸದಿರುವುದು ಪರೀಕ್ಷೆ/ಕಾರ್ಯಾರಂಭವನ್ನು ತಡೆಹಿಡಿಯಲು ಕಾರಣವಾಗಿತ್ತು. ಹಂತ–IIರ ಕಾಮಗಾರಿಗಳು ಪೂರ್ಣಗೊಳ್ಳುವಲ್ಲಿನ ವಿಳಂಬಕ್ಕೆ ಕಾರಣಗಳು ಮತ್ತು ಅದರಿಂದ ಯೋಜನೆಯ ಮೇಲೆ ಉಂಟಾಗುವ ಪರಿಣಾಮವನ್ನು ಕೆಳಗೆ ಚರ್ಚಿಸಲಾಗಿದೆ:

3.1.1 ಭೂಸ್ವಾಧೀನದಲ್ಲಿ ವಿಳಂಬ

ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ 2014ರ (ಸಂಹಿತೆ) ಸೆಕ್ಷನ್ 135ರ ಪ್ರಕಾರ, ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದನ್ನು ತಪ್ಪಿಸಬೇಕು. ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಅಂಗೀಕರಿಸಿ ಆ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಇನ್ನೂ ಸ್ವಾಧೀನಪಡಿಸಿ ಕೊಳ್ಳಬೇಕಾದ ಅಪರೂಪದ ಸಂದರ್ಭಗಳಲ್ಲಿ ಸ್ವಾಧೀನ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಸಮರೋಪಾದಿಯಲ್ಲಿ ಕ್ರಮ ಕೈಕೊಳ್ಳಬೇಕು. ಇದಲ್ಲದೆ, ಕಾಮಗಾರಿಗೆ ಹಣವನ್ನು ಮೀಸಲಿಟ್ಟಿದ್ದರೆ ಮಾತ್ರ ತಾಂತ್ರಿಕ ಅನುಮೋದನೆಯ ನಂತರ ಸ್ವಾಧೀನ ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕು ಎಂದು ಸಂಹಿತೆ ತಿಳಿಸುತ್ತದೆ. ಅಂತಹ ಎಲ್ಲಾ ಸಂದರ್ಭಗಳಲ್ಲಿ, ಅಗತ್ಯವಿರುವ ಕಡೆಗಳಲ್ಲಿ ಅನುಮತಿಗಳನ್ನು ಪಡೆಯುವುದು ಸೇರಿದಂತೆ ಸಂಪೂರ್ಣ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರವೇ ಟೆಂಡರ್‌ಗಳನ್ನು ಕರೆಯಬೇಕು.

ಸರ್ಕಾರಿ ಸಂಸ್ಥೆಗಳಿಂದ ಭೂಸ್ವಾಧೀನವು ಒಂದು ದೀರ್ಘ ಮತ್ತು ಸಂಕೀರ್ಣ ಪ್ರಕ್ರಿಯೆಯಾಗಿದೆ. 1 ಜನವರಿ 2014ರಂದು ಜಾರಿಗೆ ಬಂದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ, ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ ಕಾಯಿದೆ, 2013 ಕಾಯಿದೆಯಡಿಯಲ್ಲಿ (ಇನ್ನು

ಮುಂದೆ ಇದನ್ನು ಎಲ್‌ಎ ಕಾಯಿದೆ ಎಂದು ಕರೆಯಲಾಗುತ್ತದೆ) ಭೂಸ್ವಾಧೀನದಲ್ಲಿ ಒಳಗೊಂಡಿರುವ ವಿವಿಧ ಹಂತಗಳನ್ನು ಕೆಳಗಿನ **ನಕ್ಷೆ–3.3** ರಲ್ಲಿ ನೀಡಲಾಗಿದೆ:

ನಕ್ಷೆ–3.3: ಎಲ್‌ಎ ಕಾಯಿದೆ ಪ್ರಕಾರ ಭೂಸ್ವಾಧೀನ ಪ್ರಕ್ರಿಯೆಯ ಹಂತಗಳು

ಭೂಸ್ವಾಧೀನ ಎಲ್‌ಎ ಕಾಯಿದೆಯ ಸೆಕ್ಷನ್–4ರ ಪ್ರಕಾರ, ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದಾಗಲೆಲ್ಲಾ ಅದು ಸಂದರ್ಭಾನುಸಾರ ಸಂಬಂಧಪಟ್ಟ ಪಂಚಾಯತಿ, ಪುರಸಭೆ ಅಥವಾ ನಗರಸಭೆಯನ್ನು ಸಂಪರ್ಕಿಸಿ ಸರ್ಕಾರದ ಅಧಿಸೂಚನೆಯಡಿಯಲ್ಲಿ ಸಾಮಾಜಿಕ ಪರಿಣಾಮ ಮೌಲ್ಯಮಾಪನ (ಎಸ್‌ಐಎ) ಅಧ್ಯಯನವನ್ನು ಕೈಗೊಳ್ಳಬೇಕು. ಇದಲ್ಲದೆ, ಸೆಕ್ಷನ್–7 ಸರ್ಕಾರವು ನೇಮಿಸಿದ ಬಹು–ಹಂತದ ತಜ್ಞರ ಗುಂಪಿನಿಂದ ಎಸ್‌ಐಎ ವರದಿಯ ಮೌಲ್ಯಮಾಪನಕ್ಕೆ ಅವಕಾಶ ಒದಗಿಸುತ್ತದೆ. ಎಸ್‌ಐಎ ಅಧ್ಯಯನವನ್ನು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಬೇಕು. ಅಧ್ಯಯನ ಪೂರ್ಣಗೊಂಡ ನಂತರ ಎಸ್‌ಐಎ ವರದಿಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಬೇಕು ಮತ್ತು ನಂತರ ಭೂಸ್ವಾಧೀನ ಕಾಯಿದೆಯ ಸೆಕ್ಷನ್–11 ರಡಿಯಲ್ಲಿ ಸಂಬಂಧಪಟ್ಟ ವಿಶೇಷ ಭೂ ಸ್ವಾಧೀನ ಕಚೇರಿ (ಎಸ್‌ಎಲ್‌ಎಒ) ಪ್ರಾಥಮಿಕ ಅಧಿಸೂಚನೆಯನ್ನು ಜಾರಿ ಮಾಡುತ್ತದೆ.

ಯೋಜನೆಯ ಮೊದಲ ಪರಿಷ್ಕೃತ ಯೋಜನಾ ವರದಿಯನ್ನು (ಡಿಪಿಆರ್–II) ಸರ್ಕಾರವು ಫೆಬ್ರವರಿ 2014ರಲ್ಲಿ ಅನುಮೋದಿಸಿತು ಮತ್ತು ಹಂತ–Iರ ಕಾಮಗಾರಿಗಳನ್ನು ಐದು ಪ್ಯಾಕೇಜ್‌ಗಳಲ್ಲಿ ಕಾರ್ಯಗತಗೊಳಿಸಲು ಪ್ರಾರಂಭಿಸಿತು. ಎಲ್ಲಾ ಐದು ಪ್ಯಾಕೇಜ್‌ಗಳಿಗೆ ಕಾರ್ಯಾದೇಶಗಳನ್ನು ಮಾರ್ಚ್ 2014ರಲ್ಲಿ ಹೊರಡಿಸಲಾಯಿತು. ಹಂತ–Iರ ಕಾಮಗಾರಿಗಳಿಗೆ ಅಗತ್ಯವಿರುವ ಒಟ್ಟು 485 ಎಕರೆ[25] ಭೂಮಿಯನ್ನು ನೇರ ಖರೀದಿ ಅಥವಾ ಭೂಮಾಲೀಕರೊಂದಿಗೆ ಬಳಕೆ ಹಕ್ಕು ಒಪ್ಪಂದದ ಮೂಲಕ ಸ್ವಾಧೀನಪಡಿಸಿಕೊಳ್ಳಲಾಯಿತು. ಹಂತ–Iರ ಎಲ್ಲಾ ಕಾಮಗಾರಿಗಳನ್ನು ಫೆಬ್ರವರಿ 2017ರೊಳಗೆ ಪೂರ್ಣಗೊಳಿಸಲು ನಿಗದಿಪಡಿಸಲಾಗಿತ್ತು.

ಹಂತ–IIರ ಅಡಿಯಲ್ಲಿ ಕಾಮಗಾರಿಗಳಿಗೆ ಅಗತ್ಯವಿರುವ ಭೂಮಿಯನ್ನು ಡಿಪಿಆರ್–IIರಲ್ಲಿ ಗುರುತ್ವಾಕರ್ಷಣೆ ಮತ್ತು ಫೀಡರ್ ಕಾಲುವೆಗಳಿಗೆ (ಹಾಸನ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಮೂರು ಜಿಲ್ಲೆಗಳಲ್ಲಿ) 10,164 ಎಕರೆ ಎಂದು ನಿರ್ಣಯಿಸಲಾಯಿತು. ಸಾಮಾಜಿಕ ಪರಿಣಾಮ ಮೌಲ್ಯಮಾಪನ ವರದಿಯು ಕಡ್ಡಾಯವಾಗಿದ್ದರಿಂದ, ಸಮಯ ತೆಗೆದುಕೊಳ್ಳುವ ಭೂಸ್ವಾಧೀನ ಪ್ರಕ್ರಿಯೆ ಅಂದರೆ ಪ್ರಾಥಮಿಕ ಅಧಿಸೂಚನೆ ಜಾರಿ ಮಾಡುವುದು, ಸಂಧಾನ, ಅಂತಿಮ ಅಧಿಸೂಚನೆ ಮತ್ತು ಭೂಸ್ವಾಧೀನ ಎಲ್‌ಎ ಕಾಯಿದೆಯಡಿ ಅಗತ್ಯವಿರುವಂತೆ ಭೂಮಿಯ ಐತೀರ್ಪನ್ನು ನೀಡುವುದು ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು, ಡಿಪಿಆರ್–IIರ ಅನುಮೋದನೆ ಮತ್ತು ಹಂತ–Iರ ಅಡಿಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿದ ತಕ್ಷಣ ವಿಜೆಎನ್‌ಎಲ್ ಸಾಮಾಜಿಕ ಪರಿಣಾಮ ಮೌಲ್ಯಮಾಪನ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿತ್ತು.

ಹಂತ–IIರ ಅಡಿಯಲ್ಲಿ ಗುರುತ್ವಾಕರ್ಷಣ ಮುಖ್ಯ ಕಾಲುವೆಗೆ ಅನುಮೋದಿತ ಜೋಡಣೆಯ ಪ್ರಕಾರ, ಹಾಸನದ ಎಸ್‌ಎಲ್‌ಎಒ ವ್ಯಾಪ್ತಿಗೆ ಒಳಪಡುವ ನಾಲ್ಕು ತಾಲ್ಲೂಕುಗಳ 100 ಗ್ರಾಮಗಳು ಮತ್ತು ತುಮಕೂರಿನ ಎಸ್‌ಎಲ್‌ಎಒ

---

[25] ನೇರ ಖರೀದಿಯ ಮೂಲಕ 449 ಎಕರೆ ಮತ್ತು ಬಳಕೆ ಹಕ್ಕು ಒಪ್ಪಂದದ ಮೂಲಕ 36 ಎಕರೆ

ವ್ಯಾಪ್ತಿಗೆ ಒಳಪಡುವ ಎಂಟು ತಾಲ್ಲೂಕುಗಳ 197 ಗ್ರಾಮಗಳು ಅನುಕ್ರಮವಾಗಿ 2,763.44 ಎಕರೆ ಮತ್ತು 3,150.75 ಎಕರೆಗಳ ಪ್ರಸ್ತಾವಿತ ಸ್ವಾಧೀನದಿಂದ ಪ್ರಭಾವಿತವಾಗಿದ್ದವು.

ಹಾಸನದ 100ರಲ್ಲಿ 15 ಹಳ್ಳಿಗಳು ಮತ್ತು ತುಮಕೂರಿನ 197ರಲ್ಲಿ 26 ಹಳ್ಳಿಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿತು ಮತ್ತು ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

- ಭೂಮಿಯ ಅಗತ್ಯತೆಯನ್ನು ಫೆಬ್ರವರಿ 2014ರಲ್ಲಿ ನಿರ್ಧರಿಸಲಾಗಿದ್ದರೂ (ಡಿಪಿಆರ್–II ಅನುಮೋದನೆಯ ದಿನಾಂಕ), ಕಾರ್ಯನಿರ್ವಾಹಕ ವಿಭಾಗಗಳು ಒಂದು ವರ್ಷಕ್ಕೂ ಹೆಚ್ಚಿನ ವಿಳಂಬದ ನಂತರ ಎಸ್‌ಎಲ್‌ಎಓ ಹಾಸನ ಮತ್ತು ತುಮಕೂರಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಪ್ರಾರಂಭಿಸಿದವು. ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ, ಸಲ್ಲಿಕೆಯ ಅವಧಿ ಫೆಬ್ರವರಿ 2015ರಿಂದ ಮೇ 2018ರ ನಡುವೆ ಇದ್ದಿತು. ಕಾರ್ಯನಿರ್ವಾಹಕ ವಿಭಾಗಗಳು, ಹಾಸನದ ಎಸ್‌ಎಲ್‌ಎಓಗೆ 04 ಫೆಬ್ರವರಿ 2015ರಂದು ಮತ್ತು ತುಮಕೂರಿನ ಎಸ್‌ಎಲ್‌ಎಓಗೆ 06 ಜುಲೈ 2015ರಂದು ಮೊದಲ ಪ್ರಸ್ತಾವನೆಯನ್ನು ಸಲ್ಲಿಸಿದ್ದವು. ಭೂಸ್ವಾಧೀನ ಪ್ರಸ್ತಾವನೆಗಳನ್ನು ಸ್ವಾಧೀನಕ್ಕೆ ಅಗತ್ಯವಿರುವ ಭೂಮಿಯ ಆರಂಭಿಕ ಮೌಲ್ಯಮಾಪನದಿಂದ ನಾಲ್ಕು ವರ್ಷಗಳಿಗಿಂತ ಹೆಚ್ಚು ವಿಳಂಬದೊಂದಿಗೆ ಮೇ 2018ರವರೆಗೆ ಎಸ್‌ಎಲ್‌ಎಓಗಳಿಗೆ ಸಲ್ಲಿಸುವುದನ್ನು ಮುಂದುವರೆಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.
- ಕಾರ್ಯನಿರ್ವಾಹಕ ವಿಭಾಗಗಳಿಂದ ಕೋರಿಕೆಗಳನ್ನು ಸ್ವೀಕರಿಸಿದರೂ, ಹಾಸನದ ಎಸ್‌ಎಲ್‌ಎಓ ರವರು ಎಸ್‌ಐಎ ಅಧ್ಯಯನಗಳಿಗೆ ಕಾರ್ಯಾದೇಶಗಳನ್ನು ಜುಲೈ 2016 ಮತ್ತು ಅಕ್ಟೋಬರ್ 2018ರ ನಡುವೆ ನೀಡಿದ್ದರೆ ತುಮಕೂರಿನ ಎಸ್‌ಎಲ್‌ಎಓ ರವರು ಅಕ್ಟೋಬರ್ 2016ರಿಂದ ಜನವರಿ 2017ರ ನಡುವೆ ಅಂದರೆ ಒಂದರಿಂದ ಮೂರು ವರ್ಷಗಳಿಗೂ ಹೆಚ್ಚು ವಿಳಂಬದೊಂದಿಗೆ ಕಾರ್ಯಾದೇಶಗಳನ್ನು ನೀಡಿದ್ದರು.
- ಎಸ್‌ಐಎ ಅಧ್ಯಯನಗಳನ್ನು ಆರು ತಿಂಗಳೊಳಗೆ ಪೂರ್ಣಗೊಳಿಸಬೇಕಾಗಿದ್ದರೂ, ಎಸ್‌ಐಎ ವರದಿಗಳನ್ನು ಸಲ್ಲಿಸುವಲ್ಲಿ ಅಸಾಮಾನ್ಯ ವಿಳಂಬವಿರುವುದನ್ನು ಗಮನಿಸಲಾಯಿತು. ಕೆಳಗಿನ **ಕೋಷ್ಟಕ–3.2**ರಲ್ಲಿ ವಿವರಿಸಿರುವಂತೆ ಎಸ್‌ಐಎ ಅಧ್ಯಯನಗಳಿಗೆ ಸರ್ಕಾರದಿಂದ ಅನುಮೋದನೆ ಪಡೆಯುವಲ್ಲಿ ಮತ್ತಷ್ಟು ವಿಳಂಬವನ್ನು ಗಮನಿಸಲಾಯಿತು.

ಭೂಸ್ವಾಧೀನ ಎಲ್.ಎ ಕಾಯಿದೆಯ ಸೆಕ್ಷನ್–11ರಡಿಯಲ್ಲಿ ಎಸ್‌ಐಎ ಅಧ್ಯಯನಗಳ ಒಟ್ಟಾರೆ ಸ್ಥಿತಿ ಮತ್ತು ತತ್ಪರಿಣಾಮವಾಗಿ ಹಂತ–IIರ ಭೂಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸುವಲ್ಲಿನ ವಿಳಂಬದ ಪರಿಣಾಮವು ಈ ಕೆಳಗಿನಂತಿದೆ:

ಕೋಷ್ಟಕ–3.2: ಎಸ್‌ಐಎ ಕೈಗೊಳ್ಳುವಲ್ಲಿ ಮತ್ತು ಪ್ರಾಥಮಿಕ ಅಧಿಸೂಚನೆ ಹೊರಡಿಸುವಲ್ಲಿ ವಿಳಂಬ

ವಿಶೇಷ ಭೂಸ್ವಾಧೀನ ಕಛೇರಿ	ಎಸ್‌ಐಎ ಕಾಮಗಾರಿಯನ್ನು ವಹಿಸಿದ ದಿನಾಂಕ	ಎಸ್‌ಐಎ ವರದಿಗಳ ಸಂಖ್ಯೆ	ಸರ್ಕಾರಕ್ಕೆ ಎಸ್‌ಐಎ ವರದಿಯನ್ನು ಸಲ್ಲಿಸಿದ ದಿನಾಂಕ	ಸರ್ಕಾರವು ಎಸ್‌ಐಎ ವರದಿಯನ್ನು ಅನುಮೋದಿಸಿದ ದಿನಾಂಕ	ಪ್ರಾಥಮಿಕ ಅಧಿಸೂಚನೆಯ ದಿನಾಂಕ
ಹಾಸನ	15.07.2016 ರಿಂದ 14.10.2018	3	29.10.2018 ರಿಂದ 21.02.2019	21.01.2019 ರಿಂದ 25.02.2019	28.02.2019
ತುಮಕೂರು	28.10.2016 ರಿಂದ 16.01.2017	4	17.05.2017 to 31.05.2018	31.08.2017 ರಿಂದ 03.08.2018	07.12.2017

ಆಧಾರ: ಭೂಸ್ವಾಧೀನಾಧಿಕಾರಿಗಳು ಸಲ್ಲಿಸಿದ ಮಾಹಿತಿ

ಎಸ್‌ಐಎ ಅಧ್ಯಯನಗಳನ್ನು ವಹಿಸುವಲ್ಲಿ ಎರಡು ವರ್ಷಗಳಿಗೂ ಹೆಚ್ಚಿನ ವಿಳಂಬವು ಭೂಸ್ವಾಧೀನದ ಇತರ ಪ್ರಕ್ರಿಯೆಗಳನ್ನು ಮತ್ತಷ್ಟು ವಿಳಂಬವಾಗಿಸಿತು. ಗುರುತ್ವಾಕರ್ಷಣ ಕಾಲುವೆ ಕಾಮಗಾರಿಗಳಿಗೆ (ಹಂತ–II)

ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಗಾಗಿ, ತುಮಕೂರು ಮತ್ತು ಹಾಸನದ ಎಸ್‌ಎಲ್‌ಎಒ ರವರು ಕ್ರಮವಾಗಿ ಡಿಸೆಂಬರ್ 2017 ಮತ್ತು ಫೆಬ್ರವರಿ 2019ರಲ್ಲಿ ಪ್ರಾಥಮಿಕ ಅಧಿಸೂಚನೆಗಳನ್ನು ಹೊರಡಿಸಲು ಪ್ರಾರಂಭಿಸಿದರು.

ಹೀಗೆ, ಭೂಸ್ವಾಧೀನ ಅಧಿಕಾರಿಗಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವಲ್ಲಿ ಮತ್ತು ಎಸ್‌ಐಎ ಕಾಮಗಾರಿಗಳನ್ನು ಪ್ರಾರಂಭಿಸುವಲ್ಲಿ ಅತಿಯಾದ ವಿಳಂಬವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಇದು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಮತ್ತಷ್ಟು ವಿಳಂಬಕ್ಕೆ ಕಾರಣವಾಯಿತು.

ಮಾರ್ಚ್ 2024 ರಲ್ಲಿದ್ದಂತೆ ಯೋಜನೆಯ ಹಂತ–IIರ ಕಾಮಗಾರಿಗಳಿಗಾಗಿ ಭೂಸ್ವಾಧೀನದಲ್ಲಿನ ಪ್ರಗತಿಯನ್ನು ಕೆಳಗಿನ **ನಕ್ಷೆ–3.4**ರಲ್ಲಿ ನೀಡಲಾಗಿದೆ:

ನಕ್ಷೆ–3.4: ಎರಡನೇ ಹಂತದ ಕಾಮಗಾರಿಗಳಿಗೆ ಭೂಸ್ವಾಧೀನದ ಪ್ರಗತಿ



ಆಧಾರ: ಭೂಸ್ವಾಧೀನಾಧಿಕಾರಿಗಳು ಸಲ್ಲಿಸಿದ ಮಾಹಿತಿ

ಸ್ವಾಧೀನಕ್ಕೆ ಉದ್ದೇಶಿಸಲಾದ ಒಟ್ಟು 10,018.41 ಎಕರೆ ಭೂಮಿಯಲ್ಲಿ, 31ಮಾರ್ಚ್ 2024 ರಲ್ಲಿದ್ದಂತೆ 3722.14 ಎಕರೆ (ಶೇಕಡಾ 37) ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಉಳಿದ 6,296.27 ಎಕರೆ ಭೂಮಿಯಲ್ಲಿ, 3,811.32 ಎಕರೆ ಭೂಮಿಗೆ (ಶೇಕಡಾ 38) ಸಂಬಂಧಿಸಿದಂತೆ ಸೆಕ್ಷನ್ 11ರ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸುವುದು ಇನ್ನೂ ಬಾಕಿ ಉಳಿದಿತ್ತು. ಎರಡನೇ ಪರಿಷ್ಕೃತ ಡಿಪಿಆರ್ (ಜನವರಿ 2023) ಅನುಮೋದನೆ ಆಗುವವರೆಗೆ ವಿಜೆಎನ್‌ಎಲ್ ಸಮತೋಲನ ಜಲಾಶಯದ ಸ್ಥಳವನ್ನು ಅಂತಿಮಗೊಳಿಸಲು ಸಾಧ್ಯವಾಗದ ಕಾರಣ, 1200 ಎಕರೆಗಳಷ್ಟು ಸಮತೋಲನ ಜಲಾಶಯಕ್ಕೆ ಅಗತ್ಯವಿರುವ ಭೂಮಿ ಇದರಲ್ಲಿ ಸೇರಿತ್ತು. ವಿವಿಧ ಹಂತಗಳಲ್ಲಿ ವಿಳಂಬಕ್ಕೆ ಕಾರಣಗಳನ್ನು ತಿಳಿದುಕೊಳ್ಳಲು, ಕಾರ್ಯಗತಗೊಳಿಸುವ ವಿಭಾಗಗಳು ಸಲ್ಲಿಸಿದ ಪ್ರಸ್ತಾವನೆಗಳಿಗೆ ಮತ್ತು ಸಂಬಂಧಪಟ್ಟ ಎಸ್‌ಎಲ್‌ಎಒಗಳ ಮಟ್ಟದಲ್ಲಿ ತೆಗೆದುಕೊಂಡ ಮುಂದಿನ ಕ್ರಮಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಒದಗಿಸುವಂತೆ ಲೆಕ್ಕಪರಿಶೋಧನೆಯು ವಿನಂತಿಸಿತು. ಆದರೆ, ಆ ದಾಖಲೆಗಳನ್ನು ಇನ್ನೂ ನಿರೀಕ್ಷಿಸಲಾಗಿದೆ (ಜನವರಿ 2025).

3.1.2 ಹಂತ–IIರ ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾದ ಕಾರಣ, ₹2965.77 ಕೋಟಿ ಮೌಲ್ಯದ ಆಸ್ತಿಗಳು ಕಾರ್ಯೋನ್ಮುಖವಾಗಿಲ್ಲ

ಹಂತ–IIರ ಅಡಿಯಲ್ಲಿ ಗುರುತ್ವಾಕರ್ಷಣೆ ಕಾಲುವೆ ಕಾಮಗಾರಿಗಳನ್ನು, ಭೂಸ್ವಾಧೀನವು ಬಾಕಿ ಉಳಿದಿದ್ದರೂ, ₹8609.23 ಕೋಟಿ ನಿಗದಿಪಡಿಸಲಾದ ವೆಚ್ಚದೊಂದಿಗೆ 34 ಪ್ಯಾಕೇಜ್‌ಗಳಲ್ಲಿ ಪ್ರಾರಂಭಿಸಲಾಯಿತು (ಡಿಸೆಂಬರ್ 2017 ಮತ್ತು ಮಾರ್ಚ್ 2023ರ ನಡುವೆ). ಹಂತ–IIರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕಾಗಿ ಮೊಟ್ಟಮೊದಲ ಪ್ರಾಥಮಿಕ ಅಧಿಸೂಚನೆಯನ್ನು ಎಸ್‌ಎಲ್‌ಎಒ ರವರು 07 ಡಿಸೆಂಬರ್ 2017ರಂದು

ಹೊರಡಿಸಿದ್ದರು. ಆದರೆ, ವಿಜೆಎನ್‌ಎಲ್ ಏಳು ಕಾಮಗಾರಿಗಳಿಗೆ ಟೆಂಡರ್ ಅಧಿಸೂಚನೆಯನ್ನು ಮೇ ಮತ್ತು ನವೆಂಬರ್ 2017ರಲ್ಲಿಯೇ ಅಂದರೆ ಭೂಸ್ವಾಧೀನದ ಪ್ರಾಥಮಿಕ ಅಧಿಸೂಚನೆ ಹೊರಡಿಸುವ ಮೊದಲೇ ಹೊರಡಿಸಿತ್ತು. ಉಳಿದ 27 ಪ್ಯಾಕೇಜ್‌ಗಳಲ್ಲಿ, ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಆದರೆ ಭೂಸ್ವಾಧೀನ ಪ್ರಕ್ರಿಯೆಯ ಉಳಿದ ಹಂತಗಳು ಪೂರ್ಣಗೊಳ್ಳಲು ಬಾಕಿ ಉಳಿದಿರುವಂತೆಯೇ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಯಿತು. ಮಾರ್ಚ್ 2024ರಲ್ಲಿದ್ದಂತೆ, ಭೂಸ್ವಾಧೀನ ಮಾಡಿಕೊಳ್ಳದಿರುವುದು, ರೈತರ ಪ್ರತಿಭಟನೆ, ಕೋವಿಡ್–19 ಮುಂತಾದ ವಿವಿಧ ಕಾರಣಗಳಿಂದ 27 ಪ್ಯಾಕೇಜ್ ಕಾಮಗಾರಿಗಳು ಅಪೂರ್ಣವಾಗಿ ಉಳಿದಿದ್ದವು (ಭೌತಿಕ ಪ್ರಗತಿಯು ಶೇಕಡಾ 4ರಿಂದ 92ರ ವ್ಯಾಪ್ತಿಯಲ್ಲಿದ್ದಿತು) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಗುರುತ್ವಾಕರ್ಷಣೆ ಕಾಲುವೆ ಕಾಮಗಾರಿಗಳನ್ನು ಹೊರತುಪಡಿಸಿ, ಅಗತ್ಯವಿರುವ ಭೂಮಿಯು ಲಭ್ಯವಿರದಿದ್ದುದರಿಂದ ₹592.35 ಕೋಟಿ ಟೆಂಡರ್ ವೆಚ್ಚದಲ್ಲಿ ವಹಿಸಲಾದ (ಫೆಬ್ರವರಿ 2018) ಸಮತೋಲನ ಜಲಾಶಯದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ (ಮಾರ್ಚ್ 2024). ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರನ್ನು ಸಾಗಿಸಲು ಗುರುತ್ವಾಕರ್ಷಣ ಕಾಲುವೆ ಮತ್ತು ಸಮತೋಲನ ಜಲಾಶಯದ ಪೂರ್ಣಗೊಳಿಸುವಿಕೆಯು ಅತ್ಯಗತ್ಯವಾಗಿದ್ದರಿಂದ, ಮಾರ್ಚ್ 2019ರಲ್ಲಿದ್ದಂತೆ ಹಂತ–Iರ ಅಡಿಯಲ್ಲಿ ₹2965.77 ಕೋಟಿ ವೆಚ್ಚದಲ್ಲಿ ರಚಿಸಲಾದ ಸ್ವತ್ತುಗಳು ನಿಷ್ಕ್ರಿಯವಾಗಿದ್ದವು ಮತ್ತು ಇಲ್ಲಿಯವರೆಗೆ (ಮಾರ್ಚ್ 2024) ಬಳಕೆ ಮಾಡಿರಲಿಲ್ಲ. ಎರಡು ಹಂತಗಳಡಿಯಲ್ಲಿ ಕಾಮಗಾರಿಗಳನ್ನು ಸಮನ್ವಯ ಮಾಡದಿರುವ ಪರಿಣಾಮವನ್ನು ಕೆಳಗಿನ **ಕೋಷ್ಟಕ–3.3**ರಲ್ಲಿ ನೀಡಲಾಗಿದೆ:

ಕೋಷ್ಟಕ–3.3: ಹಂತ–I ಮತ್ತು ಹಂತ–IIರ ಕಾಮಗಾರಿಗಳನ್ನು ಸಮನ್ವಯ ಮಾಡದಿದ್ದುದರಿಂದಾದ ಪರಿಣಾಮಗಳು

ಕ್ರಮ ಸಂಖ್ಯೆ	ಹಂತದ ಕಾಮಗಾರಿಗಳು	ಐತೀರ್ಪಿನ ಅವಧಿ	ಕಾಮಗಾರಿಗಳನ್ನು ಒಟ್ಟುಗೂಡಿಸದಿರುವುದರ ಪರಿಣಾಮ
1	ಹಂತ–Iರ ಕಾಮಗಾರಿಗಳು i) ಲಿಫ್ಟಿಂಗ್ ಘಟಕಗಳು	ಮಾರ್ಚ್ 2014	ಮಾರ್ಚ್ 2019ರಿಂದ ₹2965.77 ಕೋಟಿ ನಿರ್ಬಂಧಿವಾಗಿದೆ. ಪಂಪ್‌ಗಳು/ಮೋಟಾರ್‌ಗಳಂತಹ ಎಲೆಕ್ಟ್ರೋ–ಮೆಕ್ಯಾನಿಕಲ್ ಉಪಕರಣಗಳನ್ನು ಪರೀಕ್ಷಿಸಲು ಮತ್ತು ಅಳವಡಿಸಲು ಸಾಧ್ಯವಾಗಲಿಲ್ಲ ಮತ್ತು ಅವುಗಳನ್ನು ನಿಷ್ಕ್ರಿಯವಾಗಿಡಲಾಗಿದ್ದು, ಅವುಗಳ ಉಪಯುಕ್ತ ಜೀವನದ ಗಮನಾರ್ಹ ಭಾಗವು ಮುಗಿದುಹೋಗಿತ್ತು (**ಪ್ರದರ್ಶಿಕೆ–1**).
	ii) ವಿದ್ಯುತ್ ಕಾಮಗಾರಿಗಳು	ಜುಲೈ 2017 ಮತ್ತು ಮಾರ್ಚ್ 2018	
2	ಹಂತ–IIರ ಕಾಮಗಾರಿಗಳು i) ಗುರುತ್ವಾಕರ್ಷಣೆ ನಾಲೆ 0.00 ಕಿಮಿ ರಿಂದ 261 ಕಿಮೀ	ಡಿಸೆಂಬರ್ 2017ರಿಂದ ಮಾರ್ಚ್ 2023	ಕಾಮಗಾರಿಗಳನ್ನು ವಹಿಸುವಲ್ಲಿ ಮೂರು ವರ್ಷಗಳಿಗೂ ಹೆಚ್ಚು ವಿಳಂಬವಾಯಿತು ಮತ್ತು ಇನ್ನೂ ಪೂರ್ಣಗೊಂಡಿರಲಿಲ್ಲ (ಡಿಸೆಂಬರ್ 2023)
	ii) ಫೀಡರ್ ನಾಲೆ ಕಾಮಗಾರಿಗಳು	ಮಾರ್ಚ್ 2019ರಿಂದ ಮೇ 2023	ಫೀಡರ್ ನಾಲೆಯ ಕಾಮಗಾರಿಗಳನ್ನು ವಹಿಸುವಲ್ಲಿ ಐದು ವರ್ಷಗಳಿಗೂ ಹೆಚ್ಚಿನ ವಿಳಂಬ
	iii) ಸಮತೋಲನ ಜಲಾಶಯ	ಫೆಬ್ರವರಿ 2018	ಭೂಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸದ ಕಾರಣ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ (ಡಿಸೆಂಬರ್ 2023).

ಆಧಾರ: ವಿಜೆಎನ್‌ಎಲ್ ಸಲ್ಲಿಸಿದ ಮಾಹಿತಿ

ಪ್ರದರ್ಶಿಕೆ–1: ಅಳವಡಿಸಿದ್ದು ಇನ್ನೂ ಕಾರ್ಯಾರಂಭವಾಗದ ಪಂಪ್‌ಗಳು

ಇದಲ್ಲದೆ, ಭೂಮಿಯ ಲಭ್ಯತೆಗೆ ಅನುಗುಣವಾಗಿ ಹಂತ–IIರ ಅಡಿಯಲ್ಲಿನ ಕಾಮಗಾರಿಗಳನ್ನು ವಿಭಜಿತ ರೀತಿಯಲ್ಲಿ ಕಾರ್ಯಗತಗೊಳಿಸಿದ್ದು, ಕೆಳಗಿನ **ನಕ್ಷೆ–3.5**ರಲ್ಲಿ ತೋರಿಸಿರುಂತೆ, ತುಂಡು ತುಂಡಾಗಿ ಮೂಲಸೌಕರ್ಯಗಳನ್ನು ಸೃಷ್ಟಿಸುವಲ್ಲಿ ಪರಿಣಮಿಸಿತು.

ನಕ್ಷೆ–3.5: ಮಾರ್ಚ್ 2024ರಲ್ಲಿದ್ದಂತೆ ಹಂತ–IIರ ಕಾಮಗಾರಿಗಳ ಪ್ರಗತಿ



ಆಧಾರ: ವಿಜೆಎನ್ಎಲ್ ಸಲ್ಲಿಸಿದ ಮಾಹಿತಿ

ಭೂಸ್ವಾಧೀನ ಎಲ್.ಎ ಕಾಯಿದೆಯಡಿಯಲ್ಲಿ ಕಡ್ಡಾಯಗೊಳಿಸಲಾದ ವಿವಿಧ ಹಂತಗಳು/ಅವಶ್ಯಕತೆಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬದಿಂದಾಗಿ ಯೋಜನೆಯ ವಿವಿಧ ಹಂತಗಳನ್ನು ಸಮನ್ವಯಗೊಳಿಸಲು ಸಾಧ್ಯವಾಗಲಿಲ್ಲ ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024). ಹಂತ–IIರ ಕಾಮಗಾರಿಗಳು ದುರ್ಬಲ ಭೂಪ್ರದೇಶ, ಕಡ್ಡಾಯವಾಗಿದ್ದ ಎಸ್ಐಎ ಯನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಮತ್ತು ಇತರ ಭೂಸ್ವಾಧೀನ ಸಮಸ್ಯೆಗಳು, ವಿವಿಧ ಅಧಿಕಾರಿಗಳಿಂದ ಅಗತ್ಯ ಅನುಮತಿಗಳನ್ನು ಪಡೆಯುವಲ್ಲಿ ವಿಳಂಬ ಮುಂತಾದ ಅಡಚಣೆಗಳಿಂದ ಬಾಧಿತವಾದವು. ವೆಚ್ಚದ ಏರಿಕೆಯನ್ನು ತಪ್ಪಿಸಲು ಯೋಜನೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಯಿತು ಎಂದೂ ಕೂಡ ತಿಳಿಸಲಾಯಿತು.

ಮಾರ್ಚ್ 2014ರಲ್ಲಿ ಹಂತ–Iರ ಕಾಮಗಾರಿಗಳನ್ನು ವಹಿಸಿದ ನಂತರ, ಹಂತ–IIರ ಕಾಮಗಾರಿಗಳಿಗೆ ಭೂಸ್ವಾಧೀನಕ್ಕಾಗಿ ಕಡ್ಡಾಯವಾಗಿದ್ದ ಎಸ್ಐಎ ಅಧ್ಯಯನಗಳನ್ನು ತಕ್ಷಣವೇ ಕೈಗೆತ್ತಿಕೊಳ್ಳಬಹುದಿತ್ತಾದ್ದರಿಂದ ಸರ್ಕಾರದ ಉತ್ತರವನ್ನು ಒಪ್ಪಲಾಗುವುದಿಲ್ಲ. ಆದರೆ, ಎಸ್ಐಎ ಅಧ್ಯಯನವನ್ನು ಪ್ರಾರಂಭಿಸುವಲ್ಲಿನ ಮತ್ತು ಪೂರ್ಣಗೊಳಿಸುವಿಕೆಯಲ್ಲಿನ ವಿಳಂಬದಿಂದಾಗಿ ಹಂತ–IIರ ಕಾಮಗಾರಿಗಳ ಪ್ರಾರಂಭವು ಮೂರುವರೆ ವರ್ಷಗಳಿಗೂ ಹೆಚ್ಚು ಕಾಲ ವಿಳಂಬವಾಯಿತು. ಹೀಗೆ, ಭೂಮಿ ಲಭ್ಯವಿದ್ದಲ್ಲೆಲ್ಲಾ ತಾತ್ಪೂರ್ತಿಕ ರೀತಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಆಸ್ತಿಗಳು ನಿಷ್ಕ್ರಿಯವಾಗುವುದರ ಜೊತೆಗೆ ಯೋಜನೆಯ ಉದ್ದೇಶವನ್ನು ಸಾಧಿಸದಿರುವಲ್ಲಿ ಪರಿಣಮಿಸಿತು.

3.2 ಗುತ್ತಿಗೆ ನಿರ್ವಹಣೆ

ಯೋಜನೆಯನ್ನು ಎಚ್ಚರಿಕೆಯಿಂದ ಕಲ್ಪಿಸಲಾಗಿದೆ ಮತ್ತು ಯೋಜಿಸಲಾಗಿದೆ, ಸಂಪನ್ಮೂಲಗಳು ಮತ್ತು ವೆಚ್ಚಗಳನ್ನು ವಿವರವಾಗಿ ರೂಪಿಸಲಾಗಿದೆ, ವಿನ್ಯಾಸಗಳನ್ನು ಅಗತ್ಯ ಮಾನದಂಡಗಳ ಪ್ರಕಾರ ಮಿತವ್ಯಯವಾಗಿ ಮತ್ತು ನಿಖರವಾಗಿ ಮಾಡಲಾಗಿದೆ ಹಾಗೂ ಕನಿಷ್ಠ ವೆಚ್ಚ ಮತ್ತು ಸಮಯ ವ್ಯರ್ಥವಿಲ್ಲದೆ ಯೋಜನೆಯನ್ನು ಕಡಿಮೆ ಸಮಯದಲ್ಲಿ ಕಾರ್ಯಗತಗೊಳಿಸಲಾಗಿದೆ, ಅಪೇಕ್ಷಿತ ಗುಣಮಟ್ಟದ ಮಾನದಂಡಗಳನ್ನು ಸಾಧಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಳ್ಳುವ ಎಲ್ಲಾ ಕ್ರಮಗಳನ್ನು ಗುತ್ತಿಗೆ ನಿರ್ವಹಣೆಯು ಕಲ್ಪಿಸುತ್ತದೆ. ಸೂಕ್ತವಾದ ಗುತ್ತಿಗೆದಾರರ ಆಯ್ಕೆ ಮತ್ತು ಗುತ್ತಿಗೆ ನಿರ್ವಹಣೆಯು ಯೋಜನೆಯ ಅನುಷ್ಠಾನದ ಪ್ರಮುಖ

ಅಂಶವಾಗಿದೆ. ಕಂಪನಿಯು, ಯೋಜನೆಗಾಗಿ ₹22,194.02 ಕೋಟಿ[26] ಮೌಲ್ಯದ 55 ಗುತ್ತಿಗೆ ಪ್ಯಾಕೇಜ್‌ಗಳನ್ನು (ಹಂತ–I: 7 ಮತ್ತು ಹಂತ–II: 48) ಕಾರ್ಯಗತಗೊಳಿಸಿತ್ತು. ಈ ಕಾಮಗಾರಿಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಗುತ್ತಿಗೆ ನಿರ್ವಹಣೆಯಲ್ಲಿ ಈ ಕೆಳಗಿನ ನ್ಯೂನತೆಗಳನ್ನು ತಿಳಿಯಪಡಿಸಿತು:

3.2.1 ಟೆಂಡರ್ ಪ್ರಕ್ರಿಯೆ

ಕೈಗೊಂಡ ಕಾಮಗಾರಿಗಳನ್ನು ಮಿತವ್ಯಯವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯಗತಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಯೋಜನೆಗೆ ಟೆಂಡರ್ ಪ್ರಕ್ರಿಯೆಯನ್ನು 1999ರ ಕೆಟಿಪಿಪಿ ಕಾಯಿದೆಯ ನಿಬಂಧನೆಗಳ ಪ್ರಕಾರ ಮತ್ತು ಅದರಡಿಯಲ್ಲಿ ರೂಪಿಸಲಾದ ನಿಯಮಗಳ ಪ್ರಕಾರ ಕಟ್ಟುನಿಟ್ಟಾಗಿ ಕೈಗೊಳ್ಳಬೇಕಾಗಿತ್ತು. ನಿಗದಿತ ಕಾರ್ಯವಿಧಾನಗಳಿಂದ ಟೆಂಡರ್ ಪ್ರಕ್ರಿಯೆಯಲ್ಲಿನ ವಿಚಲನಗಳನ್ನು ಕೆಳಗಿನ **ಕೋಷ್ಟಕ–3.4**ರಲ್ಲಿ ನೀಡಲಾಗಿದೆ:

ಕೋಷ್ಟಕ–3.4: ಟೆಂಡರ್ ಪ್ರಕ್ರಿಯೆಯಲ್ಲಿ ನಿಗದಿತ ಮಾನದಂಡಗಳಿಂದ ವಿಚಲನಗಳು

ಕ್ರಮ ಸಂಖ್ಯೆ	ನಿಗದಿತ ಮಾನದಂಡ	ಗಮನಿಸಿದ ವಿಚಲತೆ	ವಿಚಲತೆಯ ಪರಿಣಾಮ	ಸರ್ಕಾರದ ಪ್ರತಿಕ್ರಿಯೆ/ ಲೆಕ್ಕಪರಿಶೋಧನೆಯ ಅವಲೋಕನ
1	ರಾಜ್ಯದಲ್ಲಿರುವ ಎಲ್ಲಾ ಖರೀದಿ ಘಟಕಗಳಲ್ಲಿ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಚಾಲ್ತಿಯಲ್ಲಿರುವ ಟೆಂಡರ್ ದಾಖಲೆಗಳ (ಪಿಡಬ್ಲ್ಯುಜಿ–65 ಮತ್ತು ಪಿಡಬ್ಲ್ಯುಜಿ–66)[27] ಬಳಕೆಯನ್ನು ನಿಲ್ಲಿಸಿ (ಅಕ್ಟೋಬರ್ 2008) ಪ್ರಮಾಣಿತ ಟೆಂಡರ್ ದಾಖಲೆಗಳ (ಕೆಡಬ್ಲ್ಯು–1ರಿಂದ ಕೆಡಬ್ಲ್ಯು–6) ಬಳಕೆಯನ್ನು ಕರ್ನಾಟಕ ಸರ್ಕಾರವು ಸೂಚಿಸಿತು.	2013–14ರಿಂದ 2022–23ರ ಅವಧಿಯಲ್ಲಿ (ಜನವರಿ–2023 ರವರೆಗೆ) ಕೆಎನ್ಎನ್ಎಲ್/ ವಿಜೆಎನ್ಎಲ್ ಯೋಜನೆಯಡಿಯಲ್ಲಿ 55ರಲ್ಲಿ 44 ಕಾಮಗಾರಿಗಳನ್ನು (₹18,163.44 ಕೋಟಿ ಮೌಲ್ಯ) ಪಿಡಬ್ಲ್ಯುಜಿ–65 ಮತ್ತು ಪಿಡಬ್ಲ್ಯುಜಿ–66 ಅನ್ನು ಅಳವಡಿಸಿಕೊಳ್ಳುವ ಮೂಲಕ ವಹಿಸಿದವು	ಆರ್ಥಿಕ ಸಾಮರ್ಥ್ಯ, ಬಿಡ್ ಸಾಮರ್ಥ್ಯ, ಕಾಮಗಾರಿಗಳ ಅನುಭವ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರ ಸಾಮರ್ಥ್ಯದ ಮೌಲ್ಯಮಾಪನವಿಲ್ಲದೆ 55 ರಲ್ಲಿ 44 ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗಿತ್ತು ಎಂಬುದನ್ನು ಗಮನಿಸಲಾಯಿತು.	ಜನವರಿ 2023ರಿಂದ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳಿಗೆ ಪ್ರಮಾಣಿತ ಟೆಂಡರ್ ದಾಖಲೆಗಳನ್ನು ಅಳವಡಿಸಿ ಕೊಳ್ಳಲಾಗುತ್ತಿದೆ ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಯೋಜನೆಯ 55ರಲ್ಲಿ 44 ಪ್ಯಾಕೇಜ್‌ಗಳನ್ನು ವಹಿಸಿದ ನಂತರವೇ ಪ್ರಮಾಣಿತ ಟೆಂಡರ್ ದಾಖಲೆಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂಬುದು ವಾಸ್ತವಾಂಶವಾಗಿದೆ.
2	14 ಅಕ್ಟೋಬರ್ 2008ರ ಸರ್ಕಾರಿ ಆದೇಶದ ಪ್ರಕಾರ, ಬಿಡ್ ಸಾಮರ್ಥ್ಯ ಮತ್ತು ಹಿಂದಿನ ಕಾರ್ಯಕ್ಷಮತೆ ಸೇರಿದಂತೆ ನಿಗದಿತ ಅರ್ಹತಾ ಮಾನದಂಡಗಳನ್ನು ಪೂರೈಸಿದ, ತಾಂತ್ರಿಕವಾಗಿ ಮತ್ತು ವಾಣಿಜ್ಯಿಕವಾಗಿ ಪ್ರತಿಕ್ರಿಯಿಸುವ ಅತ್ಯಂತ ಕಡಿಮೆ ಮೌಲ್ಯಮಾಪನ ಮಾಡಿದ ಟೆಂಡರ್‌ದಾರರಿಗೆ ಮಾತ್ರ ಗುತ್ತಿಗೆಗಳನ್ನು ನೀಡಬೇಕು. ಗುತ್ತಿಗೆದಾರರ ಬಿಡ್ ಸಾಮರ್ಥ್ಯವನ್ನು ನಿರ್ಣಯಿಸುವ ಷರತ್ತನ್ನು ಪ್ರಮಾಣಿತ ಟೆಂಡರ್ ದಾಖಲೆಗಳ (ಕೆಡಬ್ಲ್ಯು–1ರಿಂದ ಕೆಡಬ್ಲ್ಯು–6) ಭಾಗವಾಗಿ ಮಾಡಲಾಯಿತು ಮತ್ತು ಚಾಲ್ತಿಯಲ್ಲಿರುವ ಟೆಂಡರ್ ದಾಖಲೆಗಳನ್ನು (ಪಿಡಬ್ಲ್ಯುಜಿ 65 ಮತ್ತು 66) ನಿಲ್ಲಿಸಲಾಯಿತು.	ಕೆಎನ್ಎನ್ಎಲ್/ವಿಜೆಎನ್ಎಲ್ ಪ್ರಮಾಣಿತ ಟೆಂಡರ್ ದಾಖಲೆಯನ್ನು ಅಳವಡಿಸಿಕೊಳ್ಳಲು ವಿಫಲವಾದ 44 ಕಾಮಗಾರಿಗಳಲ್ಲಿ, ₹16807.31 ಕೋಟಿ ವೆಚ್ಚದ 43 ಕಾಮಗಾರಿಗಳನ್ನು ಗುತ್ತಿಗೆದಾರರ ಬಿಡ್ ಸಾಮರ್ಥ್ಯವನ್ನು ನಿರ್ಣಯಿಸದೆ ನೀಡಲಾಗಿತ್ತು.	ಬಿಡ್ ಸಾಮರ್ಥ್ಯದ ಮೌಲ್ಯಮಾಪನ ಮಾಡದಿರುವುದು, ನಿರ್ದಿಷ್ಟ ಗುತ್ತಿಗೆದಾರರು ನಿರ್ದಿಷ್ಟ ಸಮಯದಲ್ಲಿ ಕಾಮಗಾರಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಬಹುದು ಎಂಬ ಸಮಂಜಸವಾದ ಭರವಸೆಯನ್ನು ಪಡೆಯದೆ ಕಾಮಗಾರಿಗಳನ್ನು ವಹಿಸಿಕೊಡುವ ಅಪಾಯವನ್ನು ಒಳಗೊಂಡಿರುತ್ತದೆ. 43 ಕಾಮಗಾರಿಗಳಲ್ಲಿ, ₹14,805.80 ಕೋಟಿ ವೆಚ್ಚದ 29 ಕಾಮಗಾರಿಗಳನ್ನು ಕೇವಲ ಏಳು ಗುತ್ತಿಗೆದಾರರಿಗೆ ವಹಿಸಲಾಗಿತ್ತು ಎಂಬುದನ್ನು ಗಮನಿಸಲಾಯಿತು. **ಅನುಬಂಧ–1**ರಲ್ಲಿ ವಿವರಿಸಿದಂತೆ ಓರ್ವ[28] ಗುತ್ತಿಗೆದಾರನಿಗೆ ₹5,216.58 ಕೋಟಿ ಮೌಲ್ಯದ 11 ಗುತ್ತಿಗೆಗಳನ್ನು ನೀಡಲಾಗಿತ್ತು.	ಬಿಡ್ಡರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದನ್ನು ಉತ್ತೇಜಿಸಲು ಬಿಡ್ ಸಾಮರ್ಥ್ಯಕ್ಕೆ ಸಂಬಂಧಿಸಿದ ಷರತ್ತುಗಳನ್ನು ಸಡಿಲಿಸಲಾಯಿತು ಎಂಬ ವಿಜೆಎನ್ಎಲ್‌ನ ಉತ್ತರವನ್ನು ಸರ್ಕಾರ (ಮಾರ್ಚ್ 2024) ದೃಢೀಕರಿಸಿತು. 2021ರಿಂದ ಈ ಷರತ್ತನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ ಎಂದೂ ಸಹ ತಿಳಿಸಲಾಯಿತು. ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ, ಬಿಡ್ ಸಾಮರ್ಥ್ಯವನ್ನು ನಿರ್ಣಯಿಸದೆ ಕೆಎನ್ಎನ್ಎಲ್/ವಿಜೆಎನ್ಎಲ್ ಯೋಜನೆಯಡಿಯಲ್ಲಿ ಪ್ರಮುಖ ಕಾಮಗಾರಿಗಳನ್ನು ವಹಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.
3	ಕೆಪಿಡಬ್ಲ್ಯೂಡಿ ಸಂಹಿತೆಯ ನಿಯಮ 176 (ಎ)(ii) ಮತ್ತು ಕೆಟಿಪಿಪಿ ನಿಯಮಗಳ ನಿಯಮ 17ರ ಪ್ರಕಾರ, ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ₹ ಎರಡು ಕೋಟಿವರೆಗಿನ ಕಾಮಗಾರಿಗಳಿಗೆ ಕನಿಷ್ಠ 30 ದಿನಗಳು ಮತ್ತು ₹ ಎರಡು ಕೋಟಿಗಿಂತ ಅಧಿಕ ಮೌಲ್ಯದ ಕಾಮಗಾರಿಗಳಿಗೆ 60 ದಿನಗಳ ಬಿಡ್ಡಿಂಗ್ ಸಮಯವನ್ನು ಖಚಿತಪಡಿಸಿಕೊಳ್ಳಬೇಕು. ಈ ಷರತ್ತನ್ನು ತಿದ್ದುಪಡಿ ಮಾಡಲಾಯಿತು (ಸೆಪ್ಟೆಂಬರ್ 2019) ಮತ್ತು ₹ ಎರಡು ಕೋಟಿಗಿಂತ ಹೆಚ್ಚಿನ ಮೌಲ್ಯದ	ಕೆಎನ್ಎನ್ಎಲ್/ವಿಜೆಎನ್ಎಲ್ 55 ಕಾಮಗಾರಿಗಳಲ್ಲಿ 52 ಕಾಮಗಾರಿಗಳಿಗೆ ಅಲ್ಪಾವಧಿಯ ಟೆಂಡರ್‌ಗಳನ್ನು ಆಹ್ವಾನಿಸಿ, ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಕಾಮಗಾರಿಗಳಾಗಿದ್ದರಿಂದ ಆದ್ಯತೆಯ ಮೇರೆಗೆ ಪೂರ್ಣಗೊಳಿಸಬೇಕಾಗಿತ್ತು ಎಂಬ ಕಾರಣಕ್ಕೆ 9ರಿಂದ 33 ದಿನಗಳ ಬಿಡ್ಡಿಂಗ್ ಸಮಯವನ್ನು ಮಾತ್ರ ನೀಡಿತ್ತು. ಇದರಲ್ಲಿ ₹8,989.09 ಕೋಟಿ ಮೌಲ್ಯದ 14 ಟರ್ನ್–ಕೀ ಗುತ್ತಿಗೆಗಳೂ ಸೇರಿದ್ದವು. ಬಿಡ್ಡರ್‌ಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳಾಕೃತಿ, ಸಮೀಕ್ಷೆ/ಮಣ್ಣಿನ	ಅಲ್ಪಾವಧಿಯ ಟೆಂಡರ್ ಆಧಾರದ ಮೇಲೆ ನೀಡಲಾದ 53 ಕಾಮಗಾರಿಗಳಲ್ಲಿ 52 ಕಾಮಗಾರಿಗಳು, ಡಿಸೆಂಬರ್ 2023 ರಲ್ಲಿದ್ದಂತೆ ಅಪೂರ್ಣವಾಗಿ ಉಳಿದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಅಲ್ಪಾವಧಿ ಟೆಂಡರ್ ಯೋಜನೆಯಿಂದ ಶೀಘ್ರವಾಗಿ ಪೂರ್ಣಗೊಳಿಸುವಿಕೆಯ ಉದ್ದೇಶವೂ ಈಡೇರಲಿಲ್ಲ ಅಥವಾ ಸಾಕಷ್ಟು ಸ್ಪರ್ಧಾತ್ಮಕತೆಯನ್ನು ಖಚಿತಪಡಿಸಿಕೊಳ್ಳಲಿಲ್ಲ. ಇದು ಅನುಚಿತ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಪರಿಣಮಿಸಿತು.	ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಯೋಜನೆಯ ತ್ವರಿತ ಅನುಷ್ಠಾನಕ್ಕಾಗಿ, ಕೆಟಿಪಿಪಿ ಕಾಯಿದೆಯ ನಿಬಂಧನೆಗಳನ್ನು ಸೂಕ್ತವಾಗಿ ಪಾಲಿಸುವ ಮೂಲಕ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಅಲ್ಪಾವಧಿಯ ಟೆಂಡರ್‌ಗಳನ್ನು ಕರೆಯಲಾಗಿತ್ತು ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಯೋಜನೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಉದ್ದೇಶವು ಈಡೇರದ ಕಾರಣ ಅಲ್ಪಾವಧಿಯ ಟೆಂಡರ್‌ನ ಕರೆಯಲಾಗಿತ್ತು ಎಂಬ ಉತ್ತರ ಒಪ್ಪಲಾಗುವುದಿಲ್ಲ ಮತ್ತು ಇದು ಅನೇಕ ಹೊಸ ಅರ್ಹ ಬಿಡ್ಡರ್‌ಗಳು

26 ಹಂತ–I: ₹4,115.07 ಕೋಟಿ (7 ಪ್ಯಾಕೇಜ್ ಗಳು), ಹಂತ–II: ₹18,078.95 ಕೋಟಿ (48 ಪ್ಯಾಕೇಜ್ ಗಳು)

27 ಚಾಲ್ತಿಯಲ್ಲಿರುವ ಟೆಂಡರ್ ದಾಖಲೆಗಳ (ಪಿಡಬ್ಲ್ಯುಜಿ 65 ಮತ್ತು 66) ಕೆಲವು ನಿಬಂಧನೆಗಳು ಕೆಟಿಪಿಪಿ ಕಾಯ್ದೆ 1999 ರ ನಿಬಂಧನೆಗಳಿಗೆ ಅನುಗುಣವಾಗಿಲ್ಲದ ಕಾರಣ, ಪ್ರಮಾಣಿತ ಟೆಂಡರ್ ದಾಖಲೆಗಳನ್ನು (ಕೆಡಬ್ಲ್ಯು 1 ರಿಂದ ಕೆಡಬ್ಲ್ಯು 6) ಸೂಚಿಸಲಾಗಿದೆ.

28 ಮೆಸ್ಸರ್ಸ್ ಶಂಕರ್ ನಾರಾಯಣ ಕನ್ಸ್ಟ್ರಕ್ಷನ್ಸ್

ಕ್ರಮ ಸಂಖ್ಯೆ	ನಿಗದಿತ ಮಾನದಂಡ	ಗಮನಿಸಿದ ವಿಚಲತೆ	ವಿಚಲತೆಯ ಪರಿಣಾಮ	ಸರ್ಕಾರದ ಪ್ರತಿಕ್ರಿಯೆ/ ಲೆಕ್ಕಪರಿಶೋಧನೆಯ ಅವಲೋಕನ
	ಕಾಮಗಾರಿಗಳಿಗೆ ಅವಧಿಯನ್ನು 60 ದಿನಗಳಿಂದ 30 ದಿನಗಳಿಗೆ ಇಳಿಸಲಾಯಿತು.	ತನಿಖೆ ನಡೆಸುವುದು, ಕಾಮಗಾರಿಯ ವ್ಯಾಪ್ತಿಯನ್ನು ನಿರ್ಣಯಿಸುವುದು, ಪ್ರಮಾಣಗಳ ಅಂದಾಜಿಗಾಗಿ ವಿನ್ಯಾಸ ರೇಖಾಚಿತ್ರಗಳನ್ನು ಸಿದ್ಧಪಡಿಸುವುದು ಮತ್ತು ವಿನ್ಯಾಸ ರೇಖಾಚಿತ್ರಗಳು ಮತ್ತು ವಿಶಿಷ್ಟತೆಗಳಿಗನುಗುಣವಾಗಿ ಕಾಮಗಾರಿಗೆ ನಿಗದಿತ ಮೊತ್ತವನ್ನು ಉಲ್ಲೇಖಿಸಬೇಕಾಗಿತ್ತು.		ಭಾಗವಹಿಸುವುದನ್ನು ತಡೆಗಟ್ಟಿ ಸ್ಪರ್ಧಾತ್ಮಕತೆಯನ್ನು ಕಸಿದುಕೊಂಡಿರಬಹುದು.
4	ಟೆಂಡರ್ ಅಧಿಸೂಚನೆಯಲ್ಲಿ ಬಿಡ್‌ದಾರರಿಗೆ ನೀಡಿದ ಸೂಚನೆಗಳ ಪ್ರಕಾರ ಗುತ್ತಿಗೆದಾರರು ಒದಗಿಸಿದ ಮಾಹಿತಿಯ ಆಧಾರದ ಮೇಲೆ ತಾಂತ್ರಿಕ ಬಿಡ್‌ನ ಮೌಲ್ಯಮಾಪನವನ್ನು ಮಾಡಲಾಗುತ್ತದೆ. ಉದ್ಯೋಗದಾತರು ಒದಗಿಸಿದ ಯಾವುದೇ ಪ್ರಮಾಣಪತ್ರ/ಮಾಹಿತಿ ಸುಳ್ಳು ಎಂದು ಕಂಡುಬಂದರೆ ಅಂತಹ ಬಿಡ್ ದಾರರನ್ನು ಅನರ್ಹಗೊಳಿಸಲಾಗುತ್ತದೆ ಮತ್ತು ಬಿಡ್‌ನಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗುತ್ತದೆ". ಇದಲ್ಲದೆ, ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್‌ನ[29] ತೀರ್ಪು "ಸುಳ್ಳು ದಾಖಲೆಗಳನ್ನು ಸಲ್ಲಿಸುವ ಗುತ್ತಿಗೆದಾರರ ಇಎಮ್‌ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು" ಎಂದು ನಿರ್ದೇಶಿಸಿದೆ.	ಪ್ಯಾಕೇಜ್–4ಕ್ಕೆ ಟೆಂಡರ್‌ಗಳನ್ನು ಸಲ್ಲಿಸುವಾಗ (ಜುಲೈ 2017) ಕಾಮಗಾರಿ ಪೂರ್ಣಗೊಂಡಿರುವುದಕ್ಕೆ ನಕಲಿ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಿದ್ದರೂ ಸಹ, ವಿಜೆಎನ್‌ಎಲ್ ಗುತ್ತಿಗೆದಾರರನ್ನು[30] ಕಪ್ಪುಪಟ್ಟಿಗೂ ಸೇರಿಸಲಿಲ್ಲ ಅಥವಾ ಅವರ ₹3.92 ಕೋಟಿ ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಿಲ್ಲ. ಗುತ್ತಿಗೆದಾರರು ಗುತ್ತಿಗೆಯನ್ನು ಪಡೆಯುವಲ್ಲಿ ಯಶಸ್ವಿಯಾಗದಿದ್ದರೂ, ಏಜೆನ್ಸಿಯನ್ನು ಅರ್ಹ ಬಿಡ್ಡರ್‌ಗಳಲ್ಲಿ ಒಂದೆಂದು ಪರಿಗಣಿಸಿ ಟೆಂಡರ್ ಅನ್ನು ಅಂತಿಮಗೊಳಿಸಲಾಯಿತು. ನಂತರ ಸದರಿ ಏಜೆನ್ಸಿಗೆ (ಡಿಸೆಂಬರ್ 2017 ಮತ್ತು ಜನವರಿ 2018) ಇತರ ಎರಡು ಪ್ಯಾಕೇಜ್‌ಗಳಿಗೆ ಬಿಡ್ ಮಾಡಲು ಅವಕಾಶ ನೀಡಿರುವುದನ್ನೂ ಸಹ ಗಮನಿಸಲಾಯಿತು.	ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸದಿರುವ ಜೊತೆಗೆ, ಇಎಂಡಿ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ವಿಜೆಎನ್‌ಎಲ್‌ನ ವಿಫಲತೆಯು ಗುತ್ತಿಗೆದಾರರಿಗೆ ನೀಡಿದ ಅನುಚಿತ ಆರ್ಥಿಕ ಅನುಕೂಲವಾಗಿದ್ದು, ಸರ್ಕಾರಕ್ಕೆ ಆರ್ಥಿಕ ನಷ್ಟವನ್ನುಂಟುಮಾಡಿದೆ.	ಹಣಕಾಸು ವರ್ಷದ ಕೊನೆಯಲ್ಲಿ ಕೆಲಸದ ಒತ್ತಡದಿಂದಾಗಿ ನಕಲಿ ದಾಖಲೆಯನ್ನು ಅಪ್‌ಲೋಡ್ ಮಾಡಿದ್ದು, ಅದು ಉದ್ದೇಶ ಪೂರ್ವಕವಾಗಿರಲಿಲ್ಲ ಎಂಬ ಗುತ್ತಿಗೆದಾರರ ಕ್ಷಮೆಯಾಚನೆಯ ಆಧಾರದ ಮೇಲೆ ದಂಡನಾ ಕ್ರಮ ಕೈಗೊಳ್ಳಲಿಲ್ಲ ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024). ಕಾಮಗಾರಿ ಪೂರ್ಣಗೊಳಿಸಿದ ನಕಲಿ ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಿದ್ದು ವಂಚನೆಯಾಗಿರುವುದರಿಂದ ಮತ್ತು ಟೆಂಡರ್ ಷರತ್ತು ಮತ್ತು ಸಂಬಂಧಿತ ಸುಪ್ರೀಂ ಕೋರ್ಟ್ ಆದೇಶಗಳ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ

3.2.2 ಗುತ್ತಿಗೆದಾರರಿಗೆ ಅಧಿಕ ಪಾವತಿಗಳು ಮತ್ತು ಅನರ್ಹ ಅನುಕೂಲ

3.2.2.1 ಸಿದ್ಧಪಡಿಸಿದ ವಸ್ತುಗಳ ಮೇಲೆ ಏರಿಯಾ ವೇಟೇಜ್ ಸೇರಿಸುವುದು

ಜಲ ಸಂಪನ್ಮೂಲ ಇಲಾಖೆಯ ದರಪಟ್ಟಿಯ (2012–13) ಸಾಮಾನ್ಯ ಟಿಪ್ಪಣಿಗಳ ಐಟಂ 17ರ ಪ್ರಕಾರ, ಮಲೆನಾಡು[31] ಪ್ರದೇಶದಲ್ಲಿ ನಿರ್ವಹಿಸಲಾದ ಕಾಮಗಾರಿಗಳಿಗೆ ಹೆಚ್ಚುವರಿ ವೇಟೇಜ್ ಗಾಗಿ ಅವಕಾಶ ನೀಡಲಾಗಿದೆ. ಅಂದಾಜುಗಳ ಪರಿಶೀಲನೆಯಲ್ಲಿ, ಗುಡ್ಡಗಾಡು ಪ್ರದೇಶದಲ್ಲಿ ಕಾರ್ಯಗತಗೊಳಿಸುವ ಕಷ್ಟಗಳನ್ನು ಪರಿಗಣಿಸಿ ಹಂತ–Iರ ಕಾಮಗಾರಿಗಳ (ಲಿಫ್ಟಿಂಗ್ ಘಟಕಗಳು) ಅಂದಾಜುಗಳ ಎಲ್ಲಾ ಐಟಂಗಳ ಮೂಲ ದರಗಳಿಗೆ ಶೇಕಡಾ 12ರಷ್ಟು ಏರಿಯಾ ವೇಟೇಜ್ ಅನ್ನು ಸೇರಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದರೆ, ಸರಕುಗಳ ಪೂರೈಕೆಯನ್ನು ಮಾತ್ರ ಒಳಗೊಂಡಿರುವ ಕಾಮಗಾರಿಗಳ ಐಟಂಗಳಿಗೆ (ಉದಾಹರಣೆಗೆ ಮೆಟಾಲಿಕ್ ವೋಲ್ಯೂಟ್ ಪಂಪ್‌ಗಳು/ಮೋಟಾರ್‌ಗಳ ಪೂರೈಕೆ) ಸಂಬಂಧಿಸಿದಂತೆ ಪ್ರದೇಶ ಕೃಪಾಂಕವನ್ನು ಅಳವಡಿಸಿಕೊಂಡಿದ್ದು ಸಮರ್ಥನೀಯವಲ್ಲ.

ವಿವಿಧ ಪ್ಯಾಕೇಜ್‌ಗಳಲ್ಲಿನ ಮೋಟಾರ್‌ಗಳ ಬೆಲೆಯ ವಿವರಗಳನ್ನು ಕೆಳಗಿನ **ಕೋಷ್ಟಕ–3.5**ರಲ್ಲಿ ನೀಡಲಾಗಿದೆ.

29 2019 ರ ಸಿವಿಲ್ ಮೇಲ್ಮನವಿ 1049ರ (ವಿದರ್ಭ ನೀರಾವರಿ ಅಭಿವೃದ್ಧಿ ನಿಗಮ vs ಅನೋಜ್ ಕುಮಾರ್ ಗರ್ವಾಲಾ) ಮೇಲಿನ ತೀರ್ಪಿನ ಷರತ್ತು 2.00(xii)

30 ಮೆಸರ್ಸ್ ಹೆಚ್‌ಇಎಸ್ ಇನ್ಫ್ರಾ ಪ್ರೈವೇಟ್ ಲಿಮಿಟೆಡ್

31 ಮಲೆನಾಡು ಅಭಿವೃದ್ಧಿ ಕಾಯ್ದೆಯಡಿಯಲ್ಲಿ ಪ್ರಸ್ತಾವಿಸಲಾದ ಪ್ರದೇಶಗಳು

ಕೋಷ್ಟಕ–3.5: ಹಂತ–Iರ ಪ್ಯಾಕೇಜ್‌ಗಳಲ್ಲಿರುವ ಮೋಟಾರ್‌ಗಳ ಪ್ರಮಾಣ ಮತ್ತು ವೆಚ್ಚದ ವಿವರಗಳು

ಪ್ಯಾಕೇಜ್ ಗಳು	ಪ್ಯಾಕೇಜನ್ನು ವಹಿಸಿದ ಬೆಲೆ (₹ ಕೋಟಿಗಳಲ್ಲಿ)	ಪ್ಯಾಕೇಜ್‌ನಲ್ಲಿ ಮೋಟಾರ್ ಗಳು/ವಿದ್ಯುತ್ ಕಾಮಗಾರಿಗಳ ಬೆಲೆ (₹ ಕೋಟಿಗಳಲ್ಲಿ)	ಅಂದಾಜಿನಲ್ಲಿ ಅಳವಡಿಸಿಕೊಂಡಿರುವ ಪಂಪ್‌ಗಳ ಸಾಮರ್ಥ್ಯ (ಹೆಚ್ ಪಿಗಳಲ್ಲಿ)	ಬೆಲೆಯಲ್ಲಿ ಶೇಕಡಾ 12ರಷ್ಟು ಹೆಚ್ಚಿನ ಮೌಲ್ಯ/ಹೆಚ್‌ಪಿ (₹)	ಮೊತ್ತ (₹ ಕೋಟಿಗಳಲ್ಲಿ)
ಪ್ಯಾಕೇಜ್–1	448.57	151.85	70800	1638.18	11.60
ಪ್ಯಾಕೇಜ್–2	685.79	140.00	110110	1638.18	18.04
ಪ್ಯಾಕೇಜ್–3	1135.03	166.71	94350	1638.18	15.46
ಪ್ಯಾಕೇಜ್–4	903.83	162.47	3680	1346.71	0.50
ಪ್ಯಾಕೇಜ್–5	543.28	78.33	18240	1639.55	2.99
ಒಟ್ಟು	**3716.50**	**699.36**			**48.59**

ಆಧಾರ: ವಿಜೆಎನ್‌ಎಲ್ ಸಲ್ಲಿಸಿದ ಮಾಹಿತಿ

ಹೀಗೆ, ಮೇಲಿನ ಪೂರೈಕೆಯಾದ ವಸ್ತುಗಳ ಮೂಲ ದರಗಳಿಗೆ ಏರಿಯಾ ವೇಟೇಜ್ ಪರಿಗಣಿಸಿದ್ದು ಅಂದಾಜುಗಳು ₹48.59 ಕೋಟಿಗಳಷ್ಟು ಹೆಚ್ಚುವಲ್ಲಿ ಪರಿಣಮಿಸಿತು. ಅಂತಹ ಸಂದರ್ಭಗಳಲ್ಲಿ ಟೆಂಡರ್ ಪ್ರೀಮಿಯಂಗಳನ್ನು ನಿಯಂತ್ರಿಸಲು ಸಾಧ್ಯತೆಯಿರುವುದರಿಂದ ತಪ್ಪಾದ ವೆಚ್ಚದ ಅಂದಾಜುಗಳು ಟೆಂಡರ್ ಮೌಲ್ಯಮಾಪನ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತವೆ.

ಮಲೆನಾಡು ಪ್ರದೇಶದಲ್ಲಿ ಕಾಮಗಾರಿಗಳು ನಡೆಯುತ್ತಿದ್ದರಿಂದ ಜಲಸಂಪನ್ಮೂಲ ಇಲಾಖೆಯ ದರಪಟ್ಟಿಯ ಪ್ರಕಾರ ಏರಿಯಾ ವೇಟೇಜ್ ಸೇರಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024). ಮೋಟಾರ್ ಮತ್ತು ಪಂಪ್‌ಗಳ ಪೂರ್ಣಗೊಂಡ ಐಟಂಗಳು ಇಳಿಸುವಿಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭವನ್ನು ಒಳಗೊಂಡಿರುವುದರಿಂದ, ಪ್ರದೇಶ ಕೃಪಾಂಕವನ್ನು ಐಟಂ ದರಗಳಿಗೆ ಸೇರಿಸಲಾಗಿತ್ತೂ ಎಂದೂ ಕೂಡ ತಿಳಿಸಲಾಯಿತು.

ಕಾಮಗಾರಿಗಳಡಿಯಲ್ಲಿ ಪೂರೈಕೆ ಭಾಗ ಮತ್ತು ಸಿವಿಲ್/ನಿರ್ಮಾಣ ಭಾಗವನ್ನು ವಿಭಜಿಸುವ ಆಯ್ಕೆಯನ್ನು ಅನ್ವೇಷಿಸದಿರುವುದು ಐಟಂನ ಸಂಯೋಜಿತ ದರಕ್ಕೆ ಏರಿಯಾ ವೇಟೇಜ್ ಅನ್ನು ಸೇರಿಸುವಲ್ಲಿ ಪರಿಣಮಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಯೋಜನೆಯಡಿಯಲ್ಲಿ ವಿದ್ಯುತ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅಂದಾಜುಗಳನ್ನು ಪೂರೈಕೆ, ಸಿವಿಲ್ ಕಾಮಗಾರಿಗಳು ಮತ್ತು ನಿರ್ಮಾಣ ಭಾಗಗಳಾಗಿ ವಿಂಗಡಿಸಲಾಗಿತ್ತು ಮತ್ತು ಏರಿಯಾ ವೇಟೇಜ್ ಅನ್ನು ಸಿವಿಲ್ ಕಾಮಗಾರಿಗಳು ಮತ್ತು ನಿರ್ಮಾಣ ಭಾಗಕ್ಕೆ ಮಾತ್ರ ಸೇರಿಸಲಾಗಿತ್ತೇ ಹೊರತು ಪೂರೈಕೆ ಭಾಗದ ಮೇಲಲ್ಲ ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವಾಗಿದೆ.

3.2.2.2 ಮೈಲ್ಡ್ ಸ್ಟೀಲ್ ಪೈಪ್‌ಗಳ ಉದ್ದದ ಹೆಚ್ಚುವರಿ ಪ್ರಮಾಣವನ್ನು ವಸೂಲು ಮಾಡದಿರುವುದು

ಒಪ್ಪಂದದ ಸಾಮಾನ್ಯ ಷರತ್ತುಗಳ ಕಲಂ 18ರ ಪ್ರಕಾರ, "ಪೈಪ್‌ಗಳು, ವಿಶೇಷಗಳು, ಯಂತ್ರೋಪಕರಣಗಳು, ವಿದ್ಯುತ್ ವಸ್ತುಗಳು ಮುಂತಾದವುಗಳ ಅಗತ್ಯ ಪ್ರಮಾಣವನ್ನು ಖರೀದಿಸಲು ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ. ಕಾಮಗಾರಿಗಳಿಗೆ ಖರೀದಿಸಲಾದ ಯಾವುದೇ ಸಾಮಗ್ರಿಗಳು, ಕಾಮಗಾರಿಗಳು ಪೂರ್ಣಗೊಂಡ ನಂತರ ಯಾವುದೇ ಕಾರಣಗಳಿಂದಾಗಿ ಹೆಚ್ಚುವರಿಯಾಗಿ ಕಂಡುಬಂದರೆ, ಗುತ್ತಿಗೆದಾರರು ಹಿಂದಕ್ಕೆ ತೆಗೆದುಕೊಳ್ಳುತ್ತಾರೆ ಮತ್ತು ಅಂತಹ ಹೆಚ್ಚುವರಿ ಸಾಮಗ್ರಿಗಳಿಗೆ ಉದ್ಯೋಗದಾತ/ಅಭ್ಯಂತರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಹೆಚ್ಚುವರಿ ಸಾಮಗ್ರಿಗಳಿಗೆ ಪಾವತಿಸಿದ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಬೇಕಾದ ಯಾವುದೇ ಬಿಲ್‌ಗಳಿಂದ ಕಡಿತಗೊಳಿಸಲಾಗುತ್ತದೆ.

ಹಂತ–1 ರ ಐದು ಪ್ಯಾಕೇಜ್ ಗಳಲ್ಲಿ ಕಾರ್ಯಗತಗೊಳಿಸಲಾದ ಮೈಲ್ಡ್ ಸ್ಟೀಲ್ ರೇಸಿಂಗ್ ಮೇನ್ (ಪೈಪ್‌ಲೈನ್) ಒಟ್ಟು ಉದ್ದವು ಅಂದಾಜು ಉದ್ದವಾದ 140.930 ಕಿ.ಮೀ.ಗಳಿಗೆ ಪ್ರತಿಯಾಗಿ 128.096 ಕಿ.ಮೀ. ಇರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಅದರಂತೆ, ಸಕಲೇಶಪುರ ವಿಭಾಗವು ಪ್ಯಾಕೇಜ್–5ಕ್ಕೆ ಸಂಬಂಧಿಸಿದಂತೆ ಅಂದಾಜು ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ ಪ್ರಮಾಣಧ ಕಾರ್ಯಗತಗೊಳಿಸುವಿಕೆಯಿಂದಾಗಿ ₹9.32 ಕೋಟಿಗಳನ್ನು (ಮೈಲ್ಡ್ ಸ್ಟೀಲ್ ರೈಸಿಂಗ್ ಮೇನ್ (ಪೈಪ್‌ಲೈನ್) ವೆಚ್ಚ ₹7.78 ಕೋಟಿ, ಬಡ್ಡಿ ₹1.54 ಕೋಟಿ) ವಸೂಲಿ ಮಾಡಿತ್ತು. ಆದರೆ, ಇತರ ನಾಲ್ಕು ಪ್ಯಾಕೇಜ್ ಗಳಲ್ಲಿ ವಸೂಲಾತಿಯನ್ನು ಕೈಗೊಂಡಿರಲಿಲ್ಲವಾಗಿ ಗುತ್ತಿಗೆದಾರರಿಗೆ ಬಡ್ಡಿಯ ಜೊತೆಗೆ ₹181.21 ಕೋಟಿಗಳ ಹೆಚ್ಚುವರಿ ಲಾಭವಾಯಿತು (**ಅನುಬಂಧ–2**ರಲ್ಲಿ ವಿವರಿಸಿದಂತೆ).

ಮೇಲಿನ ಕೆಲಸಗಳನ್ನು ಟರ್ನ್–ಕೀ ಆಧಾರದ ಮೇಲೆ ವಹಿಸಲಾಗಿತ್ತು ಮತ್ತು ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಗುತ್ತಿಗೆದಾರನು ಒಪ್ಪಂದದ ಬೆಲೆಯೊಳಗೆ ಪ್ರಮಾಣಗಳ ಹೆಚ್ಚಳ ಅಥವಾ ಇಳಿಕೆಯನ್ನು ಕಾರ್ಯಗತಗೊಳಿಸಬೇಕಾಗಿತ್ತು ಎಂದು ಸರ್ಕಾರ ಉತ್ತರಿಸಿತು (ಮಾರ್ಚ್ 2024).

ಗುತ್ತಿಗೆದಾರರ ಭವಿಷ್ಯದ ಬಿಲ್‌ಗಳಿಂದ ಪೈಪ್‌ಗಳು, ವಿಶೇಷಗಳು ಮುಂತಾದ ಹೆಚ್ಚುವರಿ ವಸ್ತುಗಳನ್ನು ವಸೂಲು ಮಾಡಲು ಒಪ್ಪಂದದ ಸಾಮಾನ್ಯ ಷರತ್ತುಗಳ ಕಲಂ–18 ನಿಗದಿಪಡಿಸಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಹೆಚ್ಚುವರಿ ಸಾಮಗ್ರಿಗಳಿಗಾಗಿ ಪ್ಯಾಕೇಜ್–5ರಡಿಯಲ್ಲಿ ವಿಜೆಎನ್ಎಲ್ ಈಗಾಗಲೇ ₹9.32 ಕೋಟಿಗಳನ್ನು ವಸೂಲಿ ಮಾಡಿರುವುದರಿಂದ, ಇತರ ಪ್ಯಾಕೇಜ್‌ಗಳಲ್ಲಿ ಕೂಡ ವಸೂಲಿ ಮಾಡಬೇಕಿರುತ್ತದೆ.

3.2.2.3 ಟರ್ನ್–ಕೀ ಒಪ್ಪಂದದ ಭಾಗವಾಗಿ ನಿರ್ವಹಿಸಬೇಕಾದ ಕೆಲಸಗಳ ಮೇಲಿನ ನ್ಯಾಯಸಮ್ಮತವಲ್ಲದ ವೆಚ್ಚಗಳು

ಕಾಮಗಾರಿಯ ಪ್ರಮಾಣ, ವಿಶಿಷ್ಟತೆ, ವಿನ್ಯಾಸಗಳು, ಹೆಚ್ಚುವರಿ ಕಾಮಗಾರಿ ಮತ್ತು ಕಾಮಗಾರಿಯನ್ನು ಕಡಿಮೆ ಮಾಡುವ ಬಗ್ಗೆ ತಿಳಿಸುವ ಟೆಂಡರ್ ದಾಖಲೆಯ ಕಲಂ–13 (ಎ), ಕಾರ್ಯನಿರ್ವಾಹಕ ಅಭಿಯಂತರರ ಲಿಖಿತ ಆದೇಶದ ಪ್ರಕಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಯಾವುದೇ ರೀತಿಯ ಹೆಚ್ಚುವರಿ ಕಾಮಗಾರಿಯನ್ನು ಗುತ್ತಿಗೆದಾರರು ಕಾರ್ಯಗತಗೊಳಿಸಬೇಕು ಮತ್ತು ಅಂತಹ ಬದಲಾವಣೆಯು ಯಾವುದೇ ರೀತಿಯಲ್ಲಿ ಒಪ್ಪಂದವನ್ನು ಅಮಾನ್ಯಗೊಳಿಸಬಾರದು ಎಂದು ನಿಗದಿಪಡಿಸುತ್ತದೆ.

ಟರ್ನ್–ಕೀ ಒಪ್ಪಂದದ ಭಾಗವಾಗಿದ್ದರೂ, ಪ್ರತ್ಯೇಕ ಒಪ್ಪಂದಗಳ ಮೂಲಕ ಕಾರ್ಯಗತಗೊಳಿಸಲಾದ ಎರಡು ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿಜೆಎನ್ಎಲ್ ಜೂನ್ 2023 ರಲ್ಲಿದ್ದಂತೆ ₹11.52 ಕೋಟಿಗಳ ಹೆಚ್ಚುವರಿ ವೆಚ್ಚವನ್ನು (ನೀಡಲಾದ ವೆಚ್ಚ ₹18.06 ಕೋಟಿ) ಭರಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು.

- ಪ್ಯಾಕೇಜ್–2ರ ಮುಂಭಾಗ ಮತ್ತು ಪಂಪಿಂಗ್ ಸ್ಟೇಷನ್‌ನಲ್ಲಿ ಹೆಚ್ಚುವರಿ ನೀರು ಸಂಗ್ರಹವಾಗುವುದನ್ನು ನಿಯಂತ್ರಿಸಲು ಮತ್ತು ಹೆಚ್ಚುವರಿ ಪ್ರವಾಹದ ನೀರನ್ನು ಸಾಗಿಸಲು ಪಂಪ್‌ಹೌಸ್ ಪ್ರದೇಶದ ತೀವ್ರ ಬಲ ತುದಿಗೆ ಆರ್‌ಸಿಸಿ ನೆಲಮಟ್ಟದ ತೊಟ್ಟಿಯನ್ನು ನಿರ್ಮಿಸಲು ಪ್ರಸ್ತಾವಿಸಲಾಯಿತು. ಇದು ವೀಯರ್–1ರ ಸಾಮಾನ್ಯ ಕೊಳದಲ್ಲಿ ಮಣ್ಣು ಮತ್ತು ಅವಶೇಷಗಳು ಸಂಗ್ರಹವಾಗುವುದನ್ನು ತಪ್ಪಿಸುತ್ತದೆ. ಕಾಮಗಾರಿಯ ಅನುಷ್ಠಾನದ ಸಮಯದಲ್ಲಿ ವೀಯರ್–1 ಮತ್ತು ಪಂಪ್‌ಹೌಸ್–1ರ ಮರುವಿನ್ಯಾಸದಿಂದಾಗಿ ಈ ಅವಶ್ಯಕತೆ ಉದ್ಭವಿಸಿತು. ಮೇಲಿನ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಗುತ್ತಿಗೆದಾರರು ಒಪ್ಪಲಿಲ್ಲ ಮತ್ತು ವಿಜೆಎನ್ಎಲ್ ಮೇಲಿನ ಕಾಮಗಾರಿಯನ್ನು (ಪ್ರದರ್ಶಿಕೆ–2) ₹7.30 ಕೋಟಿಗಳ ನಿಗದಿತ ವೆಚ್ಚದಲ್ಲಿ ಇಲಾಖಾವತಿಯಿಂದ ಕೈಗೆತ್ತಿಕೊಂಡಿತು. ಜೂನ್ 2023 ರಲ್ಲಿದ್ದಂತೆ ಭರಿಸಿದ ವೆಚ್ಚವು ₹4.97 ಕೋಟಿಗಳಾಗಿತ್ತು.
- ಅದೇ ರೀತಿ ಪ್ಯಾಕೇಜ್–3ರಲ್ಲಿ ಪಂಪ್ ಹೌಸ್–9ರ ಮುಂಭಾಗದಿಂದ ಹೆಚ್ಚುವರಿ ನೀರನ್ನು ಹೇಮಾವತಿ ನದಿಗೆ ಹರಿಸಲು ಚೂಟ್ ಕಾಲುವೆ ನಿರ್ಮಾಣ ಅನಿವಾರ್ಯವಾಗಿತ್ತು. ಆದರೆ, ಚೂಟ್ ಕಾಲುವೆ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಗುತ್ತಿಗೆದಾರರು ಒಪ್ಪಲಿಲ್ಲ ಮತ್ತು ವಿಜೆಎನ್ಎಲ್ ಮೇಲಿನ ಕಾಮಗಾರಿಯನ್ನು (**ಪ್ರದರ್ಶಿಕೆ–3**) ₹10.76 ಕೋಟಿಗಳ ನಿಗದಿತ ವೆಚ್ಚದಲ್ಲಿ ಇಲಾಖಾ ವತಿಯಿಂದ ಕೈಗೆತ್ತಿಕೊಂಡಿತು. ಜೂನ್ 2023 ರಲ್ಲಿದ್ದಂತೆ ಭರಿಸಿದ ವೆಚ್ಚವು ₹6.55 ಕೋಟಿಗಳಾಗಿತ್ತು.

ಪ್ರದರ್ಶಿಕೆ–2: ಹೆಚ್ಚುವರಿ ನೀರನ್ನು ಸಾಗಿಸಲು ನೆಲಮಟ್ಟದ ತೊಟ್ಟಿ

ಪ್ರದರ್ಶಿಕೆ–3: ಹೆಚ್ಚುವರಿ ನೀರನ್ನು ತಿರುಗಿಸಲು ಚೂಟ್ ಕಾಲುವೆ

ಟರ್ನ್–ಕೀ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಮೇಲಿನ ಕಾಮಗಾರಿಗಳ ಅವಶ್ಯಕತೆ ಉಂಟಾಯಿತು ಮತ್ತು ಮುಖ್ಯ ಕಾಮಗಾರಿಗೆ ಪ್ರಾಸಂಗಿಕವಾಗಿರುವುದರಿಂದ ಗುತ್ತಿಗೆದಾರರು ಅವುಗಳನ್ನು ಕಾರ್ಯಗತ ಗೊಳಿಸಬೇಕಾಗಿತ್ತು. ಆದರೆ, ಈ ಕಾಮಗಾರಿಗಳನ್ನು ಇಲಾಖಾ ವತಿಯಿಂದ ಕಾರ್ಯಗತಗೊಳಿಸಲಾಯಿತು ಮತ್ತು ವಿಜೆಎನ್ಎಲ್ ಹೆಚ್ಚುವರಿ ವೆಚ್ಚವನ್ನು ಭರಿಸುವಂತಾಯಿತು.

ಮೇಲಿನ ಹೆಚ್ಚುವರಿ ಕಾಮಗಾರಿಗಳ ಅಂದಾಜುಗಳನ್ನು ಅನುಮೋದಿಸುವಾಗ, ವಿಜೆಎನ್ಎಲ್ ವ್ಯವಸ್ಥಾಪಕ ನಿರ್ದೇಶಕರು, ಈ ಕಾಮಗಾರಿಗಳು ಹಂತ–1ರ ಪ್ಯಾಕೇಜ್–2 ಮತ್ತು 3ರ ಭಾಗವಾಗಿದ್ದು ಅವುಗಳನ್ನು ಕಾರ್ಯಗತಗೊಳಿಸಲು ಒಪ್ಪದ ಗುತ್ತಿಗೆದಾರರ ವಿರುದ್ಧ ಒಪ್ಪಂದದ ಟೆಂಡರ್ ಷರತ್ತು ಪ್ರಕಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದರು.

ಆದರೆ, ಕಾಮಗಾರಿಯನ್ನು ಇಲಾಖಾವತಿಯಿಂದ ಕೈಗೆತ್ತಿಕೊಂಡಿದ್ದರೂ ಗುತ್ತಿಗೆದಾರನಿಂದ ವೆಚ್ಚವನ್ನು ವಸೂಲಿ ಮಾಡಲು ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು ಮೇಲಿನ ಕಾಮಗಾರಿಗಳನ್ನು ಮೂಲ ಗುತ್ತಿಗೆದಾರರ ಅಪಾಯ ಮತ್ತು ವೆಚ್ಚದಡಿಯಲ್ಲಿ ಇತರ ಏಜೆನ್ಸಿಗಳ ಮೂಲಕ ಕೈಗೊಳ್ಳಲಾಗಿದೆ ಎಂದು ತಿಳಿಸಿತು (ಮಾರ್ಚ್ 2024). ಅಪಾಯ ಮತ್ತು ವೆಚ್ಚದ ಷರತ್ತು ಅಡಿಯಲ್ಲಿ ಮೂಲ ಗುತ್ತಿಗೆದಾರರಿಂದ ವಸೂಲಿ ಮಾಡಿದ ವಿವರಗಳನ್ನು ನಿರೀಕ್ಷಿಸಲಾಗಿದೆ (ಮಾರ್ಚ್ 2024).

3.2.2.4 ಬೆಲೆ ಹೊಂದಾಣಿಕೆ ಷರತ್ತಿನ ತಪ್ಪಾದ ಅನ್ವಯ

ಗುತ್ತಿಗೆ ಒಪ್ಪಂದಗಳು ಮಜೂರಿ, ವಸ್ತುಗಳು, ಇಂಧನ ಮತ್ತು ಲೂಬ್ರಿಕೆಂಟ್‌ಗಳ ಬೆಲೆಗಳಲ್ಲಿ ಹೆಚ್ಚಳ ಅಥವಾ ಇಳಿಕೆಯನ್ನು ಸರಿಹೊಂದಿಸಲು ಬೆಲೆ ಹೊಂದಾಣಿಕೆ ಷರತ್ತನ್ನು ಒಳಗೊಂಡಿತ್ತು ಎಂಬುದನ್ನು ವಿಭಾಗಗಳ ದಾಖಲೆಗಳ ಪರಿಶೀಲನೆಯು ತಿಳಿಯಪಡಿಸಿತು. ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಕಾಲಕಾಲಕ್ಕೆ ಹೊರಡಿಸಿದ ಮೇಲಿನ ಘಟಕಗಳ ಸಗಟು ಬೆಲೆ ಸೂಚ್ಯಂಕದಲ್ಲಿನ ಹೆಚ್ಚಳ/ಇಳಿಕೆಯ ಆಧಾರದ ಮೇಲೆ ಬೆಲೆ ಹೊಂದಾಣಿಕೆಯನ್ನು ಲೆಕ್ಕಹಾಕಬೇಕಾಗಿತ್ತು. ಸರ್ಕಾರದ ಸೂಚನೆಗಳ ಪ್ರಕಾರ (ಫೆಬ್ರವರಿ 2016), ಮೊದಲ ಕಾಮಗಾರಿಯನ್ನು ಪ್ರಾರಂಭಿಸಿದ ತ್ರೈಮಾಸಿಕದ ಸರಾಸರಿ ಬೆಲೆ ಸೂಚ್ಯಂಕವನ್ನು ಲೆಕ್ಕಹಾಕಲು ಅಳವಡಿಸಿಕೊಳ್ಳಬೇಕಾದ ತಿಂಗಳುಗಳು ಮೊದಲ ಬಾರಿಗೆ ಕಾಮಗಾರಿಯನ್ನು ಪ್ರಾರಂಭಿಸಿದ ಕ್ಯಾಲೆಂಡರ್ ತಿಂಗಳು ಸೇರಿದಂತೆ ಸತತ ಮೂರು ಕ್ಯಾಲೆಂಡರ್ ತಿಂಗಳುಗಳಾಗಿದ್ದವು.

ಕಾಮಗಾರಿಯು ಪೂರ್ಣಗೊಂಡ ತ್ರೈಮಾಸಿಕವನ್ನು ಲೆಕ್ಕಹಾಕಲು, ವಾಸ್ತವವಾಗಿ ಕಾಮಗಾರಿ ಪ್ರಾರಂಭವಾದ ತಿಂಗಳು ಮತ್ತು ನಂತರದ ಎರಡು ತಿಂಗಳುಗಳ ಬದಲಿಗೆ, ಮಧುಗಿರಿ ವಿಭಾಗವು ಕಾಮಗಾರಿಯ ಆದೇಶದ ತಿಂಗಳು ಮತ್ತು ನಂತರದ ಎರಡು ತಿಂಗಳುಗಳ ಪ್ರಸ್ತುತ ಸೂಚ್ಯಂಕಗಳನ್ನು ತಪ್ಪಾಗಿ ಅಳವಡಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಬೆಲೆ ಹೊಂದಾಣಿಕೆಯ ಲೆಕ್ಕಾಚಾರಕ್ಕಾಗಿ ತಪ್ಪಾದ ಸೂಚ್ಯಂಕಗಳನ್ನು ಅಳವಡಿಸಿಕೊಂಡಿದ್ದು, **ಕೋಷ್ಟಕ–3.6**ರಲ್ಲಿ ವಿವರಿಸಿದಂತೆ ಎರಡು ಪ್ಯಾಕೇಜ್‌ಗಳಲ್ಲಿ ₹27.73 ಕೋಟಿ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು.

ಕೋಷ್ಟಕ–3.6: ಬೆಲೆ ಹೊಂದಾಣಿಕೆಯ ಲೆಕ್ಕಾಚಾರಕ್ಕಾಗಿ ಕಾಮಗಾರಿ ಕೈಗೊಂಡ ತಿಂಗಳುಗಳನ್ನು ತಪ್ಪಾಗಿ ಅಳವಡಿಸಿಕೊಂಡಿರುವ ವಿವರಗಳು

(₹ ಕೋಟಿಗಳಲ್ಲಿ)

ಕಾಮಗಾರಿಯ ಹೆಸರು	ಕಾಮಗಾರಿ ಆದೇಶದ ತಿಂಗಳನ್ನು ಅಳವಡಿಸಿಕೊಳ್ಳುವ ಮೊದಲ ತ್ರೈಮಾಸಿಕಕ್ಕೆ ಪರಿಗಣಿಸಲಾದ ತಿಂಗಳುಗಳು	ವಾಸ್ತವಿಕ ಕಾರ್ಯಗತಗೊಳಿಸುವಿಕೆಯ ಪ್ರಕಾರ ಮೊದಲ ತ್ರೈಮಾಸಿಕಕ್ಕೆ ಪರಿಗಣಿಸಬೇಕಾದ ತಿಂಗಳುಗಳು	ಪಾವತಿಸಿದ ಬೆಲೆ ವ್ಯತ್ಯಾಸ	ಪಾವತಿಸಬೇಕಾದ ಬೆಲೆ ವ್ಯತ್ಯಾಸ	ಹೆಚ್ಚುವರಿ ಪಾವತಿ
ಮಧುಗಿರಿ ಗುರುತ್ವಾಕರ್ಷಣ ಫೀಡರ್ ಕಾಲುವೆ	ಸೆಪ್ಟಂಬರ್ 19, ಅಕ್ಟೋಬರ್ 19 ಮತ್ತು ನವೆಂಬರ್ 19	ಜನವರಿ 20, ಫೆಬ್ರವರಿ 20 ಮತ್ತು ಮಾರ್ಚ್ 20	19.54	13.54	6.00
ಗೌರಿಬಿದನೂರು ಗುರುತ್ವಾಕರ್ಷಣ ಫೀಡರ್ ಕಾಲುವೆ	ಅಕ್ಟೋಬರ್ 19, ನವೆಂಬರ್ 19 ಮತ್ತು ಡಿಸೆಂಬರ್ 19	ಡಿಸೆಂಬರ್ 19, ಜನವರಿ 20 ಮತ್ತು ಫೆಬ್ರವರಿ 20	45.46	23.73	21.73
ಒಟ್ಟು			**65.00**	**37.27**	**27.73**

ಆಧಾರ: ಅಳತೆ ಪುಸ್ತಕಗಳು ಮತ್ತು ಆರ್‌ಎ ಬಿಲ್ಲುಗಳು

ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು (ಮಾರ್ಚ್ 2024) ಮತ್ತು ನಿಗದಿತ ವಿಧಾನದ ಪ್ರಕಾರ ಬೆಲೆ ಹೊಂದಾಣಿಕೆಯನ್ನು ಮರು ಲೆಕ್ಕಾಚಾರ ಮಾಡಲು ವಿಭಾಗಕ್ಕೆ ಸೂಚಿಸಲಾಗಿದೆ ಎಂದು ತಿಳಿಸಿತು. ಚಾಲ್ತಿಯಲ್ಲಿರುವ ಇತ್ತೀಚಿನ ಆರ್‌ಎ ಬಿಲ್‌ಗಳ ಆಧಾರದ ಮೇಲೆ ನಡೆಸಿದ ಮರು ಲೆಕ್ಕಾಚಾರದ ಪ್ರಕಾರ, ಮಧುಗಿರಿ ಗುರುತ್ವಾಕರ್ಷಣ ಫೀಡರ್ ಕಾಲುವೆ ಕಾಮಗಾರಿಗೆ ಸಂಬಂಧಿಸಿದಂತೆ ವಿಭಾಗವು ಗುತ್ತಿಗೆದಾರನಿಗೆ ₹2.58 ಕೋಟಿ ಪಾವತಿಸಬೇಕಾಗಿತ್ತು. ಗೌರಿಬಿದನೂರು ಗುರುತ್ವಾಕರ್ಷಣ ಫೀಡರ್ ಕಾಲುವೆ ಕಾಮಗಾರಿಗೆ ಸಂಬಂಧಿಸಿದಂತೆ ವಿಭಾಗವು ಗುತ್ತಿಗೆದಾರನಿಂದ ₹21.73 ಕೋಟಿಗಳನ್ನು ವಸೂಲಿ ಮಾಡಬೇಕಿದೆ.

ಆದರೆ, ಈ ನಿಟ್ಟಿನಲ್ಲಿ ಮಾಡಿದ ಹೊಂದಾಣಿಕೆಗಳು ಮತ್ತು ವಸೂಲಿಯ ವಿವರಗಳನ್ನು ವಿಜೆಎನ್‌ಎಲ್ ಸಲ್ಲಿಸಿರಲಿಲ್ಲ. (ಮಾರ್ಚ್ 2024)

3.2.2.5 ಎಂಎಸ್ ಪೈಪ್‌ಗಳ ದರ ಪರಿವರ್ತನೆಯಲ್ಲಿ ಲೈನಿಂಗ್ ದಪ್ಪವನ್ನು ಸೇರಿಸಿದ್ದರಿಂದ ಅಧಿಕ ವೆಚ್ಚ

ಎಂಎಸ್ ಪೈಪ್ ರೇಸಿಂಗ್ ಮೇನ್ ಉತ್ಪಾದನೆ, ಸರಬರಾಜು ಮತ್ತು ಅಳವಡಿಸುವ ಅಂದಾಜುಗಳಲ್ಲಿ ಕಾಂಕ್ರೀಟ್‌ನಿಂದ ಒಳ ಮತ್ತು ಹೊರ ಲೈನಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಮೇಲಿನ ಪೈಪ್‌ಗಳಿಗೆ ಅಂತಿಮ ದರವನ್ನು ಲೆಕ್ಕಹಾಕುವಾಗ, ದರವನ್ನು ಪ್ರತಿ ಟನ್‌ನಿಂದ ಪ್ರತಿ ರನ್ನಿಂಗ್ ಮೀಟರ್‌ಗೆ ಪರಿವರ್ತಿಸುವಾಗ ಒಳ ಮತ್ತು ಹೊರಗಿನ ಲೈನಿಂಗ್‌ಗಳ ದಪ್ಪವನ್ನು ಪೈಪ್‌ನ ವ್ಯಾಸಕ್ಕೆ ಸೇರಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ದರ ವಿಶ್ಲೇಷಣೆಯಲ್ಲಿ ಕಾಂಕ್ರೀಟ್ ಲೈನಿಂಗ್ (ಒಳ ಮತ್ತು ಹೊರ) ಬೆಲೆಯನ್ನು ಈಗಾಗಲೇ ಸೇರಿಸಲಾಗಿರುವುದರಿಂದ, ಲೆಕ್ಕಾಚಾರದಲ್ಲಿ ಕಾಂಕ್ರೀಟ್ ಲೈನಿಂಗ್ ವಸ್ತುಗಳ ದಪ್ಪವನ್ನು ಮತ್ತೆ ಸೇರಿಸುವುದು ತಪ್ಪಾಗಿದ್ದಿತು. ಇದು ₹21.02 ಕೋಟಿ ಹೆಚ್ಚುವರಿ ವೆಚ್ಚದಲ್ಲಿ ಪರಿಣಮಿಸಿತು (**ಅನುಬಂಧ–3ರಲ್ಲಿ** ವಿವರಿಸಿದಂತೆ).

ದರವನ್ನು ಪ್ರತಿ ಟನ್‌ನಿಂದ ಪ್ರತಿ ರನ್ನಿಂಗ್ ಮೀಟರ್‌ಗೆ ಪರಿವರ್ತಿಸಲು ಅಳವಡಿಸಿಕೊಳ್ಳಬೇಕಾದ ವ್ಯಾಸವು 15 ಎಂಎಂ ದಪ್ಪ ಸಿಮೆಂಟ್ ಗಾರೆ ಲೈನಿಂಗ್ ಅನ್ನು ಒಳಗೊಂಡಿತ್ತು ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024).

ದರಪಟ್ಟಿಯಲ್ಲಿನ ಘಟಕಗಳ ದರ ವಿಶ್ಲೇಷಣೆಯಲ್ಲಿ ಒದಗಿಸಲಾದ ಲೆಕ್ಕಾಚಾರವು ದರ ಪರಿವರ್ತನೆಗೆ ಪೈಪ್‌ನ ಸ್ಪಷ್ಟ ವ್ಯಾಸವನ್ನು ಮಾತ್ರ ಪರಿಗಣಿಸಬೇಕು ಎಂದು ನಿಗದಿಪಡಿಸಿದ್ದರಿಂದ ಉತ್ತರವು ವಾಸ್ತವಿಕವಾಗಿ ತಪ್ಪಾಗಿದೆ, ಏಕೆಂದರೆ ಕಾಂಕ್ರೀಟ್ ಲೈನಿಂಗ್‌ನ ಘಟಕವನ್ನು ಈಗಾಗಲೇ ಪೂರ್ಣಗೊಂಡ ಕಾಮಗಾರಿಯ ಘಟಕದ ದರದಲ್ಲಿ ಸೇರಿಸಲಾಗಿತ್ತು.

3.2.2.6 ಗುತ್ತಿಗೆದಾರರಿಗೆ ಅಕ್ರಮ ಪಾವತಿಗಳ ಬಿಡುಗಡೆ

ಕೆಳಗಿನ **ಕೋಷ್ಟಕ-3.7**ರಲ್ಲಿ ವಿವರಿಸಿದಂತೆ ಪರೀಕ್ಷಾ-ತನಿಖೆ ನಡೆಸಿದ ಪ್ರಕರಣಗಳಲ್ಲಿ ಗುತ್ತಿಗೆ ಷರತ್ತುಗಳು/ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಯೋಜನೆಯಡಿಯಲ್ಲಿ ಗುತ್ತಿಗೆದಾರರಿಗೆ ಅನಗತ್ಯ ಹಣಕಾಸಿನ ಅನುಕೂಲಗಳನ್ನು ನೀಡಲಾಗಿತ್ತೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೋಷ್ಟಕ 3.7: ಗುತ್ತಿಗೆದಾರರಿಗೆ ಮಾಡಿದ ಅಕ್ರಮ ಪಾವತಿಗಳ ವಿವರಗಳು

ಕ್ರಮ ಸಂಖ್ಯೆ	ಗುತ್ತಿಗೆ ನಿಯಮಗಳು/ಸರ್ಕಾರಿ ಸೂಚನೆಗಳ ಉಲ್ಲಂಘನೆ	ಉಲ್ಲಂಘನೆಗಳ ಆರ್ಥಿಕ ಪರಿಣಾಮ	ಸರ್ಕಾರದ ಪ್ರತಿಕ್ರಿಯೆ/ಲೆಕ್ಕಪರಿಶೋಧನಾ ಅವಲೋಕನ
1	ಗುತ್ತಿಗೆ ಷರತ್ತು 40ರ ಪ್ರಕಾರ, ಉದ್ಯೋಗದಾತನು ಗುತ್ತಿಗೆದಾರರಿಗೆ ಮಾಡಲಾದ ಆವರ್ತಕ ಪಾವತಿಗಳಲ್ಲಿ ಒಂದು ಭಾಗವನ್ನು (ಕಾರ್ಯಗತಗೊಳಿಸಿದ ಸಿವಿಲ್ ಕಾಮಗಾರಿಗಳ ಶೇಕಡಾ ಐದರಷ್ಟು) ಕಾಮಗಾರಿ ಪೂರ್ಣಗೊಳ್ಳುವವರೆಗೆ ಧಾರಣ ಹಣವಾಗಿ ಉಳಿಸಿಕೊಳ್ಳಬೇಕು. ಕಾಮಗಾರಿ ಪೂರ್ಣಗೊಂಡ ನಂತರ, ಗುತ್ತಿಗೆದಾರರು ಧಾರಣ ಹಣವನ್ನು ಬ್ಯಾಂಕ್ ಖಾತರಿಯಾಗಿ ಬದಲಾಯಿಸಬಹುದು, ಇದು 60 ತಿಂಗಳ ಕಾರ್ಯಾಚರಣೆ ಮತ್ತು ನಿರ್ವಹಣಾ ಅವಧಿಯ ಅಂತ್ಯದವರೆಗೆ ಮಾನ್ಯವಾಗಿರುತ್ತದೆ.	ಪ್ಯಾಕೇಜ್ 2ರಡಿಯಲ್ಲಿ (ಹಂತ I), ಗುತ್ತಿಗೆದಾರರ ಕೋರಿಕೆಯ ಮೇರೆಗೆ (ಮೇ 2019), ಕಾಮಗಾರಿಯು ಪೂರ್ಣಗೊಂಡಿಲ್ಲದಿದ್ದರೂ ಮತ್ತು ಗುತ್ತಿಗೆಯ ಪ್ರಕಾರ ಕಾರ್ಯಾಚರಣೆ ಮತ್ತು ನಿರ್ವಹಣೆ ಇನ್ನೂ ಪ್ರಾರಂಭವಾಗಿಲ್ಲದಿದ್ದರೂ ಸಹ ವಿಜೆಎನ್ಎಲ್ (ನವೆಂಬರ್ 2019) ಬ್ಯಾಂಕ್ ಖಾತರಿಗೆ ಪ್ರತಿಯಾಗಿ ₹35.36 ಕೋಟಿ ಧಾರಣ ಹಣವನ್ನು ಬಿಡುಗಡೆ ಮಾಡಿತು. ಬ್ಯಾಂಕ್ ಖಾತರಿಯನ್ನು ಸಹ ಜೂನ್ 2020ರಲ್ಲಿ ಗುತ್ತಿಗೆದಾರರಿಗೆ ಹಿಂತಿರುಗಿಸಲಾಯಿತು. ಇದು ಗುತ್ತಿಗೆದಾರರಿಗೆ ಅನಗತ್ಯ ಆರ್ಥಿಕ ಅನುಕೂಲದಲ್ಲಿ ಪರಿಣಮಿಸಿತು ಮತ್ತು ಗುತ್ತಿಗೆದಾರರ ಅಸಾಮರ್ಥ್ಯತೆ/ಅನುಸರಣೆ ಮಾಡದಿರುವುದರಿಂದ ಉಂಟಾಗುವ ಯಾವುದೇ ಭವಿಷ್ಯದ ಹಣಕಾಸಿನ ಅಪಾಯಗಳಿಗೆ ಸಾಕಷ್ಟು ಭದ್ರತೆಯ ಲಭ್ಯತೆ ಇರಲಿಲ್ಲ.	ಶೇಕಡಾ 99ರಷ್ಟು ಕಾಮಗಾರಿ ಪೂರ್ಣಗೊಂಡಿದ್ದರಿಂದ, ತಾಂತ್ರಿಕ ಉಪಸಮಿತಿಯ ನಿರ್ದೇಶನಗಳ ಪ್ರಕಾರ, ₹66.41 ಕೋಟಿ ಧಾರಣ ಮೊತ್ತದಲ್ಲಿ ₹35.36 ಕೋಟಿಯ ಒಂದು ಭಾಗವನ್ನು ಬಿಡುಗಡೆ ಮಾಡಲು ನಿರ್ಧರಿಸಲಾಯಿತು ಮತ್ತು ಬ್ಯಾಂಕ್ ಖಾತರಿಯನ್ನು ಪಡೆದ ನಂತರ ಮೊತ್ತವನ್ನು ಬಿಡುಗಡೆ ಮಾಡಲಾಯಿತು ಎಂದು ಸರ್ಕಾರವು ಉತ್ತರಿಸಿತು (ಮಾರ್ಚ್ 2024). ನಂತರ, ಮೇ 2020ರಲ್ಲಿ, ಕೋವಿಡ್ ಸಂದರ್ಭಗಳಲ್ಲಿ "ಫೋರ್ಸ್ ಮಜೂರ್ ಕ್ಲಾಸ್" (ಎಫ್ಎಂಸಿ) ಅನ್ವಯಿಸುವ ಸಂಬಂಧ 19 ಫೆಬ್ರವರಿ 2020ರ ಭಾರತ ಸರ್ಕಾರದ ಅಧಿಸೂಚನೆಯನ್ನು ಉಲ್ಲೇಖಿಸಿ ಗುತ್ತಿಗೆದಾರರ ಕೋರಿಕೆಯ ಆಧಾರದ ಮೇಲೆ, ವಿಜೆಎನ್ಎಲ್ ₹35.36 ಕೋಟಿ (ಬಿಜಿಯನ್ನು) ಬಿಡುಗಡೆ ಮಾಡಲು ಪರಿಗಣಿಸಿತು. ಫೋರ್ಸ್ ಮಜೂರ್ ಸಂದರ್ಭದಲ್ಲಿ ಎರಡೂ ಕಡೆಯಿಂದ ಯಾವುದೇ ಆರ್ಥಿಕ ಪರಿಣಾಮಗಳಿಲ್ಲದ ಒಪ್ಪಂದವನ್ನು ಮುಕ್ತಾಯಗೊಳಿಸಲು ಅವಕಾಶ ನೀಡುವ ಈ ಪ್ರಕರಣದಲ್ಲಿ ಭಾರತ ಸರ್ಕಾರದ ಅಧಿಸೂಚನೆ ಅನ್ವಯಿಸುವುದಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ಹೊರಡಿಸಿದ ನಂತರದ ಆದೇಶಗಳು (ಜುಲೈ 2020) ಕಾರ್ಯಕ್ಷಮತೆ ಭದ್ರತೆಯನ್ನು[32] ಬಿಡುಗಡೆ ಮಾಡಲು ಮಾತ್ರ ಅವಕಾಶ ಒದಗಿಸಲಾಗಿತ್ತೇ ಹೊರತು ಗುತ್ತಿಗೆದಾರರಿಂದ ಕಡಿತಗೊಳಿಸಲಾದ ಧಾರಣ ಹಣವನ್ನಲ್ಲ.
2	ಗುತ್ತಿಗೆ ಸಾಮಾನ್ಯ ಷರತ್ತುಗಳ (ಜಿಸಿಸಿ) ಷರತ್ತು 26ರ ಪ್ರಕಾರ, ಗುತ್ತಿಗೆದಾರರು ದಿವಾಳಿಯಾದಲ್ಲಿ ಅಥವಾ ದಿವಾಳಿ ಎಂದು ತೀರ್ಮಾನಿಸಲು ಯಾವುದೇ ಪ್ರಕ್ರಿಯೆಗಳು ಪ್ರಾರಂಭವಾದರೆ, ಕಾರ್ಯನಿರ್ವಾಹಕ ಅಭ್ಯಂತರರು ಅಥವಾ ಇತರ ಸಕ್ಷಮ ಪ್ರಾಧಿಕಾರವು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಗುತ್ತಿಗೆಯನ್ನು ರದ್ದುಗೊಳಿಸಬಹುದು. ಇದಲ್ಲದೆ, ಗುತ್ತಿಗೆಯಡಿಯಲ್ಲಿ ನಿರ್ವಹಿಸಲಾದ ಯಾವುದೇ ಕಾಮಗಾರಿಗೆ ಗುತ್ತಿಗೆದಾರರು ಮರುಪಡೆಯಲು ಅಥವಾ ಪಾವತಿಸಲು ಅರ್ಹರಾಗಿರುವುದಿಲ್ಲ.	ಹಂತ-Iರಲ್ಲಿನ ಐದು ಪ್ಯಾಕೇಜ್‌ಗಳಲ್ಲಿ, ಮೂರು ಪ್ಯಾಕೇಜ್‌ಗಳನ್ನು (2,3 ಮತ್ತು 5) ಜಂಟಿ ಉದ್ಯಮ (ಜೆವಿ) ಕಂಪನಿಗೆ ವಹಿಸಲಾಯಿತು (ಮಾರ್ಚ್ 2014), ಇದರಲ್ಲಿ ಮೆ.ಐವಿಆರ್‌ಸಿಎಲ್ ಜಂಟಿ ಉದ್ಯಮದಲ್ಲಿ ಪ್ರಮುಖ ಪಾಲುದಾರ ಅಥವಾ ಇತರ ಪಾಲುದಾರನಾಗಿತ್ತು. ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೆ.ಐವಿಆರ್‌ಸಿಎಲ್ ವಿರುದ್ಧ ದಿವಾಳಿತನ ಮತ್ತು ದಿವಾಳಿತನ ಸಂಹಿತೆ (ಐಬಿಸಿ) 2016ರ ಅಡಿಯಲ್ಲಿ, ಹೈದರಾಬಾದ್‌ನ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಮುಂದೆ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು	ವಿಜೆನ್ನಿಯ ಕೋರಿಕೆಯ ಮೇರೆಗೆ ಮತ್ತು ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ವಿಜೆಎನ್ಎಲ್‌ನ ಹಿತಾಸಕ್ತಿಯಿಂದ, ಕೋವಿಡ್ ಸಡಿಲಿಕೆಯನ್ನು ಗಮನದಲ್ಲಿಟ್ಟುಕೊಂಡು ಗುತ್ತಿಗೆದಾರರಿಗೆ ₹64.60 ಕೋಟಿ ಹೆಚ್ಚುವರಿ ಭದ್ರತಾ ಠೇವಣಿ (ಎಫ್‌ಎಸ್‌ಡಿ) ಮೊತ್ತವನ್ನು ಬಿಡುಗಡೆ ಮಾಡಲಾಯಿತು ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಇದಲ್ಲದೆ, ಬಾಕಿ ಇರುವ ಆರ್‌ಎ ಬಿಲ್ ಮೊತ್ತ ₹27.72 ಕೋಟಿಯನ್ನು ಜೆವಿ ಪಾಲುದಾರ (ಮೆಸ್.ಎಂಇಐಎಲ್) ಅವರಿಂದ ಬದಲಾಯಿಸಲಾಗದ ಪರಿಹಾರ ಬಾಂಡ್ ಪಡೆದ ನಂತರ ಅವರಿಗೆ ಬಿಡುಗಡೆ ಮಾಡಲಾಗಿದೆ ಎಂದೂ ತಿಳಿಸಲಾಯಿತು. ಗುತ್ತಿಗೆದಾರರಿಗೆ ಎಫ್‌ಎಸ್‌ಡಿ ಮೊತ್ತವನ್ನು ಬಿಡುಗಡೆ ಮಾಡುವ ಮತ್ತು ಆರ್‌ಎ ಬಿಲ್ ಬಿಡುಗಡೆ ಮಾಡಬಾರದು

[32] ಮುಂಗಡ ಹಣ ಠೇವಣಿ, ಕಾರ್ಯಕ್ಷಮತಾ ಭದ್ರತೆ ಮತ್ತು ಹೆಚ್ಚುವರಿ ಕಾರ್ಯಕ್ಷಮತಾ ಭದ್ರತೆ

ಕ್ರಮ ಸಂಖ್ಯೆ	ಗುತ್ತಿಗೆ ನಿಯಮಗಳು/ಸರ್ಕಾರಿ ಸೂಚನೆಗಳ ಉಲ್ಲಂಘನೆ	ಉಲ್ಲಂಘನೆಗಳ ಆರ್ಥಿಕ ಪರಿಣಾಮ	ಸರ್ಕಾರದ ಪ್ರತಿಕ್ರಿಯೆ/ಲೆಕ್ಕಪರಿಶೋಧನಾ ಅವಲೋಕನ
		ಪ್ರಾರಂಭಿಸಲು ಪ್ರಕರಣವನ್ನು ಹೂಡಿತು. ಎನ್‌ಸಿಎಲ್‌ಟಿ ಹೊರಡಿಸಿದ ಮಧ್ಯಂತರ ಆದೇಶದ ಕಂಡಿಕೆ 20, ಸಾಲಗಾರನು ತನ್ನ ಯಾವುದೇ ಸ್ವತ್ತುಗಳನ್ನು ಅಥವಾ ಯಾವುದೇ ಕಾನೂನುಬದ್ಧ ಹಕ್ಕು ಅಥವಾ ಪ್ರಯೋಜನಕಾರಿ ಆಸಕ್ತಿಯನ್ನು ವರ್ಗಾಯಿಸುವುದು, ಹೊರೆ ಹಾಕುವುದು, ದೂರವಿಡುವುದು ಅಥವಾ ವಿಲೇವಾರಿ ಮಾಡುವುದರ ಮೇಲೆ ನಿಷೇಧವನ್ನು ಘೋಷಿಸಿತು. ಆದರೆ, ವಿಜೆಎನ್‌ಎಲ್ ಪ್ಯಾಕೇಜ್ 2, 3 ಮತ್ತು 5ರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಭದ್ರತೆಯಾಗಿ ಪಡೆದಿದ್ದ ₹64.60 ಕೋಟಿ ಮೊತ್ತದ ಬ್ಯಾಂಕ್ ಖಾತರಿಗಳನ್ನು ಅಕ್ಟೋಬರ್ 2020ರಿಂದ ಏಪ್ರಿಲ್ 2021ರ ನಡುವೆ ಮೆಸರ್ಸ್ ಐವಿಆರ್‌ಸಿಎಲ್‌ಗೆ ಬಿಡುಗಡೆ ಮಾಡಿತು. ಐವಿಆರ್‌ಸಿಎಲ್‌ನೊಂದಿಗೆ ಜೆವಿ ಪಾಲುದಾರರಾಗಿದ್ದ ಮೆಸರ್ಸ್ ಎಂಇಐಎಲ್‌ಗೆ[33] ₹27.72 ಕೋಟಿ ಆರ್‌ಎ ಬಿಲ್[34] ಮೊತ್ತದ ಮತ್ತೊಂದು ಪಾವತಿಯನ್ನು ವಿಜೆಎನ್‌ಎಲ್ ಮಾಡಿತು (ಏಪ್ರಿಲ್ 2023). ಇದು ಜಿಸಿಸಿಯ ಷರತ್ತು 26 ಮತ್ತು ಎನ್‌ಸಿಎಲ್‌ಟಿ ಘೋಷಿಸಿದ ನಿಷೇಧವನ್ನು ಪಾಲಿಸದಿರುವಲ್ಲಿ ಮತ್ತು ಗುತ್ತಿಗೆದಾರರಿಗೆ ₹92.32 ಕೋಟಿ[35] ಕ್ರಮಭದ್ದವಲ್ಲದ ಪಾವತಿಯಲ್ಲಿ ಪರಿಣಮಿಸಿತು.	ಎಂಬ ಇತರ ಜೆವಿ ಪಾಲುದಾರರ ಕೋರಿಕೆಯ ಹೊರತಾಗಿಯೂ ಜೆವಿ ಪಾಲುದಾರರಲ್ಲಿ ಒಬ್ಬರಿಗೆ ಆರ್‌ಎ ಬಿಲ್ ಪಾವತಿಸಿದ ವಿಜೆಎನ್‌ಎಲ್ ಕ್ರಮವು ಕ್ರಮಭದ್ದವಾಗಿರಲ್ಲಿಲ ಮತ್ತು ಎನ್‌ಸಿಎಲ್‌ಟಿ ಘೋಷಿಸಿದ ನಿಷೇಧವನ್ನು ಉಲ್ಲಂಘಿಸಿತ್ತು ಮತ್ತು ಜಿಸಿಸಿಯ ಷರತ್ತು 26ಕ್ಕೆ ವಿರುದ್ಧವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.
3	ಒಪ್ಪಂದದ ಹೆಚ್ಚುವರಿ ಷರತ್ತುಗಳ ಷರತ್ತು 19.3ರ ಪ್ರಕಾರ, ಪೈಪ್‌ಗಳನ್ನು ಖರೀದಿಸಿ ಕಾಮಗಾರಿಯ ಸ್ಥಳಕ್ಕೆ ಸಾಗಿಸಿದಾಗ ಎಂಎಸ್ ಪೈಪ್‌ಗಳ ಪೂರೈಕೆ, ಜೋಡಣೆ, ಪರೀಕ್ಷೆ ಮತ್ತು ಅಳವಡಿಕೆಗಾಗಿ ಶೇಕಡಾ 70ರಷ್ಟು ಪಾವತಿಯನ್ನು ಮಾಡಬಹುದು. ಆದರೆ, ಹಿಂದಿನ ಸರಕುಗಳಲ್ಲಿ ಸರಬರಾಜು ಮಾಡಲಾದ ಪೈಪ್‌ಗಳಲ್ಲಿ ಕನಿಷ್ಠ ಶೇಕಡಾ 50ರಷ್ಟನ್ನು ಅಳವಡಿಸಲಾಗಿದೆ, ಜೋಡಿಸಲಾಗಿದೆ ಮತ್ತು ಅಭ್ಯಂತರರ ತೃಪ್ತಿಗೆ ಪರೀಕ್ಷಿಸಲಾಗಿದೆ ಎಂದು ಖಚಿತಪಡಿಸಿಕೊಂಡ ನಂತರವೇ ಪೈಪ್‌ಗಳ ಮೂರನೇ ಮತ್ತು ನಂತರದ ಸರಕುಗಳಿಗೆ ಪಾವತಿ ಮಾಡಬೇಕು. ಹೆಚ್ಚುವರಿ/ಅಧಿಕ ಪಾವತಿಗಳು ಪತ್ತೆಯಾದ ತಕ್ಷಣ ಮುಂದಿನ ಚಾಲ್ತಿಯಲ್ಲಿರುವ ಖಾತೆ ಬಿಲ್‌ನಲ್ಲಿ ಅಥವಾ ಗುತ್ತಿಗೆದಾರರ ಭದ್ರತಾ ಠೇವಣಿಯಿಂದ ಶೇಕಡಾ ಆರರ ಬಡ್ಡಿಯೊಂದಿಗೆ ವಸೂಲು ಮಾಡಬೇಕು ಎಂದು ಗುತ್ತಿಗೆ ಸಾಮಾನ್ಯ ಷರತ್ತುಗಳ (ಜಿಸಿಸಿ) ಷರತ್ತು 2 (ಇ) ನಿಗದಿಪಡಿಸುತ್ತದೆ.	ಹಿಂದಿನ ಸಾಗಣೆಗಳಲ್ಲಿ ಮಾಡಿದ ಪೂರೈಕೆಗಳಲ್ಲಿ ಶೇಕಡಾ 50ರಷ್ಟು ಪೈಪ್‌ಗಳನ್ನು ಜೋಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳದೆ ಮೂರನೇ ಮತ್ತು ನಂತರದ ಸಾಗಣೆಯ ಪೈಪ್‌ಗಳ ಪೂರೈಕೆಗೆ ಪಾವತಿಗಳನ್ನು ಮಾಡಲಾಗಿತ್ತು. ನಿಗದಿತ ಸಮಯಕ್ಕಿಂತ ಮೊದಲೇ ಪಾವತಿ ಮಾಡಿದ್ದು ಅನುಚಿತ ಆರ್ಥಿಕ ಲಾಭದಲ್ಲಿ ಪರಿಣಮಿಸಿತು. ಆದ್ದರಿಂದ ವಿಜೆಎನ್‌ಎಲ್ ಗುತ್ತಿಗೆದಾರರಿಂದ ಶೇಕಡಾ 50ರಷ್ಟು ಪೂರೈಕೆಗಳನ್ನು ಅಳವಡಿಸುವ ದಿನಾಂಕದವರೆಗೆ ಅಂತಹ ಪಾವತಿಗಳಿಗೆ ಶೇಕಡಾ ಆರರಷ್ಟು ಬಡ್ಡಿಯನ್ನು ವಸೂಲಿ ಮಾಡಬೇಕಾಗಿತ್ತು. ಪರೀಕ್ಷಾ-ತನಿಖೆ ನಡೆಸಿದ ಐದು ಪ್ಯಾಕೇಜ್‌ಗಳಲ್ಲಿ ಗುತ್ತಿಗೆದಾರರಿಂದ ವಸೂಲಿ ಮಾಡಬೇಕಾದ ಬಡ್ಡಿಯನ್ನು ₹48.83 ಕೋಟಿ ಎಂದು ಲೆಕ್ಕಪರಿಶೋಧನೆಯು ಲೆಕ್ಕ ಹಾಕಿದೆ (**ಅನುಬಂಧ-4**).	ಕಾಮಗಾರಿ ಸ್ಥಳದಲ್ಲಿ ಪೈಪ್‌ಗಳ ಪೂರೈಕೆ ಮತ್ತು ಅಳವಡಿಸುವುದಕ್ಕಾಗಿ ಭಾರಿ ಹೂಡಿಕೆ ಮಾಡಲಾಗಿತ್ತು ಎಂಬ ಕಾರಣ ನೀಡಿ ಗುತ್ತಿಗೆದಾರರ ಕೋರಿಕೆಯ ಮೇರೆಗೆ ಪೈಪ್‌ಗಳ ಪೂರೈಕೆಗಾಗಿ ಮುಂಚಿತವಾಗಿ ಪಾವತಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಕಾಮಗಾರಿಯ ಹಿತದೃಷ್ಟಿಯಿಂದ ಮತ್ತು ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಕಠಿಣ ಭೂಪ್ರದೇಶ ಮತ್ತು ಭಾರೀ ಮಳೆಯನ್ನು ಪರಿಗಣಿಸಿ ಮೊತ್ತವನ್ನು ಬಿಡುಗಡೆ ಮಾಡಲಾಯಿತು ಎಂದೂ ತಿಳಿಸಲಾಯಿತು. ಟೆಂಡರ್ ಕರೆಯುವ ಸಮಯದಲ್ಲಿ ಗುತ್ತಿಗೆದಾರರಿಗೆ ಗುತ್ತಿಗೆ ನಿಯಮಗಳು ತಿಳಿದಿದ್ದರಿಂದ ಮತ್ತು ಕಾರ್ಯಗತಗೊಳಿಸುವಾಗ ಯಾವುದೇ ಸಡಿಲಿಕೆಯು ಅನುಚಿತ ಲಾಭದ ವಿಸ್ತರಣೆಗೆ ಸಮನಾಗಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಅಲ್ಲದೆ, ಅಂದಾಜುಗಳು ಕಷ್ಟಕರವಾದ ಪ್ರದೇಶಿಕ ಭೂಪ್ರದೇಶದಲ್ಲಿ ಕಾರ್ಯಾಚರಣೆಗೆ ಸರಿದೂಗಿಸುವ ಏರಿಯಾ ವೇಟೇಜ್ ನ ಅವಕಾಶವನ್ನು ಹೊಂದಿದ್ದವು.
4	ಜಿಎಸ್‌ಟಿಯನ್ನು ಪರಿಚಯಿಸುವ ಮೊದಲು, ಕಾಮಗಾರಿಗಳ ಅಂದಾಜುಗಳನ್ನು ಶೇಕಡಾ ನಾಲ್ಕರಷ್ಟು ಮೌಲ್ಯವರ್ಧಿತ ತೆರಿಗೆ (ಸಂಪೂರ್ಣ ಒಪ್ಪಂದದ	ಯೋಜನೆಯಡಿಯಲ್ಲಿ ಕಾಮಗಾರಿ ಬಿಲ್‌ಗಳ ಮೇಲೆ ಜಿಎಸ್‌ಟಿಯನ್ನು ಅಂತಿಮಗೊಳಿಸುವ ಮತ್ತು ಪ್ರಮಾಣೀಕರಿಸುವ ಕೆಲಸಕ್ಕಾಗಿ	ಜಿಎಸ್‌ಟಿ ಅನುಷ್ಠಾನದಿಂದ ಗುತ್ತಿಗೆದಾರರಿಗೆ ಆಗುವ ಆರ್ಥಿಕ ಲಾಭವನ್ನು ಹಣಕಾಸು ಇಲಾಖೆಯು (ಜಿಎಸ್‌ಟಿ ಆಧರಿಸಿ) ಮರು-ರೂಪಿಸಿದ ದರಪಟ್ಟಿಯನ್ನು ಅನುಮೋದಿಸಿದ

[33] ಮೇಘಾ ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ನಿಯಮಿತ

[34] (ಪ್ಯಾಕೇಜ್ 3 ಮತ್ತು 5 ರ ಐದು ಆರ್‌ಎ ಬಿಲ್‌ಗಳು)

[35] ₹64.60 ಕೋಟಿ ಬಿಡುಗಡೆಯಾದ ಬಿಜಿಗಳು ಮತ್ತು ₹27.72 ಕೋಟಿ ಆರ್‌ಎ ಬಿಲ್ ಅನ್ನು ಮೆಸರ್ಸ್ ಮೇಘಾ ಎಂಜಿನಿಯರಿಂಗಿಗೆ ಪಾವತಿಸಲಾಗಿದೆ.

ಕ್ರಮ ಸಂಖ್ಯೆ	ಗುತ್ತಿಗೆ ನಿಯಮಗಳು/ಸರ್ಕಾರಿ ಸೂಚನೆಗಳ ಉಲ್ಲಂಘನೆ	ಉಲ್ಲಂಘನೆಗಳ ಆರ್ಥಿಕ ಪರಿಣಾಮ	ಸರ್ಕಾರದ ಪ್ರತಿಕ್ರಿಯೆ/ಲೆಕ್ಕಪರಿಶೋಧನಾ ಅವಲೋಕನ
	ಬೆಲೆಯ ಮೇಲೆ ಸಂಯೋಜಿತ ತೆರಿಗೆ) ಮತ್ತು ಶೇಕಡಾ 12.50ರಷ್ಟು ಅಬಕಾರಿ ಸುಂಕವನ್ನು ಪರಿಗಣಿಸಿ ಲೆಕ್ಕ ಹಾಕಲಾಗುತ್ತಿತ್ತು. ಕಾಮಗಾರಿ ಗುತ್ತಿಗೆಗೆ ಅನ್ವಯವಾಗುವ ಜಿಎಸ್‌ಟಿ ದರವು ಶೇಕಡಾ 12 ರಷ್ಟಿದ್ದು, ಅದನ್ನು 10 ಜನವರಿ 2022ರಿಂದ ಜಾರಿಗೆ ಬರುವಂತೆ ಶೇಕಡಾ 18ಕ್ಕೆ ಪರಿಷ್ಕರಿಸಲಾಯಿತು. ಆದ್ದರಿಂದ, ಜಿಎಸ್‌ಟಿ ಅನುಷ್ಠಾನದ ಕಾರಣದಿಂದಾಗಿ ಗುತ್ತಿಗೆ ಬೆಲೆಯನ್ನು ಹೊಂದಾಣಿಕೆಗೆ ಒಳಪಡಿಸಿ ಪರೋಕ್ಷ ತೆರಿಗೆಗಳ ದರಗಳಲ್ಲಿನ ಪರಿಷ್ಕರಣೆಯಿಂದ ಉಂಟಾಗುವ ಉಳಿತಾಯದ ಲಾಭವನ್ನು ಗುತ್ತಿಗೆದಾರರು ವಿಜೆಎನ್‌ಎಲ್‌ಗೆ ವರ್ಗಾಯಿಸಬೇಕಾಗಿತ್ತು.	ವಿಜೆಎನ್‌ಎಲ್ (ನವೆಂಬರ್ 2020) ಚಾರ್ಟರ್ಡ್ ಅಕೌಂಟೆಂಟ್‌ಗಳನ್ನು (ಸಿಎ) ನೇಮಿಸಿಕೊಂಡಿದೆ. ಸಿಎಗಳು ಜಿಎಸ್‌ಟಿ ಪರಿಣಾಮವನ್ನು ಲೆಕ್ಕಹಾಕಿ ಹಂತ–IIಕ್ಕೆ ಸಂಬಂಧಿಸಿದ 17 ಕಾಮಗಾರಿಗಳಿಗೆ ಮಾತ್ರ ₹77.38 ಕೋಟಿ ಮೊತ್ತದ ವಸೂಲಾತಿಗೆ ಶಿಫಾರಸು ಮಾಡಿದರು ಆದರೆ ಹಂತ–Iಕ್ಕೆ ಸಂಬಂಧಿಸಿದ ಜಿಎಸ್‌ಟಿ ಪರಿವರ್ತನೆಯ ಪರಿಣಾಮವನ್ನು ಹೊಂದಿದ್ದ ಇನ್ನೂ ಪ್ರಗತಿಯಲ್ಲಿದ್ದ ಐದು ಕಾಮಗಾರಿಗಳನ್ನು ಪರಿಗಣಿಸಿರಲಿಲ್ಲ.	ನಂತರ ಗುತ್ತಿಗೆದಾರರ ಧಾರಣ ಹಣ/ಎಫ್‌ಎಸ್‌ಡಿಯಿಂದ ವಸೂಲಿ ಮಾಡಲಾಗುವುದು ಎಂಬ ಭರವಸೆಯನ್ನು ಸರ್ಕಾರವು ತಿಳಿಸಿತು (ಮಾರ್ಚ್ 2024).

3.3 ಬಳಕೆ ಹಕ್ಕು ಒಪ್ಪಂದದ ಮೂಲಕ ಖಾಸಗಿ ಆಸ್ತಿಯಲ್ಲಿ ಯೋಜನಾ ಕಾಮಗಾರಿಗಳು ಅನುಷ್ಠಾನದಲ್ಲಿನ ನ್ಯೂನತೆಗಳು

ಕಾಡುಮನೆಹೊಳೆಯಿಂದ ನೀರನ್ನು ಬೇರೆಡೆಗೆ ತಿರುಗಿಸಲು ಕಾಡುಮನೆ ಎಸ್ಟೇಟ್ ಕಂಪನಿ (ಕೆಇಸಿ) ಎಂಬ ಖಾಸಗಿ ಕಂಪನಿಯ ಆಸ್ತಿಯಲ್ಲಿ ವೀಯರ್ 4 ಮತ್ತು 5, ಪಂಪ್‌ಹೌಸ್, ವಿದ್ಯುತ್ ಸಬ್ ಸ್ಟೇಷನ್ ಮತ್ತು ರೇಸಿಂಗ್ ಮೇನ್ (ಪೈಪ್ ಲೈನ್) ನಿರ್ಮಾಣದ ಅಗತ್ಯವಿದ್ದಿತು. ಮೇಲಿನ ರಚನೆಗಳ ನಿರ್ಮಾಣಕ್ಕೆ ಅಗತ್ಯವಿರುವ ಒಟ್ಟು ಅಂದಾಜು ಭೂಮಿಯನ್ನು 16.51 ಹೆಕ್ಟೇರ್ ಎಂದು ಅಂದಾಜಿಸಲಾಯಿತು.

ಆದರೆ, ಬಳಕೆ ಹಕ್ಕು ಒಪ್ಪಂದದ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಪೂರೈಸಬಹುದಾದ್ದರಿಂದ ಅಂತಹ ಒಪ್ಪಂದವನ್ನು ಮಾಡಿಕೊಳ್ಳುವಂತೆ ಕೆಇಸಿ ಕೆಎನ್‌ಎನ್‌ಎಲ್ ಅನ್ನು ವಿನಂತಿಸಿತು. ಭೂಸ್ವಾಧೀನವು ದೀರ್ಘ ಸಮಯ ತೆಗೆದುಕೊಂಡು ಯೋಜನೆಯು ಪೂರ್ಣಗೊಳ್ಳುವುದು ವಿಳಂಬವಾಗಬಹುದಾದ್ದರಿಂದ ಕೆಇಸಿಯ ಮನವಿಯನ್ನು ಕೆಎನ್‌ಎನ್‌ಎಲ್ ಒಪ್ಪಿತು (ಮಾರ್ಚ್ 2015). ಅದರಂತೆ, ಕೆಇಸಿ, ಕೆಎನ್‌ಎನ್‌ಎಲ್ ಮತ್ತು ಗುತ್ತಿಗೆ ಏಜೆನ್ಸಿಯೊಂದಿಗೆ (ಐವಿಆರ್‌ಸಿಎಲ್ ಮತ್ತು ಎಂಇಐಎಲ್ ಜಂಟಿ ಉದ್ಯಮ) ತ್ರಿಪಕ್ಷೀಯ ಒಪ್ಪಂದವನ್ನು ಮಾಡಿಕೊಳ್ಳಲಾಯಿತು (ಫೆಬ್ರವರಿ 2016). ಬಳಕೆಯ ಹಕ್ಕನ್ನು ಪರಿಗಣಿಸಿ, ವಿಜೆಎನ್‌ಎಲ್ ಒಂದು ಬಾರಿಯ ಪರವಾನಗಿ ಶುಲ್ಕವಾಗಿ ₹50.00 ಲಕ್ಷವನ್ನು ಪಾವತಿಸಿತು. ಒಪ್ಪಂದದ ಪ್ರಕಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿರ್ದಿಷ್ಟಪಡಿಸಿದ ಅವಧಿ 30 ತಿಂಗಳುಗಳಾಗಿತ್ತು (ಆಗಸ್ಟ್ 2018 ರವರೆಗೆ). ವಿಜೆಎನ್‌ಎಲ್ ಸಿಂಧುತ್ವದ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ, ಒಪ್ಪಂದವನ್ನು ನಾಲ್ಕು ಬಾರಿ ನವೀಕರಿಸಲಾಯಿತು. ಇತ್ತೀಚಿನ ವಿಸ್ತರಣೆಯು 31 ಜನವರಿ 2024ರವರೆಗೆ ಇದ್ದಿತು. ಬಳಕೆ ಹಕ್ಕು ಒಪ್ಪಂದದ ಮೂಲಕ ಕಾಮಗಾರಿಗಳ ಅನುಷ್ಠಾನದಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ನ್ಯೂನತೆಗಳನ್ನು ಗಮನಿಸಿತು:

- ಬಳಕೆ ಹಕ್ಕು ಒಪ್ಪಂದದ ಪ್ರಕಾರ, ₹50 ಲಕ್ಷಗಳ ಪರವಾನಗಿ ಶುಲ್ಕದೊಂದಿಗೆ ವಿಜೆಎನ್‌ಎಲ್ ಆಗಸ್ಟ್ 2018ರೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಿತ್ತು. ಕಾಮಗಾರಿಗಳು ಪೂರ್ಣಗೊಳ್ಳದ ಕಾರಣ, ಒಪ್ಪಂದವನ್ನು ನವೀಕರಿಸಲು ಪರವಾನಗಿ ಶುಲ್ಕವಾಗಿ ₹1.50 ಕೋಟಿಗಳನ್ನು ಹೆಚ್ಚುವರಿಯಾಗಿ ಪಾವತಿಸುವಂತೆ ಕೆಇಸಿ ಒತ್ತಾಯಿಸಿತು (ಮಾರ್ಚ್ 2019). ಬಳಕೆ ಹಕ್ಕಿನ ಒಪ್ಪಂದದ ಅವಧಿಯನ್ನು ವಿಸ್ತರಿಸಲು ₹30 ಲಕ್ಷಗಳ ಹೆಚ್ಚುವರಿ ಪಾವತಿಗೆ ವಿಜೆಎನ್‌ಎಲ್ ನಿರ್ದೇಶಕ ಮಂಡಳಿಯು ಒಪ್ಪಿಕೊಂಡಿತು (ಡಿಸೆಂಬರ್ 2019). ಆದರೆ, ಕೆಇಸಿ (ಮಾರ್ಚ್ 2020) ₹1.50 ಕೋಟಿಗಳ ಪರವಾನಗಿ ಶುಲ್ಕವನ್ನು ಹೆಚ್ಚುವರಿಯಾಗಿ ಪಾವತಿಸಲು ಒತ್ತಾಯಿಸಿತು, ನಂತರ ಕೆಇಸಿ ಅದನ್ನು (ಫೆಬ್ರವರಿ 2023) ₹2.50 ಕೋಟಿಗಳಿಗೆ ಹೆಚ್ಚಿಸಿತು.
- ಕಲಂ 17ರ ಪ್ರಕಾರ ವಿಜೆಎನ್‌ಎಲ್ ಕೆಇಸಿ ಆಸ್ತಿಯನ್ನು ಬಳಸುವ ಹಕ್ಕನ್ನು ಆರ್‌ಟಿಸಿ (ಹಕ್ಕುಗಳು, ಹಿಡುವಳಿ ಮತ್ತು ಬೆಳೆಗಳ ದಾಖಲೆ) ದಾಖಲೆಗಳಲ್ಲಿ ಪ್ರತಿಬಿಂಬಿಸುವಂತೆ ಅಧಿಕಾರವ್ಯಾಪ್ತಿಯ ಉಪ–

ರಿಜಿಸ್ಟ್ರಾರ್ ಕಚೇರಿಯಲ್ಲಿ ಬಳಕೆ ಹಕ್ಕು ಒಪ್ಪಂದವನ್ನು ನೋಂದಾಯಿಸಲು ಅವಕಾಶ ಕಲ್ಪಿಸಿದೆ. ಆದರೆ, ಒಪ್ಪಂದದ ನೋಂದಣಿಗೆ ಪೂರ್ವ ಷರತ್ತಾಗಿ ₹2.50 ಕೋಟಿಗಳ ಪರಿಹಾರವನ್ನು ಪಾವತಿಸುವಂತೆ ಕೆಇಸಿ ಒತ್ತಾಯಿಸಿದ್ದರಿಂದ ನೋಂದಣಿಯನ್ನು ಇನ್ನೂ ನಡೆಸಿರಲಿಲ್ಲ. ಹೀಗೆ ಕೆಇಸಿಯ ಒಪ್ಪಿಗೆಯ ಅಡಿಯಲ್ಲಿ ಒಪ್ಪಂದವನ್ನು ನಿಯತಕಾಲಿಕವಾಗಿ ನವೀಕರಿಸದ ಹೊರತು ಯೋಜನಾ ಪ್ರದೇಶವನ್ನು ಪ್ರವೇಶಿಸಲು ವಿಜೆಎನ್‌ಎಲ್‌ಗೆ ಕಾನೂನು ಪ್ರಕಾರ ಹಕ್ಕಿರಲಿಲ್ಲ.

- ಈ ಒಪ್ಪಂದದ ಅವಧಿಯಲ್ಲಿ ಅಥವಾ ನಂತರ ಗುರುತಿಸಲಾದ ಭೂಮಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಸ್ವಾಧೀನಪಡಿಸಿಕೊಳ್ಳಲು ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ವಿಜೆಎನ್‌ಎಲ್ ಯಾವುದೇ ಕ್ರಮವನ್ನು ಪ್ರಾರಂಭಿಸುವುದನ್ನು ನಿಷೇಧಿಸುವ ಮೂಲಕ ಕೆಇಸಿ ಮುಖ್ಯ ಒಪ್ಪಂದದಲ್ಲಿ ನಿರ್ಬಂಧಿತ ಷರತ್ತುಗಳನ್ನು ವಿಧಿಸಿತು. ಭೂಸ್ವಾಧೀನ ಎಲ್.ಎ ಕಾಯಿದೆ 2013ರ ಸೆಕ್ಷನ್–2ರ ಪ್ರಕಾರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದು. ಹೀಗೆ, ಒಪ್ಪಂದದಲ್ಲಿ ಅನೂರ್ಜಿತ ಷರತ್ತುಗಳನ್ನು ವಿಧಿಸುವುದು ಮೇಲಿನ ಕಾಯಿದೆಯ ಸೆಕ್ಷನ್–2ರ ಉಲ್ಲಂಘನೆಯಾಗುತ್ತದೆ.

ಹೀಗೆ, ಮೊದಲಿಗೆ ಒಪ್ಪಿದ್ದ 30 ತಿಂಗಳ ಅವಧಿಯೊಳಗೆ ಯೋಜನಾ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬದಿಂದಾಗಿ, ವಿಜೆಎನ್‌ಎಲ್ ₹2.50 ಕೋಟಿಗಳ ಹೆಚ್ಚುವರಿ ಪರವಾನಗಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಅಲ್ಲದೆ, ಕೆಇಸಿ ಆವರಣದಲ್ಲಿರುವ ಯೋಜನಾ ಸ್ಥಳವನ್ನು ಪ್ರವೇಶಿಸಲು ಶಾಶ್ವತ ಕಾನೂನು ಹಕ್ಕುಗಳನ್ನು ನೀಡುವ ಕರ್ನಾಟಕ ಮುದ್ರಾಂಕ ಕಾಯಿದೆಯ ನಿಬಂಧನೆಗಳ ಪ್ರಕಾರ ವಿಜೆಎನ್‌ಎಲ್ ಒಪ್ಪಂದವನ್ನು ನೋಂದಾಯಿಸಿರಲಿಲ್ಲ.

ಭೂಸ್ವಾಧೀನಕ್ಕೆ ತಗಲುವ ವೆಚ್ಚ ಮತ್ತು ಸಮಯಕ್ಕೆ ಹೋಲಿಸಿದರೆ ಭೂಮಿಯ ಬಳಕೆಗಾಗಿ ಬಳಕೆ ಹಕ್ಕು ಒಪ್ಪಂದವನ್ನು ಅಳವಡಿಸಿಕೊಳ್ಳುವುದು ಪ್ರಯೋಜನಕಾರಿಯಾಗಿತ್ತು ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಕೆಇಸಿಗೆ ₹2.50 ಕೋಟಿಗಳನ್ನು ಪಾವತಿಸಿದ ನಂತರ ಕರ್ನಾಟಕ ಮುದ್ರಾಂಕ ಕಾಯಿದೆಯ ನಿಬಂಧನೆಗಳ ಪ್ರಕಾರ ಒಪ್ಪಂದವನ್ನು ನೋಂದಾಯಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ತಿಳಿಸಲಾಯಿತು.

ಆದರೆ, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬವು ವಿಜೆಎನ್‌ಎಲ್‌ಗೆ ₹2.50 ಕೋಟಿಗಳ ಹೆಚ್ಚುವರಿ ಹೊಣೆಗಾರಿಕೆಯಲ್ಲಿ ಪರಿಣಮಿಸಿದರ ಜೊತೆಗೆ ಬಳಕೆ ಹಕ್ಕು ಒಪ್ಪಂದವನ್ನು ನೋಂದಾಯಿಸಲಿಲ್ಲ ಎಂಬುದು ವಾಸ್ತವಾಂಶವಾಗಿದೆ

ಲೆಕ್ಕಪರಿಶೋಧನಾ ಶಿಫಾರಸುಗಳು

ಶಿಫಾರಸು–5: ಈಗಾಗಲೇ ಸೃಷ್ಟಿಸಿರುವ ಆಸ್ತಿಗಳು ನಿಷ್ಕ್ರಿಯವಾಗುವುದನ್ನು ತಪ್ಪಿಸಲು ಮತ್ತು ಉದ್ದೇಶಿತ ಫಲಾನುಭವಿಗಳಿಗೆ ಕುಡಿಯುವ ನೀರು ಸಿಗುವುದನ್ನು ಖಚಿತಪಡಿಸಿಕೊಳ್ಳಲು ವಿಜೆಎನ್‌ಎಲ್ ಮಂಡಳಿ ನಿಗದಿಪಡಿಸಿದ ಅವಧಿಯೊಳಗೆ ಎರಡನೇ ಹಂತದ ಕಾಮಗಾರಿಗಳನ್ನು ವಿಜೆಎನ್‌ಎಲ್ ಪೂರ್ಣಗೊಳಿಸಬೇಕು.

ಶಿಫಾರಸು–6: ವಿಜೆಎನ್‌ಎಲ್ ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯ್ದೆಯ ನಿಬಂಧನೆಗಳನ್ನು ಅನುಸರಿಸಬೇಕು ಮತ್ತು ಹೆಚ್ಚುವರಿ ಪಾವತಿಗಳನ್ನು ಕಾಲಮಿತಿಯೊಳಗೆ ವಸೂಲಿ ಮಾಡಬೇಕು.

ಅಧ್ಯಾಯ–IV

ಮೇಲ್ವಿಚಾರಣೆ

ಅಧ್ಯಾಯ–IV

ಮೇಲ್ವಿಚಾರಣೆ

ಸರ್ಕಾರದ ಮಟ್ಟದಲ್ಲಿ ಮೇಲ್ವಿಚಾರಣಾ ಕಾರ್ಯವಿಧಾನದ ಅನುಪಸ್ಥಿತಿ, ನಿಯಮಿತವಾಗಿ ಮಾಸಿಕ ಬಹು ಹಂತದ ಪರಿಶೀಲನಾ ಸಭೆಗಳನ್ನು ನಡೆಸದಿರುವುದು, ಹಂತ–1ರ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಮೂರನೇ ವ್ಯಕ್ತಿಯಿಂದ ತಪಾಸಣೆ ನಡೆಸದಿರುವುದು ಮತ್ತು ಕಾಮಗಾರಿ ದಾಖಲೆಗಳ ನಿರ್ವಹಣೆಯಲ್ಲಿ ಇತರ ನ್ಯೂನತೆಗಳಂತಹ ಮೇಲ್ವಿಚಾರಣಾ ಕೊರತೆಗಳಿಂದ ಯೋಜನೆಯು ಬಾಧಿತವಾಗಿತ್ತು.

ಯೋಜನೆಯ ಕಾಮಗಾರಿಗಳ ಗುಣಮಟ್ಟವು ಪರಿಣಾಮಕಾರಿ ಮತ್ತು ಸಮಯೋಚಿತ ಮೇಲ್ವಿಚಾರಣೆಯನ್ನು ಗಮನಾರ್ಹವಾಗಿ ಅವಲಂಬಿಸಿರುತ್ತದೆ. ನಿರ್ದಿಷ್ಟ ಗುಣಮಟ್ಟದ ಮಾನದಂಡಗಳೊಂದಿಗೆ ನಿಗದಿತ ಸಮಯದೊಳಗೆ ಮತ್ತು ನಿಗದಿತ ವೆಚ್ಚದಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು ನಿಯತಕಾಲಿಕ ತಪಾಸಣೆ/ ಮೌಲ್ಯಮಾಪನವನ್ನು ವಿವಿಧ ಹಂತದ ಅಧಿಕಾರಿಗಳು ಮಾಡಬೇಕು. ನಿಯತಕಾಲಿಕ ಮೇಲ್ವಿಚಾರಣಾ ವ್ಯವಸ್ಥೆಯು ಯೋಜನೆಯ ಕಾರ್ಯಗತಗೊಳಿಸುವಿಕೆಯ ಕಾರ್ಯಕ್ಷಮತೆಯನ್ನು ಸುಧಾರಿಸಲು ಕಾರ್ಯಾಚರಣೆಗಳ ಅಗತ್ಯ ಸಮಯೋಚಿತ ಮಾರ್ಪಾಡುಗಳನ್ನು ಖಚಿತಪಡಿಸುತ್ತದೆ. ಯೋಜನೆಯ ಮೇಲ್ವಿಚಾರಣೆಯಲ್ಲಿ ಗಮನಿಸಲಾದ ನ್ಯೂನತೆಗಳು ಈ ಕೆಳಗಿನಂತಿವೆ:

4.1 ಸರ್ಕಾರದ ಮಟ್ಟದಲ್ಲಿ ಮೇಲ್ವಿಚಾರಣಾ ಕಾರ್ಯವಿಧಾನದ ಅನುಪಸ್ಥಿತಿ

ವ್ಯವಸ್ಥಾಪಕ ನಿರ್ದೇಶಕರು (ಎಂಡಿ), ಮುಖ್ಯ ಅಭ್ಯಂತರರು (ಸಿಇ), ಅಧೀಕ್ಷಕ ಅಭ್ಯಂತರರು (ಎಸ್‌ಇ), ಕಾರ್ಯನಿರ್ವಾಹಕ ಅಭ್ಯಂತರರು (ಇಇ) ಮತ್ತು ಇತರ ಕ್ಷೇತ್ರ ಮಟ್ಟದ ಅಧಿಕಾರಿಗಳ ಮಟ್ಟದಲ್ಲಿ ಮಾಸಿಕ ಬಹುಮಟ್ಟದ ಸಮೀಕ್ಷಾ (ಎಮ್‌ಎಮ್‌ಆರ್) ಸಭೆಗಳ ಮೂಲಕ ಮತ್ತು ನಂತರ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯೊಂದಿಗೆ ಸರ್ಕಾರದ ಮಟ್ಟದಲ್ಲಿ ಪ್ರತಿಕೂಲ ಪರಿಸ್ಥಿತಿ ಮತ್ತು ಕಾಮಗಾರಿಗಳ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಪರಿಹಾರ ಕ್ರಮಗಳ ಬಗ್ಗೆ ವಿಶೇಷ ಒತ್ತು ನೀಡುವ ಮೂಲಕ ವಿಜೆಎನ್‌ಎಲ್ ಯೋಜನೆಯ ಮೇಲ್ವಿಚಾರಣೆಯನ್ನು ಮಾಡುತ್ತದೆ.

ಆದರೆ ವಿವಿಧ ಹಂತದ ಅಧಿಕಾರಿಗಳಾದ, ಇಇ, ಎಸ್‌ಇ, ಸಿಇ, ಎಂಡಿ, ಸರ್ಕಾರದ ಮಟ್ಟದಲ್ಲಿ ತಪಾಸಣೆಗಳ ನಿರ್ದಿಷ್ಟ ಆವರ್ತನೀಯ ವೇಳಾಪಟ್ಟಿಯನ್ನು ನಿಗದಿಪಡಿಸುವ ಮತ್ತು ಯೋಜನೆಯನ್ನು ಸಕಾಲಿಕವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ವರದಿಯನ್ನು ಮಾಡುವ ಯಾವುದೇ ಮೇಲ್ವಿಚಾರಣಾ ವ್ಯವಸ್ಥೆ/ ನೀತಿಯನ್ನು ಕರ್ನಾಟಕ ಸರ್ಕಾರ/ವಿಜೆಎನ್‌ಎಲ್ ರೂಪಿಸಿರಲಿಲ್ಲವೆಂದು ಲೆಕ್ಕಪರಿಶೋಧನೆಯು ಗಮನಿಸಿತು.

ಸರ್ಕಾರ ಮತ್ತು ವಿವಿಧ ಹಂತಗಳಲ್ಲಿ ಪರಿಣಾಮಕಾರಿ ಮೇಲ್ವಿಚಾರಣಾ ವ್ಯವಸ್ಥೆಯ ಅನುಪಸ್ಥಿತಿಯಲ್ಲಿ, ಯೋಜನೆಯ ಅನುಷ್ಠಾನದ ಅವಧಿಯಲ್ಲಿ (ಹಿಂದಿನ ಕಂಡಿಕೆಗಳಲ್ಲಿ ಚರ್ಚಿಸಿದಂತೆ) ಉದ್ಭವಿಸಿದ ಹಲವಾರು ಅಡೆತಡೆಗಳನ್ನು ಪರಿಹರಿಸಲು ಯಾವುದೇ ಕಾರ್ಯವಿಧಾನವು ಲಭ್ಯವಿರಲಿಲ್ಲ. ಇದು ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ಅಸಾಮಾನ್ಯ ವಿಳಂಬಕ್ಕೆ ಕಾರಣವಾಯಿತು ಮತ್ತು ಬರಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಸಾಧಿಸಲಾಗಲಿಲ್ಲ.

4.2 ನಿಯಮಿತ ಮಾಸಿಕ ಬಹು ಹಂತದ ಪರಿಶೀಲನಾ ಸಭೆಗಳನ್ನು ನಡೆಸದಿರುವುದು

ವಿಜೆಎನ್‌ಎಲ್ ಮಾಸಿಕ ಬಹು ಹಂತದ ಪರಿಶೀಲನಾ (ಎಂಎಂಆರ್) ಸಭೆಗಳನ್ನು ನಡೆಸುತ್ತದೆ ಮತ್ತು ಅದರಲ್ಲಿ ಪ್ರಗತಿಯಲ್ಲಿರುವ ಎಲ್ಲಾ ಪ್ರಮುಖ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಲಾಗುತ್ತದೆ, ಅದರಿಂದ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಯಾವುದೇ ಅಡೆತಡೆಗಳು/ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ. ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿರಲಿಲ್ಲ ಮತ್ತು ಏಪ್ರಿಲ್ 2014ರಿಂದ ಆಗಸ್ಟ್ 2023ರವರೆಗಿನ ಅವಧಿಯ 108 ತಿಂಗಳುಗಳಲ್ಲಿ ಕೇವಲ 54 ಸಭೆಗಳನ್ನು ಅಂದರೆ ವಿಭಾಗ ಮಟ್ಟದಲ್ಲಿ 37 ಸಭೆಗಳು, ವೃತ್ತ ಕಚೇರಿ ಮಟ್ಟದಲ್ಲಿ ಏಳು ಸಭೆಗಳು ಮತ್ತು ವಲಯ ಕಚೇರಿ ಮಟ್ಟದಲ್ಲಿ 10 ಸಭೆಗಳನ್ನು ನಡೆಸಲಾಗಿತ್ತು ಎಂಬುದನ್ನು ಪರೀಕ್ಷಾ-ತನಿಖೆ ನಡೆಸಿದ ವಿಭಾಗಗಳ ಎಂಎಂಆರ್ ಸಭೆಯ ದಾಖಲೆಗಳ ಪರಿಶೀಲನೆಯಿಂದ ಗಮನಿಸಲಾಯಿತು..

ಹೀಗೆ, ನಿಗದಿಪಡಿಸಿದ ಮಾಸಿಕ ಎಂಎಂಆರ್ ಸಭೆಗಳನ್ನು ನಡೆಸದಿರುವುದು ಯೋಜನೆಯ ಪ್ರಗತಿಯ ದುರ್ಬಲ ಮೇಲ್ವಿಚಾರಣೆಯನ್ನು ಸೂಚಿಸುತ್ತದೆ, ಇದನ್ನು ಯೋಜನೆಯ ಪೂರ್ಣಗೊಳಿಸುವಲ್ಲಿನ ವಿಳಂಬದ ಸಂಯೋಗದೊಂದಿಗೆ ನೋಡಬೇಕಾಗುತ್ತದೆ.

4.3 ಕಾಮಗಾರಿಗಳ ದಾಖಲೆಗಳ ತಪಾಸಣೆ ಮತ್ತು ನಿರ್ವಹಣೆಯಲ್ಲಿ ನ್ಯೂನತೆಗಳು

ಸರ್ಕಾರ/ವಿಜೆಎನ್‌ಎಲ್ ಮಟ್ಟದಲ್ಲಿ ಯೋಜನೆಯ ಮೇಲ್ವಿಚಾರಣೆಯಲ್ಲಿನ ನ್ಯೂನತೆಗಳು ಮತ್ತು ಕೊರತೆಯ ಹೊರತಾಗಿ, ಲೆಕ್ಕಪರಿಶೋಧನೆಯು ಈ ಕೆಳಗಿನಂತೆ ಕಾಮಗಾರಿಗಳ ಪರಿಶೀಲನೆ ಮತ್ತು ಕಾಮಗಾರಿ ದಾಖಲೆಗಳ ನಿರ್ವಹಣೆಯಲ್ಲಿ ನ್ಯೂನತೆಗಳನ್ನು ಗಮನಿಸಿತು:

- ಕರ್ನಾಟಕ ಸರ್ಕಾರ (ಫೆಬ್ರವರಿ 2005) ಕಾಮಗಾರಿಗಳನ್ನು ಮೂರನೇ ವ್ಯಕ್ತಿಯಿಂದ ತಪಾಸಣೆ ನಡೆಸಲು ನಿರ್ದೇಶನಗಳನ್ನು ನೀಡಿತು ಮತ್ತು ₹2 ಕೋಟಿಗಿಂತ ಹೆಚ್ಚಿನ ಮೌಲ್ಯದ ಎಲ್ಲಾ ಕಾಮಗಾರಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಇದನ್ನು ಕಡ್ಡಾಯಗೊಳಿಸಿತು. ಹಂತ-1ರ ಕಾಮಗಾರಿಗಳಲ್ಲಿ ಐದು ಪ್ಯಾಕೇಜ್‌ಗಳನ್ನು ವಹಿಸಿದ ದಿನಾಂಕದಿಂದ ನಾಲ್ಕು ವರ್ಷಗಳ ವಿಳಂಬದ ನಂತರ ಮೂರನೇ ವ್ಯಕ್ತಿಯ ತಪಾಸಣೆಗಾಗಿ ಕಾರ್ಯಾದೇಶವನ್ನು ನೀಡಲಾಗಿತ್ತು (ಮಾರ್ಚ್ 2018) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಆ ವೇಳೆಗೆ ಮೈಲ್ಡ್ ಸ್ಟೀಲ್ ರೇಸಿಂಗ್ ಮೇನ್ ಪೈಪ್‌ಗಳನ್ನು ಅಳವಡಿಸುವುದನ್ನು ಒಳಗೊಂಡಂತೆ ಸುಮಾರು ಶೇಕಡಾ 64ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಲಾಗಿತ್ತು. ಅಳವಡಿಸಿದ ಈ ಪೈಪ್‌ಗಳ ಮೇಲೆ ಅಲ್ಟ್ರಾಸಾನಿಕ್ ಪರೀಕ್ಷೆಗಳು, ಡೈ ಪೆನೆಟ್ರೇಶನ್ ಟೆಸ್ಟ್ ಮತ್ತು ರೇಡಿಯೋಗ್ರಫಿ ಪರೀಕ್ಷೆಯಂತಹ ಪರೀಕ್ಷೆಗಳನ್ನು ಮೂರನೇ ವ್ಯಕ್ತಿಯ ತಪಾಸಣೆಯಿಂದ ನಡೆಸಲು ಸಾಧ್ಯವಾಗಲಿಲ್ಲ. ಹೀಗೆ, ಮೂರನೇ ವ್ಯಕ್ತಿಯ ತಪಾಸಣೆಗಾಗಿ ಏಜೆನ್ಸಿಗಳ ನೇಮಕಾತಿಯಲ್ಲಿನ ವಿಳಂಬವು ಹಂತ-1ರ ಕಾಮಗಾರಿಗಳ ಗಮನಾರ್ಹ ಭಾಗವನ್ನು ಅಂತಹ ತಪಾಸಣೆಯ ವ್ಯಾಪ್ತಿಯಿಂದ ಹೊರಗಿಡುವಲ್ಲಿ ಪರಿಣಮಿಸಿತು.

  ಚಿತ್ರದುರ್ಗದ ಭದ್ರಾ ಮೇಲ್ದಂಡೆ ಯೋಜನೆಯ ಮುಖ್ಯ ಅಭ್ಯಂತರರ ಅಡಿಯಲ್ಲಿ ಗುಣಮಟ್ಟ ನಿಯಂತ್ರಣ ಉಪವಿಭಾಗವು ವಿಜೆಎನ್‌ಎಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಮೂರನೇ ವ್ಯಕ್ತಿಯ ಗುಣಮಟ್ಟ ಮೇಲ್ವಿಚಾರಣಾ ಸಲಹೆಗಾರರನ್ನು ನೇಮಿಸಲಾಗಿಲ್ಲ ಎಂದು ಸರ್ಕಾರವು ತಿಳಿಸಿತು

(ಮಾರ್ಚ್ 2024). ಮೂರನೇ ವ್ಯಕ್ತಿಯ ಪರಿಶೀಲನಾ ಏಜೆನ್ಸಿಗಳನ್ನು ನೇಮಿಸದಿರುವುದು ಕರ್ನಾಟಕ ಸರ್ಕಾರದ ನಿರ್ದೇಶನಗಳಿಗೆ ವಿರುದ್ಧವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಯೋಜನೆಯಡಿಯಲ್ಲಿನ ಕಾಮಗಾರಿಗಳು ಸಂಕೀರ್ಣ ಕಾಮಗಾರಿಗಳು ಮತ್ತು ಗಣನೀಯ ವೆಚ್ಚವನ್ನು ಒಳಗೊಂಡ ದೊಡ್ಡ ಟರ್ನ್–ಕೀ ಗುತ್ತಿಗೆಗಳಾಗಿದ್ದು, ಮೂರನೇ ವ್ಯಕ್ತಿಯ ವಿಶೇಷ ಏಜೆನ್ಸಿಗಳ ಮೂಲಕ ಗುಣಮಟ್ಟದ ಮೇಲ್ವಿಚಾರಣೆಯ ಅಗತ್ಯವಿದ್ದಿತು. ಇದನ್ನು ಗುರುತಿಸಿದ ವಿಜೆಎನ್ಎಲ್ ಸ್ವತಃ ಮಾರ್ಚ್ 2018ರಲ್ಲಿ ಮೂರನೇ ವ್ಯಕ್ತಿಯ ಗುಣಮಟ್ಟ ಮೇಲ್ವಿಚಾರಣಾ ಸಂಸ್ಥೆಗಳನ್ನು ನೇಮಿಸಿತು.

- ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 11ರ ಪ್ರಕಾರ, ಸರ್ಕಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು /ಬಳಸುವುದನ್ನು ಒಳಗೊಂಡ ಎಲ್ಲಾ ಕಾಮಗಾರಿಗಳಿಗೆ ಉಪ–ವಿಭಾಗೀಯ ಕಚೇರಿಗಳು ಸ್ವಾಧೀನದಲ್ಲಿರುವ ಎಲ್ಲಾ ಭೂಮಿಯ ವಿವರಗಳನ್ನು ತೋರಿಸುವ ಭೂಮಿಯ ರಿಜಿಸ್ಟರ್ ಅನ್ನು ನಿರ್ವಹಿಸಬೇಕು. ಎಲ್ಲಾ ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸಬೇಕು ಮತ್ತು ಸಂಬಂಧಪಟ್ಟ ಉಪ–ವಿಭಾಗೀಯ ಕಚೇರಿಗಳಲ್ಲಿ ಲಭ್ಯವಿರಬೇಕು. ಯೋಜನೆಗಾಗಿ 3722.14 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದರೂ ಯಾವುದೇ ಉಪವಿಭಾಗಗಳು ಭೂ ರಿಜಿಸ್ಟರ್ ಅನ್ನು ನಿರ್ವಹಿಸಿರಲಿಲ್ಲ ಮತ್ತು ನಿಗದಿತ ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆ ಗಮನಿಸಿತು.

  ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಮತ್ತು ಹಕ್ಕುಗಳನ್ನು ವಿಜೆಎನ್ಎಲ್ ಹೆಸರಿಗೆ ವರ್ಗಾಯಿಸಿದ ನಂತರ, ಉಪ–ವಿಭಾಗೀಯ ಕಚೇರಿಗಳು ಸೂಚನೆಯಂತೆ ಭೂ ರಿಜಿಸ್ಟರ್ ಅನ್ನು ನಿರ್ವಹಿಸುತ್ತವೆ ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ಭೂ ದಾಖಲೆಗಳ ಡಿಜಿಟಲೀಕರಣವನ್ನು ಅಭಿವೃದ್ಧಿ ಹಂತದಲ್ಲಿರುವ ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆಯಡಿ ಕೈಗೊಳ್ಳಲಾಗುವುದು.

- ಸರ್ಕಾರಿ ಕಚೇರಿಗಳಲ್ಲಿ ನಗದು ಪುಸ್ತಕ ಮತ್ತು ಇತರ ಲೆಕ್ಕಪತ್ರಗಳ ನಿರ್ವಹಣೆಗೆ ಕರ್ನಾಟಕ ಹಣಕಾಸು ಸಂಹಿತೆಯು ಕಾರ್ಯವಿಧಾನವನ್ನು ಸೂಚಿಸುತ್ತದೆ. ನಗದು ಪುಸ್ತಕ ಒಂದು ಪೂರಕ ಲೆಡ್ಜರ್ ಆಗಿದ್ದು, ಇದರಲ್ಲಿ ಸ್ವೀಕೃತಿ ಮತ್ತು ಪಾವತಿಗಳ ಎಲ್ಲಾ ವಹಿವಾಟುಗಳನ್ನು ದಾಖಲಿಸಲಾಗುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ಸ್ವೀಕೃತಿಗಳು ಮತ್ತು ಪಾವತಿಗಳನ್ನು ಸೂಕ್ತವಾಗಿ ದಾಖಲಿಸುವ ಕಾಮಗಾರಿ ನಗದು ಪುಸ್ತಕವನ್ನು ಯಾವುದೇ ವಿಭಾಗಗಳು ನಿರ್ವಹಿಸುತ್ತಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿ ನಗದು ಪುಸ್ತಕವನ್ನು ನಿರ್ವಹಿಸದಿರುವುದು ದುರ್ಬಲ ಮೇಲ್ವಿಚಾರಣಾ ನಿಯಂತ್ರಣಗಳಿಗೆ ದಾರಿ ಮಾಡಿಕೊಡುತ್ತದೆ ಮತ್ತು ಅಲ್ಲಿ ನಗದು ಪುಸ್ತಕ ಮತ್ತು ಬ್ಯಾಂಕ್ ಪುಸ್ತಕದ ನಡುವಿನ ಹೊಂದಾಣಿಕೆಯ ಮೂಲಕ ಬಾಕಿಗಳನ್ನು ಪರಿಶೀಲಿಸಲು ಸಾಧ್ಯವಾಗುವುದಿಲ್ಲ.

  ಯೋಜನೆಯಡಿಯಲ್ಲಿ ಎಲ್ಲಾ ಪಾವತಿಗಳು ಕೇಂದ್ರೀಕೃತವಾಗಿರುವುದರಿಂದ, ಏಪ್ರಿಲ್ 2023ರಿಂದ ಚಿತ್ರದುರ್ಗದ ಮುಖ್ಯ ಲೆಕ್ಕಪತ್ರ ಕಛೇರಿಯಲ್ಲಿ ಹಸ್ತಚಾಲಿತ ಕಾಮಗಾರಿಗಳ ನಗದು ಪುಸ್ತಕವನ್ನು ನಿರ್ವಹಿಸಲಾಗಿತ್ತು ಎಂದು ಸರ್ಕಾರವು ತಿಳಿಸಿತು (ಮಾರ್ಚ್ 2024). ಎಲ್ಲಾ ವಿಭಾಗೀಯ

ಕಚೇರಿಗಳಿಗೆ ಇನ್ನು ಮುಂದೆ ಕಾಮಗಾರಿಗಳ ನಗದು ಪುಸ್ತಕವನ್ನು ನಿರ್ವಹಿಸಲು ನಿರ್ದೇಶಿಸಲಾಗುವುದು ಎಂದು ನಿರ್ಗಮನ ಸಮ್ಮೇಳನದಲ್ಲಿ, ಸರ್ಕಾರವು ತಿಳಿಸಿತು (ಮಾರ್ಚ್ 2024).

- ಕೆಪಿಡಬ್ಲ್ಯುಡಿ ಸಂಹಿತೆಯ ಕಂಡಿಕೆ 110, ಅಳತೆ ಪುಸ್ತಕಗಳ ವಿತರಣೆ, ದಾಖಲಿಸುವುದು ಮತ್ತು ಸಂಗ್ರಹಣೆಗೆ ಸಂಬಂಧಿಸಿದಂತೆ ವಿವರವಾದ ಸೂಚನೆಗಳನ್ನು ಒದಗಿಸುತ್ತದೆ. ಕಾಮಗಾರಿಗಳು ಮತ್ತು ಸರಬರಾಜುಗಳ ಮಾಪನವನ್ನು ದಾಖಲಿಸಲು ಕರ್ನಾಟಕ ಸರ್ಕಾರ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಿತು (ಜನವರಿ 2005). ಹಂತ–1ರ ಕಾಮಗಾರಿಗಳಿಗೆ, ಕಾಮಗಾರಿಗಳು ಮತ್ತು ಸರಬರಾಜುಗಳ ವಿವರವಾದ ಅಳತೆಗಳನ್ನು ತೆಗೆದುಕೊಂಡಿರಲಿಲ್ಲ ಮತ್ತು ಮಾಪನ ಪುಸ್ತಕಗಳಲ್ಲಿ ದಾಖಲಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬದಲಾಗಿ, ಕಾಮಗಾರಿಗಳನ್ನು ಟರ್ನ್–ಕೀ ಆಧಾರದ ಮೇಲೆ ನೀಡಿದ್ದರಿಂದ ಪೂರ್ಣಗೊಂಡ ಶೇಕಡಾವಾರು ಆಧಾರದ ಮೇಲೆ ಅಳತೆಗಳನ್ನು ದಾಖಲಿಸಲಾಗುತ್ತಿತ್ತು. ಎರಡನೇ ಹಂತದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಗುತ್ತಿಗೆ ನಿರ್ವಹಣಾ ಮಾಡ್ಯೂಲ್‌ನಲ್ಲಿ ಒದಗಿಸಲಾದ ಸೌಲಭ್ಯವನ್ನು ಬಳಸಿಕೊಳ್ಳುವ ಬದಲು ಅಳತೆಗಳನ್ನು ಸಡಿಲ ಎಕ್ಸೆಲ್ ಸ್ಪ್ರೆಡ್ ಶೀಟ್‌ಗಳಲ್ಲಿ ದಾಖಲಿಸಲಾಗಿತ್ತು. ಅಳತೆಗಳನ್ನು ದಾಖಲಿಸಲು ಬಳಸುವ ಸಡಿಲವಾದ ಎಕ್ಸೆಲ್ ಸ್ಪ್ರೆಡ್ ಶೀಟ್‌ಗಳನ್ನು ತಿದ್ದುಪಡಿ ಮಾಡಬಹುದಿತ್ತು ಹಾಗಾಗಿ ಮಾರ್ಪಾಡುಗಳಿಗೆ ಅವಕಾಶವಿದ್ದಿತು.

  ಫೆಬ್ರವರಿ 2022ಕ್ಕಿಂತ ಮೊದಲು ಪಾವತಿಸಿದ ಹಂತ–1ರ ಕಾಮಗಾರಿಗಳಿಗೆ ಸರ್ಕಾರ ಯಾವುದೇ ಉತ್ತರವನ್ನು ಸಲ್ಲಿಸಲಿಲ್ಲ ಮತ್ತು ಕಾರ್ಯಗತಗೊಳಿಸಿದ ಎಲ್ಲಾ ಕಾಮಗಾರಿಗಳಿಗೆ ವಿವರವಾದ ಅಳತೆಗಳನ್ನು ದಾಖಲಿಸಲು ಸೂಚನೆಗಳನ್ನು ನೀಡಲಾಗಿದೆ (ಫೆಬ್ರವರಿ 2022) ಮತ್ತು ವಿವರವಾದ ಅಳತೆಗಳಿಲ್ಲದೆ ಪಾವತಿಗಾಗಿ ಯಾವುದೇ ಬಿಲ್ಲುಗಳನ್ನು ಶಿಫಾರಸು ಮಾಡದಂತೆ ಲೆಕ್ಕಪತ್ರ ವಿಭಾಗಕ್ಕೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿತು (ಮಾರ್ಚ್ 2024). ಎರಡನೇ ಹಂತದ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಸೂಚನೆಗಳ ಪ್ರಕಾರ ಮಾಪನ ಪುಸ್ತಕಗಳನ್ನು ಎಕ್ಸೆಲ್ ಸ್ಪ್ರೆಡ್ ಶೀಟ್‌ಗಳಲ್ಲಿ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಲಾಯಿತು. ಸರ್ಕಾರದ ಸೂಚನೆಗಳಲ್ಲಿ ತಿಳಿಸಿದಂತೆ ಅಳತೆಗಳನ್ನು ಇನ್ನೂ ಸಡಿಲ/ತಿದ್ದ ಬಹುದಾದ ಎಕ್ಸೆಲ್ ಶೀಟ್‌ಗಳಲ್ಲಿ ದಾಖಲಿಸಲಾಗುತ್ತಿದೆ ಮತ್ತು ಗುತ್ತಿಗೆ ನಿರ್ವಹಣಾ ಮಾಡ್ಯೂಲ್‌ನ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ದಾಖಲಿಸುತ್ತಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ

- ಗುತ್ತಿಗೆ ಷರತ್ತುಗಳ ಅನುಚ್ಛೇದ 3ರ ಕಲಂ 13.1ರ ಅನ್ವಯ ಗುತ್ತಿಗೆದಾರನು ಉದ್ಯೋಗದಾತರಿಂದ ಅನುಮೋದಿಸಲ್ಪಟ್ಟ ನಿಯಮಗಳ ಪ್ರಕಾರ ಅಗತ್ಯ ವಿಮೆಯನ್ನು ಒದಗಿಸಬೇಕು, ಅದು ಗುತ್ತಿಗೆಯ ಒಟ್ಟು ಮೌಲ್ಯವನ್ನು ಒಳಗೊಂಡಿರುವ ಎಲ್ಲಾ ಅಪಾಯಗಳನ್ನು ಭರಿಸಬೇಕು ಮತ್ತು ನಿರ್ವಹಣಾ ಅವಧಿ ಪೂರ್ಣಗೊಳ್ಳುವವರೆಗೆ ಮಾನ್ಯವಾಗಿರಬೇಕು. ಗುತ್ತಿಗೆಯನ್ನು ವಹಿಸಿದ ಒಂದು ತಿಂಗಳೊಳಗೆ ವಿಮಾ ದಾಖಲೆಗಳ ಪ್ರತಿಗಳನ್ನು ಉದ್ಯೋಗದಾತರಿಗೆ ಒದಗಿಸಬೇಕು. ಆದರೆ, ಪ್ಯಾಕೇಜ್–3 ಮತ್ತು ಪ್ಯಾಕೇಜ್–5 ಹೊರತುಪಡಿಸಿ, ಹಂತ–1ರ ಕಾಮಗಾರಿಗಳ ಐದು ಪ್ಯಾಕೇಜ್‌ಗಳಲ್ಲಿ ಮೂರರಲ್ಲಿ ಸಂಪೂರ್ಣ ವಿಮಾ ರಕ್ಷಣೆ ಲಭ್ಯವಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ವಿಜೆಎನ್‌ಎಲ್ ಈ

ನಿಟ್ಟಿನಲ್ಲಿ ಗುತ್ತಿಗೆ ನಿಬಂಧನೆಗಳನ್ನು ಅನುಸರಿಸಲು ವಿಫಲವಾಗಿತ್ತು ಮತ್ತು ಇದು ಯಾವುದೇ ಹಾನಿಯ ಸಂದರ್ಭದಲ್ಲಿ ದುಬಾರಿಯಾಗಬಹುದು.

ಪೂರ್ಣ ವಿಮಾ ರಕ್ಷಣೆ ಸೌಲಭ್ಯವಿಲ್ಲದಿದ್ದರೂ, ಗುತ್ತಿಗೆಯ ವಿವಿಧ ನಿಬಂಧನೆಗಳ ಅನ್ವಯ ಆಕಸ್ಮಿಕ ಸಂದರ್ಭದಲ್ಲಿ ಆಸ್ತಿಗೆ ಯಾವುದೇ ನಷ್ಟ/ಹಾನಿಯಾದಲ್ಲಿ ಅದನ್ನು ವಸೂಲು ಮಾಡುವ ಹಕ್ಕನ್ನು ವಿಜೆಎನ್ಎಲ್ ಹೊಂದಿತ್ತು ಎಂದು ಸರ್ಕಾರ ತಿಳಿಸಿತು (ಮಾರ್ಚ್ 2024). ವಿಮಾ ರಕ್ಷಣೆಯು ಅನಿರೀಕ್ಷಿತ ನಷ್ಟಗಳು/ಹಾನಿಗಳನ್ನು ಸರಿದೂಗಿಸಲು ನಿರ್ದಿಷ್ಟ ಗುತ್ತಿಗೆಯ ಷರತ್ತಾಗಿದ್ದು ಅದನ್ನು ಇತರ ಗುತ್ತಿಗೆ ಷರತ್ತುಗಳ ಮೂಲಕ ಜಾರಿಗೊಳಿಸಲಾಗುವುದಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಆದ್ದರಿಂದ, ಕಡ್ಡಾಯವಾದ ವಿಮಾ ರಕ್ಷಣೆಯ ಅನುಪಸ್ಥಿತಿಯು ಯಾವುದೇ ಅನಿರೀಕ್ಷಿತ ಸಂದರ್ಭದಲ್ಲಿ ಸರ್ಕಾರಕ್ಕೆ ಭಾರಿ ಆರ್ಥಿಕ ನಷ್ಟದಲ್ಲಿ ಪರಿಣಮಿಸಬಹುದು.

ಲೆಕ್ಕಪರಿಶೋಧನಾ ಶಿಫಾರಸು

ಶಿಫಾರಸು–7: ಸರ್ಕಾರದ ಮಟ್ಟದಲ್ಲಿ ಪರಿಣಾಮಕಾರಿ ಮೇಲ್ವಿಚಾರಣಾ ವ್ಯವಸ್ಥೆಯನ್ನು ರಚಿಸಬೇಕು ಮತ್ತು ವಿಜೆಎನ್ಎಲ್ ಮೂರನೇ ವ್ಯಕ್ತಿಯಿಂದ ತಪಾಸಣೆ ಮತ್ತು ವಿವಿಧ ಹಂತಗಳಲ್ಲಿ ನಿಗದಿತ ಪರಿಶೀಲನಾ ಸಭೆಗಳನ್ನು ನಡೆಸುವ ಮೂಲಕ ಯೋಜನೆಯ ಮೇಲ್ವಿಚಾರಣೆಯನ್ನು ಬಲಪಡಿಸಬೇಕು.

ಬೆಂಗಳೂರು
11 ಡಿಸೆಂಬರ್, 2025

(ಅಶೋಕ್ ಸಿನ್ಹಾ)
ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)
ಕರ್ನಾಟಕ

ಮೇಲುಸಹಿ ಮಾಡಲಾಗಿದೆ

ನವ ದೆಹಲಿ
16 ಡಿಸೆಂಬರ್, 2025

(ಕೆ. ಸಂಜಯ್ ಮೂರ್ತಿ)
ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು

ಅನುಬಂಧಗಳು

ಅನುಬಂಧ–1 (ಕಂಡಿಕೆ 3.2.1 ರಲ್ಲಿ ಉಲ್ಲೇಖಿಸಲಾಗಿದೆ)
ಒಬ್ಬರೇ ಗುತ್ತಿಗೆದಾರನಿಗೆ ಒಂದಕ್ಕಿಂತ ಹೆಚ್ಚು ಕಾಮಗಾರಿಗಳನ್ನು ನೀಡಿರುವ ವಿವರಗಳು

ಕ್ರಮ ಸಂಖ್ಯೆ	ಗುತ್ತಿಗೆದಾರನ ಹೆಸರು	ವಹಿಸಿದ ಕಾಮಗಾರಿಗಳ ಸಂಖ್ಯೆ	ಕಾಮಗಾರಿಗಳ ಮೌಲ್ಯ (₹ ಕೋಟಿಯಲ್ಲಿ)	ವರ್ಷದಲ್ಲಿ ವಹಿಸಲಾದ ಕಾಮಗಾರಿಗಳ ಸಂಖ್ಯೆ				
				2013–14	2017–18	2018–19	2019–20	2021–22
1	ಡಿ.ವೈ. ಉಪ್ಪಾರ್ ಅಂಡ್ ಸನ್ಸ್	2	1025.71	–	2	–	–	–
2	ಜಿ.ಶಂಕರ್	7	2349.26	1	4	2	–	–
3	ಮೇಘಾ ಎಂಜಿನಿಯರಿಂಗ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್	3	3004.27	2	–	–	1	–
4	ಶಂಕರ್ ನಾರಾಯಣ ಕನ್ಸ್ಟ್ರಕ್ಷನ್ಸ್ (ಪ್ರೈವೇಟ್) ಲಿಮಿಟೆಡ್	11	5216.58		4	6	0	1
5	ಜಿವಿಪಿಆರ್ ಎಂಜಿನಿಯರ್ಸ್ (ಪ್ರೈವೇಟ್) ಲಿಮಿಟೆಡ್	2	1036.45	1	1	–	–	–
6	ಪಿಎಲ್ ಆರ್ ಯೋಜನೆಗಳು	2	1169.36	–	–	1	1	–
7	ಬಿಎಸ್ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್.	2	1004.17		1	0	1	
	ಒಟ್ಟು	**29**	**14805.80**					

ಅನುಬಂಧ–2 (ಕಂಡಿಕೆ–3.2.2.2 ರಲ್ಲಿ ಉಲ್ಲೇಖಿಸಲಾಗಿದೆ)

ರೈಸಿಂಗ್ ಮೇನ್‌ಗಾಗಿ ಮೈಲ್ಡ್ ಸ್ಟೀಲ್ ಪೈಪ್‌ಗಳ ಉದ್ದದ ಹೆಚ್ಚುವರಿ ನಿಬಂಧನೆಯನ್ನು ತೋರಿಸುವ ತ:ಖ್ತೆ

ಕ್ರಮ ಸಂಖ್ಯೆ (1)	ಪ್ಯಾಕೇಜ್ (2)	ಒಪ್ಪಂದದ ಪ್ರಕಾರ ರೈಸಿಂಗ್ ಮೇನ್‌ನ ಉದ್ದ (ಮೀಟರ್‌ಗಳಲ್ಲಿ) (3)	ರೈಸಿಂಗ್ ಮೇನ್‌ನ ವಾಸ್ತವಿಕ ಉದ್ದ (ಮೀಟರ್ ಗಳಲ್ಲಿ) (4)	ರೈಸಿಂಗ್ ಮೇನ್‌ನ ಉದ್ದದಲ್ಲಿನ ವ್ಯತ್ಯಾಸ (ಮೀಟರ್‌ನಲ್ಲಿ) (5)=(3)–(4)	ಪ್ರತಿ ರನ್ನಿಂಗ್ ಮೀಟರ್‌ಗೆ ದರ–ಅಂದಾಜಿನ ಪ್ರಕಾರ (₹ ಗಳಲ್ಲಿ) (6)	ಟೆಂಡರ್ ಪ್ರೀಮಿಯಂ (ಶೇಕಡಾ) (7)	ಟೆಂಡರ್ ಪ್ರೀಮಿಯಂ ಸೇರಿದಂತೆ ದರ (₹ ಗಳಲ್ಲಿ) (8)=(6)×(7)/100	(+) ಅಧಿಕ ಪಾವತಿ/(–) ಪಾವತಿ ಮಾಡಬೇಕಿರುವುದು (₹ ಗಳಲ್ಲಿ) (9)=(5)×(8)
1	I	(ಡಬ್ಲ್ಯೂ 1 ಇಂದ ಡಿಸಿ–3) 7600*2=15200	7155×2= 14310	890	128956.71	10	141852.38	126248618
2	II	(ಡಿಸಿ–1 ಇಂದ ಡಿಸಿ–3) 22800	7300×2 =14600	8200	141692.83	13	160112.9	1312925780
3	III	(ಡಿಸಿ–3 ಇಂದ ಡಿಸಿ–4) 8800*4=35200	8342×4 =33368	1832	160398.81	12	179646.67	329112699
4	IV	(ಡಬ್ಲ್ಯೂ 8 ಇಂದ ಡಿಸಿ –1) 5950	5273	677	93581.64	13	105747.25	71590888
5		(ಡಬ್ಲ್ಯೂ 6 ಇಂದ ಡಿಸಿ–1) 10000	9438	562	50339.33	13	56883.44	31968493
6		(ಡಬ್ಲ್ಯೂ 7 ಇಂದ ಡಿಸಿ–1) 11675*2=23350	11538×2 =23076	274	154979.11	13	175126.4	47984634
7	V	(ಡಬ್ಲ್ಯೂ 3 ಇಂದ ಡಿಸಿ –2) 3910	3885	25	63708.13	13	71990.19	1799755
8		(ಡಬ್ಲ್ಯೂ 4 ಇಂದ ಡಿಸಿ –2) 4620	(3425+1295) = 4720	–100	37878.28	13	42802.46	–4280246
9		(ಡಬ್ಲ್ಯೂ 5 ಇಂದ ಡಿಸಿ –2) 5760	(3225+1295)=4520	1240	67009.07	13	75720.25	93893110
10		ಡಿಸಿ –2 ಇಂದ ಡಿಸಿ –3 14140	(ಬಿಪಿಟಿ ಇಂದ ಡಿಸಿ–2) 14906	–766	140289.93	13	158527.62	–121432157
	ಒಟ್ಟು	**140930**	**128096**	**12834**				**1889811574**

ಡಬ್ಲ್ಯೂ –ವೀಯರ್, ಡಿಸಿ – ವಿತರಣಾ ಕೊಠಡಿ, ಬಿಪಿಟಿ– ಬ್ರೇಕ್ ಪ್ರೆಶರ್ ಟ್ಯಾಂಕ್

ಈಗಾಗಲೇ ವಸೂಲಿ ಮಾಡಲಾದ ಮೊತ್ತ = ₹7.78 ಕೋಟಿ

ವಸೂಲು ಮಾಡಬೇಕಿರುವ ಬಾಕಿ ಮೊತ್ತ = ₹188.98 ಕೋಟಿ–₹7.78 ಕೋಟಿ =₹181.20 ಕೋಟಿ

ಅನುಬಂಧ–3 (ಕಂಡಿಕೆ 3.2.2.5ರಲ್ಲಿ ಉಲ್ಲೇಖಿತ)
ಲೈನಿಂಗ್ ದಪ್ಪದ ಹೆಚ್ಚುವರಿ ನಿಬಂಧನೆಯಿಂದಾಗಿ ಹೆಚ್ಚುವರಿ ವೆಚ್ಚ

ಪ್ಯಾಕೇಜ್ (1)	ಒಪ್ಪಂದದ ಪ್ರಕಾರ ರೈಸಿಂಗ್ ಮೇನ್‌ನ ಉದ್ದ (ಮೀಟರ್‌ಗಳಲ್ಲಿ) (2)	ಕಾಂಕ್ರೀಟ್‌ನ ಒಳ ಮತ್ತು ಹೊರ ಪದರವನ್ನು ಪರಿಗಣಿಸಿ ಎಮ್‌ಎಸ್. ಪೈಪ್‌ನ ದರ (₹/ಆರ್ ಎಮ್ ಟಿ) (3)	ಲೈನಿಂಗ್ ದಪ್ಪವನ್ನು ಪರಿಗಣಿಸದೆ ಎಮ್‌ಎಸ್ ಪೈಪ್‌ನ ದರ (₹/ ಆರ್ ಎಮ್ ಟಿ) (4)	ಲೈನಿಂಗ್ ಒದಗಿಸುವಿಕೆ ಯಿಂದಾಗಿ ಹೆಚ್ಚುವರಿ ದರ–(₹/ಆರ್ಎಮ್‌ಟಿ) (5)	ಅಧಿಕ ವೆಚ್ಚ (₹) (6)=(2)×(5)	ಟೆಂಡರ್ ಪ್ರೀಮಿಯಂ (ಶೇಕಡಾ) (7)	ಟೆಂಡರ್ ಪ್ರೀಮಿಯಂ ಸೇರಿದಂತೆ ಹೆಚ್ಚುವರಿ ವೆಚ್ಚ(₹) (8)=(6)×(7)/100
I	(ಡಬ್ಲ್ಯೂ 1 ಇಂದ ಡಿಸಿ–3) 15200	128956.71	127636.33	1320.38	20069776	10	22076754
II	(ಡಿಸಿ–1 ಇಂದ ಡಿಸಿ –3) 22800	141692.83	140289.93	1402.90	31986120	13	36144316
III	(ಡಿಸಿ –3 ಇಂದ ಡಿಸಿ –4) 35200	160398.81	158913.64	1485.17	52277984	12	58551342
IV	(ಡಬ್ಲ್ಯೂ 8 ಇಂದ ಡಿಸಿ 1) 5950	93581.64	92426.31	1155.33	6874214	13	7767862
	(ಡಬ್ಲ್ಯೂ 6 ಇಂದ ಡಿಸಿ 1) 10000	50339.33	49514.09	825.23	8252400	13	9325212
	(ಡಬ್ಲ್ಯೂ 7 ಇಂದ ಡಿಸಿ 1) 23350	154979.11	153493.69	1485.42	34684557	13	39193549
V	(ಡಬ್ಲ್ಯೂ 3 ಇಂದ ಡಿಸಿ 2) 3910	63708.13	62717.85	990.28	3871995	13	4375354
	(ಡಬ್ಲ್ಯೂ 4 ಇಂದ ಡಿಸಿ 2) 4620	37878.28	37135.57	742.71	3431320	13	3877392
	(ಡಬ್ಲ್ಯೂ 5 ಇಂದ ಡಿಸಿ 2) 5760	67009.07	66018.79	990.28	5704013	13	6445535
	(ಡಿಸಿ 2 ಇಂದ ಡಿಸಿ 3) 14140	140289.93	138887.03	1402.90	19837006	13	22415817
			ಒಟ್ಟು				**210173133**

ಡಬ್ಲ್ಯೂ – ವೀಯರ್, ಡಿಸಿ – ವಿತರಣಾ ಕೊರಡಿ

ಅನುಬಂಧ–4 (ಕಂಡಿಕೆ 3.2.2.6ರಲ್ಲಿ ಉಲ್ಲೇಖಿಸಲಾಗಿದೆ)

ಪೈಪ್‌ಗಳ ಪೂರೈಕೆಗಾಗಿ ಮಾಡಿದ ಮುಂಗಡ ಪಾವತಿಗಳಿಂದ ವಸೂಲಿ ಮಾಡಬೇಕಾದ ಬಡ್ಡಿಯ ವಿವರಗಳು

ಪ್ಯಾಕೇಜ್–1				
ಕ್ರಮ ಸಂಖ್ಯೆ	**ಮೊತ್ತ**	**ಆರ್‌ಎ ಬಿಲ್ಲಿನ ದಿನಾಂಕ**	**ದಿನಗಳ ಸಂಖ್ಯೆ**	**ಬಡ್ಡಿ @6% (₹ ಕೋಟಿಗಳಲ್ಲಿ)**
ಆರ್.ಎ ಬಿಲ್–3	31.30	28–09–2015	915	**4.71**
ಪ್ಯಾಕೇಜ್–2				
ಕ್ರಮ ಸಂಖ್ಯೆ	**ಮೊತ್ತ**	**ಆರ್‌ಎ ಬಿಲ್ಲಿನ ದಿನಾಂಕ**	**ದಿನಗಳ ಸಂಖ್ಯೆ**	**ಬಡ್ಡಿ @6% (₹ ಕೋಟಿಗಳಲ್ಲಿ)**
ಆರ್.ಎ ಬಿಲ್–3	130.72	31–03–2015	604	12.98
ಆರ್.ಎ ಬಿಲ್ 5	28.56	05–02–2016	293	1.38
			ಒಟ್ಟು	**14.36**
ಪ್ಯಾಕೇಜ್–3				
ಕ್ರಮ ಸಂಖ್ಯೆ	**ಮೊತ್ತ**	**ಆರ್‌ಎ ಬಿಲ್ಲಿನ ದಿನಾಂಕ**	**ದಿನಗಳ ಸಂಖ್ಯೆ**	**ಬಡ್ಡಿ @6% (₹ ಕೋಟಿಗಳಲ್ಲಿ)**
ಆರ್.ಎ ಬಿಲ್ 3	14.39	31–03–2015	458	1.08
ಆರ್.ಎ ಬಿಲ್ 4	256.16	30–09–2015	275	11.58
ಆರ್.ಎ ಬಿಲ್ 5	50.52	30–09–2015	275	2.28
ಆರ್.ಎ ಬಿಲ್ 6	28.30	11–12–2015	203	0.94
ಆರ್.ಎ ಬಿಲ್ 8	0.149	26–04–2016	66	0.0016
			ಒಟ್ಟು	**15.88**
ಪ್ಯಾಕೇಜ್–4				
ಕ್ರಮ ಸಂಖ್ಯೆ	**ಮೊತ್ತ**	**ಆರ್ ಎ ಬಿಲ್ಲಿನ ದಿನಾಂಕ**	**ದಿನಗಳ ಸಂಖ್ಯೆ**	**ಬಡ್ಡಿ @6% (₹ ಕೋಟಿಗಳಲ್ಲಿ)**
ಆರ್.ಎ ಬಿಲ್ 4	54.53	16–03–2016	1284	**11.51**
ಪ್ಯಾಕೇಜ್–5				
ಕ್ರಮ ಸಂಖ್ಯೆ	**ಮೊತ್ತ**	**ಆರ್‌ಎ ಬಿಲ್ಲಿನ ದಿನಾಂಕ**	**ದಿನಗಳ ಸಂಖ್ಯೆ**	**ಬಡ್ಡಿ @6% (₹ ಕೋಟಿಗಳಲ್ಲಿ)**
ಆರ್.ಎ ಬಿಲ್ 5	12.64	05–10–2015	453	0.94
ಆರ್.ಎ ಬಿಲ್ 6	29.92	16–03–2016	290	1.43
			ಒಟ್ಟು	**2.37**
			ಒಟ್ಟು ಮೊತ್ತ	**48.83**

ಶಬ್ಧಕೋಶ

ಕ್ರಮ ಸಂಖ್ಯೆ	ಸಂಕ್ಷೇಪಣ	ಪೂರ್ಣ ರೂಪ
1	ಎಸಿಎಸ್	ಅಪರ ಮುಖ್ಯ ಕಾರ್ಯದರ್ಶಿ
2	ಬಿಜಿ	ಬ್ಯಾಂಕ್ ಗ್ಯಾರಂಟಿ
3	ಬಿಒಡಿ	ನಿರ್ದೇಶಕ ಮಂಡಳಿ
4	ಬಿಆರ್	ಸಮತೋಲನ ಜಲಾಶಯ
5	ಬಿಡಬ್ಲ್ಯುಎಸ್ಎಸ್ಬಿ	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
6	ಸಿಇ	ಮುಖ್ಯ ಅಭ್ಯಂತರರು
7	ಸಿಐಆರ್ಪಿ	ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆ
8	ಸಿಡಬ್ಲ್ಯುಸಿ	ಕೇಂದ್ರ ಜಲ ಆಯೋಗ
9	ಡಿಸಿ	ವಿತರಣಾ ಕೊಠಡಿಗಳು
10	ಡಿಪಿಆರ್	ಸವಿವರ ಯೋಜನಾ ವರದಿ
11	ಇಇ	ಕಾರ್ಯನಿರ್ವಾಹಕ ಅಭ್ಯಂತರರು
12	ಇಎಮ್ಡಿ	ಮುಂಗಡ ಹಣ ಠೇವಣಿ
13	ಇಆರ್ಸಿ	ಅಂದಾಜು ಸಮೀಕ್ಷಾ ಸಮಿತಿ
14	ಎಫ್ಡಿಆರ್	ನಿಶ್ಚಿತ ಠೇವಣಿ ರಸೀತಿ
15	ಎಫ್ಎಮ್ಸಿ	ಫೋರ್ಸ್ ಮಜೂರ್ ಷರತ್ತು
16	ಎಫ್ಎಸ್ಡಿ	ಮತ್ತಷ್ಟು ಭದ್ರತಾ ಠೇವಣಿ
17	ಜಿಸಿಸಿ	ಗುತ್ತಿಗೆಯ ಸಾಮಾನ್ಯ ಷರತ್ತುಗಳು
18	ಜಿಒಕೆ	ಕರ್ನಾಟಕ ಸರ್ಕಾರ
19	ಐಬಿಸಿ	ದಿವಾಳಿತನ ಮತ್ತು ದಿವಾಳಿತನ ಸಂಹಿತೆ
20	ಜೆವಿ	ಜಂಟಿ ಉದ್ಯಮ
21	ಕೆಇಸಿ	ಕಾಡುಮನೆ ಎಸ್ಟೇಟ್ ಕಂಪನಿ
22	ಕೆಇಆರ್ಸಿ	ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ
23	ಕೆಜಿಐಎಸ್	ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ
24	ಕೆಎನ್ಎನ್ಎಲ್	ಕರ್ನಾಟಕ ನೀರಾವರಿ ನಿಗಮ ನಿಯಮಿತ
25	ಕೆಪಿಸಿಎಲ್	ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ನಿಯಮಿತ
26	ಕೆಪಿಟಿಸಿಎಲ್	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
27	ಕೆಪಿಡಬ್ಲ್ಯುಡಿ	ಕರ್ನಾಟಕ ಲೋಕೋಪಯೋಗಿ ಇಲಾಖೆ
28	ಕೆಟಿಪಿಪಿ	ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ
29	ಕೆಯುಡಬ್ಲ್ಯುಎಸ್ಡಿಬಿ	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
30	ಎಮ್ಡಿ	ನಿರ್ವಾಹಕ ನಿರ್ದೇಶಕರು
31	ಎಮ್ಇಐಎಲ್	ಮೇಘಾ ಎಂಜಿನಿಯರಿಂಗ್ ಮತ್ತು ಮೂಲಸೌಕರ್ಯ ನಿಯಮಿತ
32	ಎಮ್ಐ	ಸಣ್ಣ ನೀರಾವರಿ
33	ಎಮ್ಎಮ್ಆರ್	ಮಾಸಿಕ ಬಹುಮಟ್ಟದ ಸಮೀಕ್ಷೆ
34	ಎಮ್ಎಸ್	ಮೈಲ್ಡ್ ಸ್ಟೀಲ್
35	ಎನ್ಸಿಎಲ್ಟಿ	ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ
36	ಎನ್ಜಿಟಿ	ರಾಷ್ಟ್ರೀಯ ಹಸಿರು ನ್ಯಾಯಮಂಡಳಿ

ಕ್ರಮ ಸಂಖ್ಯೆ	ಸಂಕ್ಷೇಪಣ	ಪೂರ್ಣ ರೂಪ
37	ಎನ್ಐಹೆಚ್	ರಾಷ್ಟ್ರೀಯ ಜಲವಿಜ್ಞಾನ ಸಂಸ್ಥೆ
38	ಒ&ಎಮ್	ಕಾರ್ಯಾಚರಣೆ ಮತ್ತು ನಿರ್ವಹಣೆ
39	ಪಿಎಫ್‌ಸಿ	ಪವರ್ ಫೈನಾನ್ಸ್ ಕಾರ್ಪೊರೇಷನ್
40	ಆರ್ಎ	ರನ್ನಿಂಗ್ ಅಕೌಂಟ್
41	ಆರ್‌ಸಿಸಿ	ಸಿಮೆಂಟ್
42	ಆರ್‌ಒಯು	ಬಳಕೆಯ ಹಕ್ಕು
43	ಆರ್‌ಇಸಿ	ಗ್ರಾಮೀಣ ವಿದ್ಯುಚ್ಛಕ್ತಿ ಕಂಪನಿ
44	ಆರ್‌ಡಬ್ಲ್ಯುಎಸ್	ಗ್ರಾಮೀಣ ನೀರು ಸರಬರಾಜು
45	ಎಸ್‌ಬಿಐ	ಭಾರತೀಯ ಸ್ಟೇಟ್ ಬ್ಯಾಂಕ್
46	ಎಸ್‌ಇ	ಅಧೀಕ್ಷಕ ಅಭ್ಯಂತರರು
47	ಎಸ್‌ಐಎ	ಸಾಮಾಜಿಕ ಪರಿಣಾಮದ ಮೌಲ್ಯಮಾಪನ
48	ಎಸ್‌ಆರ್	ದರಪಟ್ಟಿ
49	ಎಸ್‌ಡಬ್ಲ್ಯುಎಟಿ	ಮಣ್ಣು ಮತ್ತು ನೀರಿನ ಮೌಲ್ಯಮಾಪನ ಸಾಧನ
50	ಟಿಎಸ್‌ಸಿ	ಟೆಂಡರ್ ಮೌಲ್ಯಮಾಪನ ಸಮಿತಿ
51	ವಿಜೆಎನ್ಎಲ್	ವಿಶ್ವೇಶ್ವರಾಯ ಜಲ ನಿಗಮ ನಿಯಮಿತ
52	ಡಬ್ಲ್ಯುಆರ್‌ಡಿ	ಜಲ ಸಂಪನ್ಮೂಲ ಇಲಾಖೆ